ಕೊಡಬೇಕು. ಅವರು ಬೀಗಗಳನ್ನು ಅನಧಿಕೃತ ವ್ಯಕ್ತಿಗಳ ಕೈಗೆ ಕೊಡಬಾರದು. ಶಾಸಕರಿಗಿಂತ ಹೆಚ್ಚಾಗಿ ಶಾಸಕರಲ್ಲದ ಮೂರರಷ್ಟು ಜನ ಬೇರೆಯವರೆಲ್ಲಾ ಬಂದು ಅಲ್ಲಿ ವಾಸ ಮಾಡುವುದು ಇದೆ. ಮತ್ತು ರಾತ್ರಿ ಹೊತ್ತಿನಲ್ಲಿ ಆ ವೇಳೆಗಳಲ್ಲಿ ಬಂದುಹೋಗುವವರು ಇದ್ದಾರೆ. ಅಲ್ಲಿಯ ಕಾವಲು ಪಡೆ ಜತೆ ಅವರು ವಿಶ್ವಾಸ ಗಳಿಸಿಕೊಂಡಿರುತ್ತಾರೆ ಇಲ್ಲದಿದ್ದರೆ ಅವರನ್ನು ಬೆದರಿಸಿಹೋಗುವುದೂ ಇದೆ. ಈ ಎಲ್ಲಾ ಕಾರಣಗಳಿರುವುದರಿಂದ ಶಾಸಕರು ಸಹಾಯ ಮಾಡಬೇಕು. ನಾನೂ ಕೂಡ ಒಬ್ಬ ಶಾಸಕನಾಗಿರುವುದರಿಂದ ಶಾಸಕರ ಕಷ್ಟ ಏನು ಅಂತ ಗೊತ್ತಾಗುತ್ತದೆ. ನಮ್ಮ ಹಿಂದೇನೇ 8–10 ಜನ ಬರುತ್ತಾರೆ. ನಾವೇ ಸಚಿವರಿಗೆ ಈ ವಿಷಯ ತಿಳಿಸುತ್ತೇವೆ ಅಂದರೆ ಅವರು ನಮ್ಮನ್ನು ನಂಬುವುದಿಲ್ಲ ಅಂತ ನಾವೇ ಭಾವಿಸಿಕೊಂಡು ಬನ್ನಿ ನಿಮ್ಮನ್ನೆಲ್ಲಾ ಕರೆದುಕೊಂಡು ಹೋಗಿಬಿಡುತ್ತೇನೆ ಅಂತಹೇಳಿ ಅವರೆಲ್ಲಾ ಬರುತ್ತಾರೆ. ಕಾರಿಡಾರ್‌ಗಳಲ್ಲಿ ಅನಧಿಕೃತವಾಗಿ ಎಷ್ಟು ಜನ ಇರುತ್ತಾರೆ ನೋಡಬಹುದು. ಶಾಸಕರ ಅಥವಾ ಸಚಿವರ ಮಿತ್ರರೇ ಆಗಿರಲಿ ಅವರು ಶಾಂತಿಯಿಂದ ಕೆಲಸ ಮಾಡುವ ವಾತಾವರಣ ಇಲ್ಲಿ ಸೃಷ್ಟಿಯಾಗಿಲ್ಲ. ದೆಹಲಿಯಲ್ಲಿ ವ್ಯವಸ್ಥೆ ಬಹಳ ಚೆನ್ನಾಗಿದೆ. ಮಧ್ಯಾಹ್ನದ ನಿಗದಿತ ಸಮಯ ಒಂದು ಬಿಟ್ಟರೆ ಬೇರೆ ಸಂದರ್ಭಗಳಲ್ಲಿ ಒಳಗೆ ಬಿಡಲು ಕಟ್ಟುನಿಟ್ಟಿನ ಕ್ರಮಗಳಿವೆ. ಇಲ್ಲಿ ಅದೇ ರೀತಿಯ ಕ್ರಮಗಳನ್ನು ನಾವು ಕೈಗೊಳ್ಳಬೇಕು. ಅದಕ್ಕೆ ಅನೇಕ ಸಂದರ್ಭದಲ್ಲಿ ಆಕ್ಷೇಪಣೆ ಬಂದಿರುವುದು ಇದೆ. ನಮ್ಮ ಉದ್ಯೋಗಿಗಳಿಗೆಂದು ಪಂಚಿಂಗ್ ವ್ಯವಸ್ಥೆ ತಂದಿದ್ದೆವು. ಅದರಿಂದ ಅವರು ಯಾವ ಸಮಯಕ್ಕೆ ಬಂದರು ಯಾವ ಸಮಯಕ್ಕೆ ಹೋದರು ಎಂಬುದು ಗೊತ್ತಾಗುತ್ತದೆ. ಆಡಳಿತದಲ್ಲಿ ಬಿಗಿ ಬರುತ್ತದೆ. ನಮಗೂ ಗುರುತಿನ ಚೀಟಿ ಕೊಟ್ಟಿದ್ದರು, ಈಗಲೂ ಬಹಳ ಅಧಿಕಾರಿಗಳು ಹಾಕಿಕೊಳ್ಳುತ್ತಾರೆ, ಮಂತ್ರಿಗಳು ಶಾಸಕರು ನಾವು ಹಾಕಿಕೊಳ್ಳುವುದಿಲ್ಲ. ಯಾರಾದರೂ ಹೊಸಪೇದೆ ನಮ್ಮ ಮುಖ ಗೊತ್ತಿಲ್ಲ ದವನು ನಿಲ್ಲಿಸಿದರೆ ಅದು ನಮಗೆ ಅಪಮಾನ ಅಂತ ನಾವು ಭಾವಿಸಿಕೊಳ್ಳುತ್ತೇವೆ. ಅವನ ಕರ್ತವ್ಯ ಅವನು ಮಾಡುತ್ತಿದ್ದಾನೆ. ಆಯ್ತು, ನಾನು ಮಂತ್ರಿ, ನಾನು ಶಾಸಕ, ನಾನು ಇಂತಹ ಅಧ್ಯಕ್ಷ ಅಂತ ಹೇಳಿಕೊಂಡರೆ ಅದು ಅಪಮಾನವಲ್ಲ. ಹೀಗ ಚಿಕ್ಕಮಟ್ಟ ವಿಷಯಗಳಿಗೆ ತಾಳ್ಮೆ ಕಳೆದುಕೊಳ್ಳುವ ಪ್ರವೃತ್ತಿ ನಮ್ಮ ಜನರಲ್ಲಿ ಕೂಡ ಇದೆ. ಅವರ ಸಂರಕ್ಷಣೆ ದೃಷ್ಟಿಯಿಂದ ಸಂಪೂರ್ಣ ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಆ) ವಿಷಯ : ಮಂಗಳೂರು ನಗರ ಪಾಲಿಕೆಯಲ್ಲಿ ಮಹಿಳೆಯರಿಗೆ ಮೇಯರ್ ಹುದ್ದೆ ಕಾಯ್ದಿರಿಸುವ ಬಗ್ಗೆ.

ಶ್ರೀ ಕೆ. ಅಭಯಚಂದ್ರ : ಅಧ್ಯಕ್ಷರೇ, ಮಂಗಳೂರು ಸಿಟಿ ಕಾರ್ಪೋರೇಷನ್‌ನಲ್ಲಿ 4 ಸಲ ಜನರಲ್ ಕಟಗಿರಿಯಾಗಿ ಗಂಡಸರೇ ಮೇಯರ್ ಆಗಿದ್ದರು. ಈ ಸಲ ಲೇಡಿಸ್‌ಗೆ ಅದು ರಿಸರ್ವಾಗಿತ್ತು ಆದರೆ ಹೊಸ ಸರ್ಕಾರ ಬಂದ ಮೇಲೆ ಅದನ್ನು ಬದಲಾಯಿಸಿ ಮತ್ತೆ ಜನರಲ್ ಅಂತ ಮಾಡಿದ್ದಾರೆ. ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಇದು ಮಹಿಳಾ ವಿರೋಧಿ ಸರ್ಕಾರ. ಒಬ್ಬ ಮಹಿಳೆಯನ್ನು ಮಂತ್ರಿ ಮಾಡಲಿಲ್ಲ ಮಹಿಳೆಯರಿಗೆ ಯಾವುದೇ ರೀತಿಯ ಸೌಲಭ್ಯ ಕೊಡುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಭಯಚಂದ್ರರು ಎತ್ತಿದ್ದಕ್ಕೆ ಅನುಮಾನ ಪಡಬೇಕಾಗಿಲ್ಲ ಹೈಕೋರ್ಟ್ ಸಹ 2001ರ ಜನಗಣತಿ ಮೇರೆ ಆ ವಾರ್ಡ್‌ಗಳ ಪುನರ್ವಿಂಗಡಣೆ ಮತ್ತು ಮೀಸಲಾತಿ ವಿಷಯ ಹೇಳಿರುವುದರಿಂದ.......

ಶ್ರೀ ಎನ್.ಎಸ್. ಬೋಸರಾಜು : ಲೇಡಿಸ್‌ಗೆ ಅಂತ ಸೂಚನೆ ಕೊಟ್ಟಿದ್ದನ್ನು ಸಡನ್ನಾಗಿ ಮತ್ತೆ ಜನರಲ್ ಅಂತ ಮಾಡಿದ್ದಾರೆ, ಅಲ್ಲಿ ಚುನಾವಣೆ ನಡೆಯುತ್ತಾ ಇದೆ. ಆದ್ದರಿಂದ ಲೇಡಿಸ್‌ಗೆ ಅವಕಾಶ ಕೊಡಬೇಕು 4 ಟರ್ಮ್‌ನಿಂದಲೂ ಲೇಡಿ ಆಗಿರಲಿಲ್ಲ ಅಂತ ಹೇಳುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ನೀವು ಮಹಿಳೆಯರ ಪರವಾಗಿರುವವರು 4 ಸಲ ಹೇಗೆ ಗಂಡಸರನ್ನೇ ಮಾಡಿದಿರಿ?

(ಗೊಂದಲ)

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಅವರ ಕಳಕಳಿ ಏನೆಂದರೆ ಈಗಾಗಲೇ ಅದನ್ನು ಮಹಿಳೆಯರಿಗಾಗಿ ಅಂತ ನಿಗದಿ ಪಡಿಸಲಾಗಿದೆ. ಮಹಿಳೆಯರ ಬಗ್ಗೆ ಸರ್ಕಾರಕ್ಕೆ ಏನೂ ಕನಿಕರ ಇಲ್ಲವೇ? ಅದನ್ನು ತೆಗೆದು ಜೆಂಟ್ಸ್ ಮಾಡಿರುವುದು ತಪ್ಪು ಅನ್ನುತ್ತಿದ್ದಾರೆ, ಅದಕ್ಕೆ ಸ್ಪಷ್ಟ ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದು ಮಹಿಳೆಯರ ವಿರೋಧಿ ಸರ್ಕಾರ ಇವರಿಗೆ ನಿಜವಾದ ಅನುಕಂಪ ಇದ್ದಿದ್ದರೆ ಒಬ್ಬ ಮಹಿಳೆಯನ್ನು ಸಚಿವೆ ಮಾಡಬೇಕಾಗಿತ್ತು, ಮಾಡಲಿಲ್ಲ ಆದ್ದರಿಂದ ನಿಮ್ಮ ಮೇಲೆ ನಮಗೆ ನಂಬಿಕೆ ಹೊರಟು ಹೋಗಿದೆ. ಆದ್ದರಿಂದ ಆ ಕಡೆ ಈ ಕಡೆ ಇರುವ ಎಲ್ಲಾ ಮಹಿಳೆಯರು ನಮ್ಮ ಕಡೆ ಬರಬೇಕು ಅಂತ ತಮ್ಮ ಮೂಲಕ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಶ್ರೀಮತಿ ಭಾಗೀರಥಿಬಾಯಿ ಮರುಳಸಿದ್ಧನಗೌಡ : ಯಾಕೆ ನನ್ನನ್ನು ಮಾಜಿ ಸಚಿವೆ ಮಾಡುವುದಕ್ಕೆ ಎರಡೂ ಪಕ್ಷದವರಿಗೆ ಇಷ್ಟವಿಲ್ಲ ಅಂತ ಕಾಣುತ್ತೆ. ಸದನದಲ್ಲಿ ಮಹಿಳೆಯರು ಇದ್ದೇವೋ ಇಲ್ಲವೋ ಅಂತ ಅಪನಂಬಿಕೆ ನಮಗೇ ಸ್ಟಾರ್ಟಾಗಿಬಿಟ್ಟಿದೆ. ದಯವಿಟ್ಟು ತಾವು ಇದನ್ನು ಪರಿಗಣಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗತಾನೇ ಮಾನ್ಯ ಅಭಯಚಂದ್ರರು ಈ ವಿಷಯ ಎತ್ತಿದ್ದಾರೆ. ಮಹಿಳೆಯರ ಪರವಾಗಿ ವಾದ ಮಾಡುವುದು ಸರಿಯಾದದ್ದೇ. ಆಗಿರುವ ಲೋಪದೋಷವನ್ನು ಸರಿಪಡಿಸುತ್ತೇವೆ ಅಂತ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಅದೇನೇ ಇರಲಿ, ಇಲಾಖಾ ಕಾರ್ಯದರ್ಶಿಗಳ ಮತ್ತು ಮಂತ್ರಿಗಳ ಜತೆ ಪ್ರಸ್ತಾಪಿಸಿ ತೆಗೆದುಕೊಳ್ಳುವ ನಿರ್ಣಯವನ್ನು ನಾವು ಪ್ರಕಟಿಸುತ್ತೇವೆ.

5. ನಿಯಮ 69ರ ಮೇಲಿನ ಚರ್ಚೆ

ವಿಷಯ : 150 ಕೋಟಿ ಹಣ ಸಂಗ್ರಹ ಮಾಡಲಾಗಿದೆ ಎನ್ನಲಾದ ಗಣಿ ಹಗರಣದ ಬಗ್ಗೆ.

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ, ನಿನ್ನೆ ನಿಯಮ 69ರಡಿ ಚರ್ಚೆಯಾಗಬೇಕು ಅಂತ ಅಜೆಂಡಾದಲ್ಲಿತ್ತು, ನಾವೆಲ್ಲಾ ಪ್ರತಿಭಟಿಸಿದೆವು, ಆ ಕಾಲದಲ್ಲಿ ತಮ್ಮ ಮನಸ್ಸಿಗೆ ಕೂಡ ಅಸಮಾಧಾನವಾಗಿದೆ. ತಮ್ಮ ಪೀಠಕ್ಕೆ ನಮ್ಮಿಂದ ಅಗೌರವ ಕೊಡುವುದು ಅಲ್ಲ, ಇವತ್ತು ವಿರೋಧ ಪಕ್ಷದ ಸಾಲಿನಲ್ಲಿ ಕೂತು ಜನಾಭಿಪ್ರಾಯದ ಮೇರೆಗೆ ಪ್ರಸ್ತಾಪ ಮಾಡುವುದು ನಮ್ಮ ಹಕ್ಕಿದೆ. ತಾವು ಮೊನ್ನೆ ಕೂಡ ಹೇಳಿದಿರಿ, ಇದು ನಿಲುವಳಿ ಸೂಚನೆ ಮೂಲಕ ಅಲ್ಲ 69ರಲ್ಲಿ ಚರ್ಚೆಯಾಗಬೇಕು ಅಂತ. ಈ ದಿವಸ ಕೂಡ ಪ್ರಶ್ನೋತ್ತರ ತೆಗೆದುಕೊಂಡಿದ್ದಿರಿ, ನಾವೂ ಶ್ರೀರಾಮರೆಡ್ಡಿ ಕೂಡಿ ಬಂದು ಹೇಳಿದೆವು, ಇಲ್ಲ ಇದರ ಬಗ್ಗೇನೆ ಚರ್ಚೆಯಾಗಬೇಕು, ಒಂದು ಗಂಟೆಯೊಳಗಾಗಿ ಉತ್ತರವಾಗಬೇಕು ಅಂತ. ಈಗಾಗಲೇ ಮುಖ್ಯಮಂತ್ರಿಗಳು ಹೇಳಿದ್ದಾರೆ, ನಾಳೆ ಉತ್ತರ ಕೊಡುತ್ತೇನೆ ಅಂತ. ಈ ಪ್ರಸ್ತಾಪದ ಮೇಲೆ ಶ್ರೀ ಮಾಧುಸ್ವಾಮಿ, ಶ್ರೀರಾಮರೆಡ್ಡಿ ವಾಟಾಳ್ ನಾಗರಾಜ್, ರಾಜೇಂದ್ರನ್‌ರವರು ಮಾತನಾಡಿದ್ದಾರೆ. ಈ ಸಾಲಿನಿಂದ ಡಿ.ಕೆ. ಶಿವಕುಮಾರ್, ರಮೇಶ್‌ಕುಮಾರ್ ದೇಶಪಾಂಡೆಯವರೆಲ್ಲಾ ಮಾತನಾಡಿದ್ದಾರೆ. ನಾವೇ ಸ್ವತಃ ವಿರೋಧ ಪಕ್ಷದಲ್ಲಿದ್ದರೂ 150 ಕೋಟಿ ರೂ.ಗಳ ಆಪಾದನೆ ಮಾಡಲು ನಾವು ಹೋಗಿಲ್ಲ. ಸತತವಾಗಿ 10 ದಿನಗಳ ಕಾಲ ಏನು ಪತ್ರಿಕೆಯಲ್ಲಿ ಬಂದಿದೆ ಅದರ ಬಗ್ಗೆ ಹೇಳುತ್ತಿದ್ದೇವೆ. ಈ ರಾಜ್ಯದಲ್ಲಿ ಎಂ.ಪಿ. ಪ್ರಕಾಶ್, ಹಾಗೂ ಯಡಿಯೂರಪ್ಪನವರು ಬಹಳ ಹಿರಿಯ ಸದಸ್ಯರಾಗಿದ್ದೀರಿ, ವಿರೋಧ ಪಕ್ಷದಲ್ಲಿ ಕೂತು ತಾವು ಮಾತನಾಡಿದ್ದೀರಿ. ಇವತ್ತು ಇಂತಹ ಒಂದು ಆರೋಪ ಬಂದ

ಮೇಲೆ ಪ್ರಸ್ತಾಪ ಮಾಡುತ್ತಿದ್ದೇವೆ ಹೊರಗಡೆ. ಇವತ್ತು ಸರ್ಕಾರದಿಂದ ಗಂಭೀರವಾದಂತಹ ಆರೋಪ ರಾಜ್ಯದ ಮುಖ್ಯಮಂತ್ರಿ ಮೇಲೆ ಬಂದಿದೆ. ಇವತ್ತು ಆರೋಪ ಮಾಡಿದಂತಹ ಆಪಾದನೆಗೆ ನಾಳೆ ಉತ್ತರ ಕೊಡುತ್ತೇವೆ, ನಾಳೆ ಮಾಡುತ್ತೇವೆ ಎನ್ನತಕ್ಕ ರೀತಿಯಲ್ಲಿ ಹಾಗೆಯೇ ಮಾಡುತ್ತಿದ್ದೀರಿ. ಇವತ್ತು ದಾಖಲೆ ಕೊಡತಕ್ಕದ್ದು ಇಲ್ಲ. ದಾಖಲೆ ಏನು ಅಂದರೆ ಈ ದಿನ ಜನಾರ್ಧನ ರೆಡ್ಡಿಯವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಬಿಜೆಪಿಯ ಮಿತ್ರ ಪಕ್ಷದ ಅಲ್ಲಿ ಅಧ್ಯಕ್ಷರಾಗಿದ್ದಾರೆ. ಇವತ್ತು ಬಹಳಷ್ಟು ಸಲ ಪದೇ ಪದೇ ಹೇಳಿದ್ದಾರೆ. 150 ಕೋಟಿ ರೂಪಾಯಿ ಗಣಿಗಾರಿಕೆಯಲ್ಲಿ ಏನು ಮುಖ್ಯಮಂತ್ರಿಗಳ ಮೇಲೆ ಆರೋಪ ಹೊರಿಸಿದ್ದಾರೆ? ಮಾನ್ಯ ಅರಣ್ಯ ಮಂತ್ರಿಗಳ ಮೇಲೆ ಏನು ಕೂಡ ಆರೋಪ ಹೊರಿಸಿದ್ದಾರೆ? ಇದರ ಬಗ್ಗೆ ಸರ್ಕಾರ ನಡೆಸತಕ್ಕ ಕಾಲದಲ್ಲಿ ತಾವೆಲ್ಲಾ ಜವಾಬ್ದಾರಿಯುತವಾಗಿ ಇದರ ಬಗ್ಗೆ ಹೇಳಿಕೆ ಕೊಡಬೇಕು. ಮಾನ್ಯ ಪ್ರಕಾಶ್‌ನವರಿಗೆ ಗೊತ್ತು. ಮಾನ್ಯ ಯಡಿಯೂರಪ್ಪನವರು ಮೊನ್ನೆಯಿಂದಲ್ಲ 1985ರಿಂದ ವಿರೋಧ ಪಕ್ಷದ ನಾಯಕರಾಗಿದ್ದಾರೆ. ತಾವು ಮೊದಲು ಕೂಡ ಇದ್ದಿರಿ. ಈ ರಾಜ್ಯದಲ್ಲಿ ಸಾಕಷ್ಟು ಘಟನೆಗಳು ನಡೆದಿವೆ. 1983ರಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಟೇಪ್‌ಹಗರಣದಲ್ಲಿ ಬಂದಾಗ ಸಾಬೀತು ಮಾಡತಕ್ಕದ್ದು ಆಗಲಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದರು. ವಿರೋಧ ಪಕ್ಷದಿಂದ ರಾಜೀನಾಮೆ ಕೊಡಬೇಕು ಎಂಬ ಒತ್ತಾಯ ಬಂತು. ಇದು ಕಾಂಗ್ರೆಸ್ ಪಕ್ಷಕ್ಕೆ ಧೈರ್ಯ ಇದೆ. ಕಾಂಗ್ರೆಸ್ ಪಕ್ಷವೇ ದೇಶದಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕಂಥ ಶಕ್ತಿ ಇದೆ. ಮಾನ್ಯ ವೀರಪ್ಪ ಮೊಯಿಲಿಯವರು ಈ ರಾಜ್ಯಕ್ಕೆ ಮತ್ತೆ ಮುಖ್ಯಮಂತ್ರಿಗಳಾದರು. ಏನೂ ಸಾಬೀತಾಗಲಿಲ್ಲ. ಮಾನ್ಯ ಬಂಗಾರಪ್ಪನವರೂ ಕೂಡ ವಿರೋಧ ಪಕ್ಷದ ನಾಯಕರಾಗಿದ್ದರು. ಸೊರಬ ಭೂ ಹಗರಣದ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಏನಿತ್ತು ದಾಖಲೆ? ಕಡೆಗೆ ಏನೂ ಸಾಬೀತಾಗಲಿಲ್ಲ. ಈ ರಾಜ್ಯದ ಮುಖ್ಯಮಂತ್ರಿಯಾಗಿ ಬಹಳಷ್ಟು ಕೂಡ ಪರಿಣಾಮಕಾರಿಯಾದಂತಹ ಸಾಮಾನ್ಯ ಜನರ ಬಗ್ಗೆ ಕೆಲಸ ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಮೇಲೆ ಟೇಪ್ ಹಗರಣ ಆಯಿತು. ರಾಜೀನಾಮೆ ಕೊಟ್ಟರು. ಮಾನ್ಯ ಬೊಮ್ಮಾಯಿಯವರು ಬಂದರು. ಇವತ್ತು ಬಹಳಷ್ಟು ಸಲ ಇಂತಹ ಒಂದು ಸನ್ನಿವೇಶ ಬಂದಿದೆ. ಇವತ್ತು ಸಮ್ಮಿಶ್ರ ಸರ್ಕಾರ ಸಿದ್ಧಾಂತ, ನೈತಿಕತೆ ಎಲ್ಲವನ್ನೂ ಹೇಳುತ್ತಿದೆ. ಬಹಳ ಹೋರಾಟ ಮಾಡಿ ಇವತ್ತು ರಾಜಕೀಯ ಶಕ್ತಿ ಅವರ ಕೈಯಲ್ಲಿ ಸಿಕ್ಕಿದೆ. ಅವರು ಬಿಡಲಿಕ್ಕೆ ತಯಾರಿಲ್ಲ. ನಿನ್ನೆ ಜೆಎಲ್‌ಪಿ ಮೀಟಿಂಗ್‌ನಲ್ಲಿ ಇದರ ಬಗ್ಗೆ ಚರ್ಚೆ ಆಗುತ್ತದೆ, ಅಧ್ಯಕ್ಷರೆ, ಶಾಸಕಾಂಗ ಪಕ್ಷದಲ್ಲಿ ಏನೊಂದು ನಿರ್ಣಯ ಆಯಿತು. ಹೊರಗಡೆ ಬಂದು ಹೇಳುತ್ತಾರೆ. ನಾವು ಎಲ್ಲಾ ಕಡೆ

ಏನೂ ಭಿನ್ನಾಭಿಪ್ರಾಯ ಇಲ್ಲ. ನಾವು ಒಂದಾಗಿದ್ದೇವೆ. ಅಂತ ಸಮ್ಮಿಶ್ರ ಸರ್ಕಾರ 20 ತಿಂಗಳು ಯಾವ ರೀತಿಯಾಗಿ ಧರ್ಮಸಿಂಗ್ ಅವರು ನಡೆಸಿದ್ದಾರೆ, ಅದನ್ನು ತಾವು ಕಲಿಯಬೇಕು. 27ನೇ ತಾರೀಖು ರಾಜಭವನಕ್ಕೆ ಹೋಗತಕ್ಕಂಥ ಸಮಯದಲ್ಲಿ ಹೇಳಿದೆ. ನಮ್ಮ ಸರ್ಕಾರ ಭದ್ರವಾಗಿದೆ ಎಂತಲೇ ನಾನು ಹೇಳಿದ್ದೆ. ಅದೇ ರೀತಿ ನೀವು ಹೇಳುತ್ತಿದ್ದೀರಿ. 27ನೇ ತಾರೀಖು ರಾಜಭವನಕ್ಕೆ ಹೋಗುವಾಗ ಪತ್ರಕರ್ತರು ಏನು ಸಾರ್ ರಾಜೀನಾಮೆ ಕೊಡುತ್ತೀರಾ ಎಂದು ಹೇಳಿದರು. ಏಕೆ ರಾಜೀನಾಮೆ ಕೊಡುವುದು? ಸರ್ಕಾರ ಭದ್ರವಾಗಿದೆಯಲ್ಲಾ ಎಂದು ಹೇಳಿದೆ. That is the beauty. The coalition Government requires that philosophical bent of mind. ಸುಮ್ಮನೆ ನೀವು ಹೋಗಿ ಅಧಿಕಾರಕ್ಕೆ ಕುಳಿತು ಎಲ್ಲಾ ಒಂದಾಗಿ ಬಿಟ್ಟಿದ್ದೇವೆಂದರೆ ಆಗುವುದಿಲ್ಲ. ನಾವು ಏನು ಹೇಳಿದ್ದೇವೆ? ಆರೋಪ ನೀವು ಮಾಡಿದ್ದೀ ನಾವು ಮಾಡಿಲ್ಲ. ನಾವು ಆರೋಪ ಮಾಡಿದರೆ ನಿನ್ನೆ ಮಾತನಾಡತಕ್ಕಂಥ ಕಾಲದಲ್ಲಿ ಮಾನ್ಯ ಶಿವಕುಮಾರ್ ದಾಖಲೆ ಇದೆ ಎಂದಾಗ. ನಮ್ಮ ಮಾನ್ಯ ಬಾಲಕೃಷ್ಣ ಅವರು ಹೇಳಿದರು ಎಲ್ಲಿರಿ ನಿಮ್ಮಲ್ಲಿ ದಾಖಲೆ ಎಂದರು? ನಾವು ದಾಖಲೆ ತೆಗೆದುಕೊಂಡು ಬರೋಣವಾ? ದಾಖಲೆ ಏನಾಗಿದೆ? ಯಾರ ಮೇಲೆ ನಾವು ಆರೋಪ ಮಾಡಿದ್ದೇವೆ ಅದು ಇಲ್ಲಿಯವರೆಗೆ ಬರುತ್ತಿತ್ತು. ಒಬ್ಬ ರಾಜ್ಯದ ಮುಖ್ಯಮಂತ್ರಿಯಾಗಿ ಇವತ್ತು ಬಳ್ಳಾರಿಯಿಂದ ದಾಖಲೆ ತರಿಸಲಿಕ್ಕೆ ನಿಮಗೆ ಆಗುವುದಿಲ್ಲ. ಕ್ರಿಮಿನಲ್ ಕೇಸ್ ದರ್ಜೆ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮ ಅಂಗ ಪಕ್ಷವಾಗಿ ಆತನ ಮೇಲೆ ನಿಮಗೆ ಹತೋಟಿ ಇಲ್ಲ. ಮಾನ್ಯ ಸದಾನಂದಗೌಡರು ಏನು ಮಾಡುತ್ತಿದ್ದಾರೆ? ಪಕ್ಷದ ಅಧ್ಯಕ್ಷರಾಗಿದ್ದಾರೆ. ಮೈತ್ರಿ ಸರ್ಕಾರ ನಡೆಯಬೇಕಾಗಿದೆ, ಭಿನ್ನಾಭಿಪ್ರಾಯ ಇಲ್ಲ. ನಾವು ಕಾಂಗ್ರೆಸ್ ಪಕ್ಷದ ಜನರಿಗೆ ವಿರೋಧ ಪಕ್ಷದ ಸಾಲಿನಲ್ಲಿ ಕೊಡಿಸಿದ್ದೇವೆ. ಇದು ಜನ ನೋಡುತ್ತಿದ್ದಾರೆ, ಅನ್ನುತ್ತೀರಿ ನನಗೇನು ಅನಿಸಿತು ಅಧ್ಯಕ್ಷರೇ, ನಾವು ಸೆಕ್ಯುಲರ್ ಫೋರ್ಸ್‌ಸ್ ಒಂದಾಗಿ ಎಂದು ಅವರ ಮೇಲೆ ವಿಶ್ವಾಸ ಮಾಡಿಕೊಳ್ಳುತ್ತಾ ಹೋದೆವು. ಇದೇನೂ ಆಗಲಿಕ್ಕಿಲ್ಲ ಎಂದು ಅಂದು ಕೊಂಡೆವು. ಬಿಜೆಪಿ ಎಮೋಷನಲ್ ಪಾರ್ಟಿ. ಯಾವಾಗಲೂ ಕೂಡ ಸಿದ್ಧಾಂತಕ್ಕೆ ಮಾರಿ ಹೋಗತಕ್ಕವರಲ್ಲ ಎಂಬುದು ನಮ್ಮ ಭರವಸೆ ಪಾಪ. ನಮ್ಮ ರೇವು ನಾಯಕ್ ಅವರು ಮಂತ್ರಿಗಳಾಗಿದ್ದಾರೆ ಎಂಬುದು ನಮಗೆ ಖುಷಿ ಇದೆ. ನಾವು, ಮಾನ್ಯ ಖರ್ಗೆಯವರು ಹೇಳಿದರು. ನಾವು ಆದ ಮೇಲೆ ಮಾನ್ಯ ರೇವು ನಾಯಕ್ ಅವರು ಮಂತ್ರಿಯಾಗಿದ್ದಾರೆ. ನಾವು ಹೇಳತಕ್ಕ ತಾತ್ಪರ್ಯ ಇಷ್ಟೇ. ಸರ್ಕಾರ ನಡೆಸತಕ್ಕ ಕಾಲದಲ್ಲಿ, ನಿಮ್ಮ ಮೈತ್ರಿ ಸರ್ಕಾರದ ಗೌರವವನ್ನು ಉಳಿಸತಕ್ಕಂಥಾದ್ದು ನಿಮ್ಮ ಆದ್ಯ ಕರ್ತವ್ಯ ಇದೆ. ಇವತ್ತು ತಾವು ಅದನ್ನು ಮಾಡುತ್ತಿಲ್ಲ. ಇವತ್ತು ಗಣಿ ಬಗ್ಗೆ ಚರ್ಚೆ ಆಯಿತು. ಮಾನ್ಯ

ಮಾಧುಸ್ವಾಮಿಯವರು ಹೇಳಿದರು. ಅದು ಹೇಳಿದರು, ಅದಕ್ಕೇನೂ ಇಲ್ಲ. ಈಗ ನೀವು ಏನೆಂದರೆ ಮೈನ್ಸ್ ಬಗ್ಗೆ ಚರ್ಚೆ ಆಗಬೇಕಾದರೆ ಒಂದು ಹತ್ತು ದಿನಗಳು ಬೇಕು. ಯಾರ ಕಾಲದಲ್ಲಿ ಏನಾಯಿತು? ಯಾರಿಗೆ ಏನು ಕೊಟ್ಟರು? ಯಾವ ಕಾಲದಲ್ಲಿ ಏನು ಮಾಡಿದ್ದರು? ಅದು ಬೇರೆ ಇಶ್ಯೂ. ನಮ್ಮ ಮುಂದೆ ಇರತಕ್ಕದ್ದು ಏನು ಎಂದರೆ ಮಾನ್ಯ ಜನಾರ್ಧನ ರೆಡ್ಡಿಯವರು 150 ಕೋಟಿ ರೂಪಾಯಿ ಪಡೆದಿದ್ದಾರೆ ಎಂದು ಹೇಳಿರುವುದು. ಏಕೆಂದರೆ ಪತ್ರಕರ್ತರೂ ಕೂಡ ಇದ್ದರು. ಇದೇನಾಗುತ್ತಿದೆ ಎಂದರು. ಬೇಡಿಕೆ ಮೇಲೆ ಚರ್ಚೆ ಆಗಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಬೇಡಿಕೆಯ ಮೇಲೆ ಚರ್ಚೆ ಮಾಡಲು ಯಾರು ಮಾಡಿಗೊಡಿಸುತ್ತಿಲ್ಲ? ಇವತ್ತು ಸದನ 19ನೇ ತಾರೀಖು ಪ್ರಾರಂಭವಾಯಿತು. ಎಲೆಕ್ಷನ್ ಕಮೀಷನ್ ಎದುರುಗಡೆ ಹೋದೆವು. 24 ಎಕರೆ ಜಮೀನು ಎಂದು ಹೇಳಿದರು. ಬೇರೆ ಪತ್ರಿಕೆಯಲ್ಲಿ 40 ಎಕರೆ ಎಂದು ಬಂತು. ಅದು ಬಹಳ ದೂರದ ವಿಷಯ, ತಮಗೆ ಗೊತ್ತಿರಬಹುದು ನಾನು ಹೇಳಿದ್ದೇನೆ. ಉಮಾ ಭಾರತಿಯವರು ಇದೇ ತರಹದ ಸುಳ್ಳು ದಾಖಲಾತಿ ಮಾಡಿ ಎರಡು ವರ್ಷಗಳ ಕಾಲ ಮಧ್ಯ ಪ್ರದೇಶದ ಮುಖ್ಯಮಂತ್ರಿಗಳಾಗಿದ್ದರು. 18ನೇ ಆಗಸ್ಟ್ ನಾನ್ ಬೇಲಬಲ್ ವಾರೆಂಟ್ ಬಂದಾಗ ನಾನು ಹೋಮ್ ಸೆಕ್ರೆಟರಿಯವರನ್ನು ಕರೆದು ಇದು ಏನೆಂದು ಕೇಳಿದೆ. ನಾನ್ ಬೇಲಬಲ್ ವಾರೆಂಟ್ ಇದೆ. ಅಂದರು ಎಲೆಕ್ಷನ್ ಕಮೀಷನ್‌ಗೆ ನಾನು ಪತ್ರ ದಾಖಲೆ ಮಾಡಬೇಕಾದರೆ ಏನು ಹೇಳಬೇಕಾಗುತ್ತದೆ? ನನ್ನ ಮೇಲೆ ಯಾವುದೇ ತರಹದ ಕ್ರಿಮಿನಲ್ ಮೊಕದ್ದಮೆ ಇಲ್ಲ. ಯಾವುದು ನೈತಿಕತೆ ಮಾತನಾಡತಕ್ಕ ಜನ ರಾಮನ ಹೆಸರಿನಲ್ಲಿ ಅಯೋಧ್ಯೆ ಹೆಸರಿನಲ್ಲಿ ಈ ದೇಶದಲ್ಲಿರತಕ್ಕಂಥ ಸಾಮಾಜಿಕ, ಆರ್ಥಿಕ ಕಾರ್ಯಕ್ರಮಗಳನ್ನು ಬಿಟ್ಟು ಕೇವಲ ಭಾವನೆಗಳನ್ನು ಕೆರಳಿಸಿ, ಶೋಷಣೆ ಮಾಡಿ ಅಧಿಕಾರ ಮಾಡತಕ್ಕಂಥ ಜನ. ಅಲ್ಲಿಯತನಕ ಹೈಕಮ್ಯಾಂಡ್‌ಗೆ ಗೊತ್ತಾಯಿತು. ಕರೆಕ್ಟಾಗಿದೆ. ಯಾರ ಕಾಲದಲ್ಲಿ? 28 ಸಲ ನಾವು ನಮ್ಮ ಪೋಲೀಸ್ ಆಫೀಸರ್ಸ್ ಅವರನ್ನು ಕಳುಹಿಸಿದ್ದೆವು. ಅವರು ಸಮನ್ಸ್ ತೆಗೆದುಕೊಳ್ಳಲು ರೆಫ್ಯೂಸ್ ಮಾಡಿದ್ದರು. ಕೊನೆಗೆ ನಾನು ಏಕೆ ಸಮನ್ಸ್ ತೆಗೆದುಕೊಳ್ಳಲಿಲ್ಲ ಎಂದು ನಾವು ಹೇಳಿದ ಮೇಲೆ ಸಮನ್ಸ್ ತೆಗೆದುಕೊಂಡು ಬಂದರು. ಯಾತ್ರೆ ಆಯಿತು. ಮಾನ್ಯ ಯಡಿಯೂರಪ್ಪನವರು, ಮಾನ್ಯ ಅನಂತ್ ಕುಮಾರ್ ಅವರು ಹೋದರು. ನಾವು ಹೇಳಿದೆವು. ಅವರು ಬರಲಿ ಅಂತ ಎಲ್ಲಾ ಕಡೆಗೆ ಕೆಲವು ಪಕ್ಷಗಳು ದೇಶದಲ್ಲಿವೆ. They want to create a problem. ಏನಾದರೂ ಮಾಡಿ ಗಲಾಟೆ ಎಬ್ಬಿಸತಕ್ಕ ಕೆಲವು ಪಕ್ಷಗಳು ಇವೆ. ಅದೆಲ್ಲವೂ ಕೂಡ ಆಗಿದೆ. ಇವತ್ತು ಒಂದು ಸಂತೋಷ ಇದೆ. ಅವರು ಮಾನ್ಯ ಉಪ ಮುಖ್ಯಮಂತ್ರಿಗಳಾಗಿ ನಮ್ಮ ಸ್ನೇಹಿತರು ಇದ್ದಾರೆ. ಇಲ್ಲಿ ವಿರೋಧ ಪಕ್ಷದ

ನಾಯಕರಾಗಿ ಕೆಲಸ ಮಾಡಿದ್ದಾರೆ. ಇಂತಹ ಪ್ರಸಂಗ ಬಂದಾಗ ಒಂದು ದಿವಸ ಅವರು ಸೀಟಿನ ಮೇಲೆ ಕುಳಿತಿಲ್ಲ, ತಾವು ನೋಡಿರಬೇಕು. ಎದ್ದೆದ್ದು ಹೊರಗಡೆ ಹೋಗುವುದು. ಯಾವ ಸರ್ಕಾರ ಭ್ರಷ್ಟ ಸರ್ಕಾರ, ಇದೆಲ್ಲಾ ಹೇಳಿದಂತಹವರು ಇವತ್ತಿನ ದಿವಸ ಉಪ ಮುಖ್ಯಮಂತ್ರಿಗಳಾಗಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ : ನೀವು ದಿನಾ ಬಾವಿಗೆ ಬೀಳುವುದಕ್ಕೆ ಹತ್ತಿದ್ದೀರಲ್ಲಾ.

ಶ್ರೀ ಎನ್. ಧರ್ಮಸಿಂಗ್ : ಸುಮ್ಮನೆ ಕೂಡಿರಿ. ನೀವು ಏಕೆ ಮೇಲಿಂದ ಮೇಲೆ ಎದ್ದು ಮಾತನಾಡುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ : ನಾವು ಹೊರಗಡೆ ಹೋಗುತ್ತೇವೆಂದು ಹೇಳಿದಿರಲ್ಲಾ, ಅದಕ್ಕಾಗಿ ಹೇಳಿದೆ.

ಶ್ರೀ ಎನ್. ಧರ್ಮಸಿಂಗ್ : ಇದೆಲ್ಲಾ ಆಯಿತು. ಇದೆಲ್ಲಾ ಆದಮೇಲೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಅವರು ಇದ್ದರಲ್ಲಾ, ಆಗ ವ್ಯವಸ್ಥೆ ಸ್ವಲ್ಪ ಬೇರೆ ತರಹ ಇತ್ತು. ಈಗ ಅವರು ಯಡಿಯೂರಪ್ಪನವರು ಅಲ್ಲ. ತಾವು ಸ್ವಲ್ಪ ಸರಿಯಾಗಿ ನೋಡಬೇಕು. ಹೇಗೆ ಕುಳಿತಿದ್ದಾರೆ ನೋಡಿ? ಏನಾದರೂ ಮಾತನಾಡುತ್ತಿದ್ದಾರಾ? ಖಂಡಿತ ಮಾತನಾಡುತ್ತಿಲ್ಲ.

ಶ್ರೀ ಎನ್. ಧರ್ಮಸಿಂಗ್ : ಕೊಯಲಿಷನ್ ಗವರ್ನಮೆಂಟ್ ಬಂದಿದೆ. ಕೊಯಲಿಷನ್ ಗವರ್ನಮೆಂಟ್ ಬಂದ ಮೇಲೆ ಪ್ರಾರಂಭ ಆಯಿತು. ಇವತ್ತು ಅವರೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನೈಸ್ ಹಗರಣದಲ್ಲಿ ಒಬ್ಬ ಮಂತ್ರಿ ಬಂದಿದ್ದರು, ಪತ್ರಕರ್ತರು ಇದ್ದರು ಅಂತ ನಾವು ಹೇಳು ಎಂದು ಹೇಳಿದ್ದೇವಾ? ಎರಡು ದಿನ ಕಾಲಹರಣ ಆಯಿತು. ಎರಡು ದಿನಗಳ ಕಾಲ ಕಾಲಹರಣ ಆಯಿತು? ನೀವು ಮೇಲಿಂದ ಮೇಲೆ ಏನು ಹೇಳುತ್ತೀರಿ? ಜನ ನೋಡುತ್ತಿದ್ದಾರೆ. ಬೇಡಿಕೆಯ ಮೇಲೆ ಚರ್ಚೆ ಆಗುತ್ತಿಲ್ಲ ಅಂತ. ಆಗತಕ್ಕಂಥ ವಿಷಯಗಳು ಪ್ರಸ್ತಾಪ ಮಾಡಲಾರದೇ ನಾವು ಮನೆಗೆ ಹೋಗಬೇಕಾ? ಜನರ ಮನಸ್ಸಿನಲ್ಲಿರತಕ್ಕಂಥ ಅಭಿಪ್ರಾಯಗಳನ್ನು ನಾವು ವ್ಯಕ್ತ ಮಾಡಬಾರದಾ? ಅವಾಗ ನಾನು ಹೇಳಿಲ್ಲ ಎಂದು ಹೇಳಿದರು. ನೈಸ್ ಹಗರಣ 11 ವರ್ಷಗಳ ಕರ್ಮಕಾಂಡ ಎಂದು ಅವರೇ ಹೇಳಿದರು. ಎಲ್ಲಾ ತಂದು ನಾಲ್ಕು ಗಂಟೆಗಳ ಕಾಲ ಪ್ರಸ್ತಾಪ ಮಾಡಿದ್ದಾರೆ, ಮಾತನಾಡಿದ್ದಾರೆ. ಕೆಲವು ಪತ್ರಿಕೆಗಳು ಬರೆದಿದೆ. ವಿ.ಕೆ. ಕೃಷ್ಣ ಮೆನನ್ ಒಂದು ತರಹ ಹೇಳಿದ್ದಾರೆ ಅಂತ. ಇವತ್ತು ಜನರ ಅಭಿಪ್ರಾಯ ಇದ್ದರೆ ಅದಕ್ಕೆ ಇರಲಿ, ಈಗ ನಾವೇನು ಹೇಳುತ್ತೇವೆ ಎಂದರೆ ಅವರ ಪ್ರತಿಭೆಗೆ ಬೇರೆ ಕಡೆಗೆ ಮಾಡತಕ್ಕಂಥ ಕೆಲಸ ಇಲ್ಲ. ಇವತ್ತು ನೈಸ್ ಬಗ್ಗೆ ಮಾತನಾಡಿದ್ದೀರಿ. ಉತ್ತರ ಕೊಟ್ಟಿದ್ದಾರೆ. ನಾವಾಗಲೀ ಮಾನ್ಯ ಖರ್ಗೆಯವರಾಗಲೀ, ಮಾನ್ಯ ದೇಶಪಾಂಡೆಯವರಾಗಲೀ,

ಯಾರೂ ಒಪ್ಪಲಿಲ್ಲ. ನಾವು ಹೇಳಿದೆ ಇಷ್ಟು ಕೋಟಿ ರೂಪಾಯಿ ಹಗರಣ 1995ರಿಂದ ನಡೆಯುತ್ತಿದೆ; ಫ್ರೇಮ್ ವರ್ಕ್ ಅಗ್ರಿಮೆಂಟ್ ಏನಾಯಿತು? ಯಾರ ಕಾಲದಲ್ಲಿ ಆಯಿತು? 20,193 ಎಕರೆಗಳಷ್ಟು ಜಮೀನು ಕೊಟ್ಟಿರುವ ರೈತರ ನೆನಪು ನಿಮಗೆ ಬರಲಿಲ್ಲವೇ? ಈಗ ಬಂತೇ? ಬಂದ ನಂತರ ಏನಾಯಿತು? ಹೈಕೋರ್ಟ್ ಛೀಮಾರಿ ಹಾಕಿದೆ, ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ನಂತರ ಸದನದಲ್ಲಿ ಮಾತನಾಡುವುದಾದರೂ ಏನಿದೆ? They wanted to take over the project. ಯಾರ ಮೇಲೂ ನೇರವಾಗಿ ಆರೋಪ ಮಾಡತಕ್ಕಂಥಾದ್ದು ನಮ್ಮ ಪ್ರವೃತ್ತಿಯಲ್ಲ. ದುಬೈಗೆ ಹೋಗುವ ಕಾಲದಲ್ಲಿ ತಾವು ಏನು ಹೇಳಿದಿರಿ? ನನಗೆ ಏನೇನು ಕಾನೂನುಗಳು ಗೊತ್ತಿದೆಯೋ, I will face all the legal problems. ನಾನು ತಂದೇ ತೀರುತ್ತೇನೆಂದು ಹೇಳಿದಿರಿ. ಸಂಪುಟದಲ್ಲಿ ಏನಾಯಿತು? ನಾವು ಕೂಡ ತಾಳ್ಮೆಯಿಂದ ಇದ್ದೆವು. ದಿಲ್ಲಿಗೆ ಹೋದಾಗ ಹೇಳುತ್ತಿದ್ದರು. You are the perfect Chief Minister of Coalition Government. Coalition Government ನಡೆಸಬೇಕಾದರೆ ಧರ್ಮಸಿಂಗ್‌ರವರ ಹತ್ತಿರ ಟ್ರೇನಿಂಗ್ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದರು. ನನಗೆ ಆ ತರಹ ಟ್ರೇನಿಂಗ್ ಕೊಡುವಂತಹ ಪರಿಸ್ಥಿತಿ ತಂದಿಡಬೇಡಿ, ಇದನ್ನು ನಾನು ಏಕೆ ಹೇಳುತ್ತೇನೆಂದರೆ, Coalition Governmentನಲ್ಲಿ ನಮ್ಮದೇ ಇತಿಮಿತಿಗಳಿರುತ್ತವೆ. ಇವೊತ್ತು ಕೊನೆಯದಾಗಿ ತೀರ್ಮಾನ ತೆಗೆದುಕೊಂಡಿರಿ, ಹೊರಗೆ ಬರಲಿಲ್ಲ. ನಿಮ್ಮ ಪಕ್ಷ ಇಬ್ಭಾಗವಾದಾಗ ಬಂದಿರಿ, ರಸ್ತೆ ಮೇಲೆ ಬಂದಿರಿ, ಎಲ್ಲಾ ಕಡೆ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ರೀತಿಯಲ್ಲಿ ಹೋದಿರಿ. ಯಡಿಯೂರಪ್ಪನವರೆ, ರಾಜ್ಯದ ಜನತೆ ಎಲ್ಲವನ್ನೂ ನೋಡುತ್ತಿದ್ದಾರೆ, ವಿಚಾರ ಮಾಡುತ್ತಿದ್ದಾರೆ. ಇವೊತ್ತು ನೈಸ್ ಕಂಪನಿ ವಿಚಾರದಲ್ಲಿ ಏನಾಗಿದೆ? ಅದಕ್ಕೋಸ್ಕರವೇ, ಇದನ್ನು ಸಿಬಿಐ ತನಿಖೆಗೆ ಒಳಪಡಿಸಿ ಎಂದು ನಾನು ಹೇಳಿದ್ದು. ಸಿಬಿಐ ತನಿಖೆಗೆ ಒಳಪಡಿಸುವ ರೀತಿಯಲ್ಲಿ ಇದು Judicial Enquiry ಆಗಬೇಕು. ಅಂತ ಆದರೆ ಸುಪ್ರೀಂ ಕೋರ್ಟ್‌ನ ಒಬ್ಬ ರಿಟೈರ್ಡ್ ಜಡ್ಜ್ ಅವರನ್ನು ನೇಮಕ ಮಾಡಿದ್ದೀರಿ. ಇಲ್ಲಿ ಚರ್ಚೆ ನಡೆಯುತ್ತಿದ್ದರೆ, ನೀವು ಅಲ್ಲಿ ಜಡ್ಜ್ ಅವರನ್ನು ನೇಮಕ ಮಾಡುತ್ತೀರಿ. ಜಡ್ಜ್ ಅವರನ್ನು ನೇಮಕ ಮಾಡಿದರೂ ಏನಾಗುತ್ತದೆಂದರೆ, 1997ರಿಂದ ತನಿಖೆಯಾಗಬೇಕು ಅಂತ ಹೇಳಿದ್ದೀರಿ. ನಮ್ಮ ವಾದವೇನಿದೆ, frame work agreement ಯಾವಾಗ ಆಗಿದೆ, ಅಂದರೆ 1995ರಿಂದ ಏಕಾಗಬಾರದು ಅಂತ. ಅದಕ್ಕೋಸ್ಕರವೇ, ಈ ಒಂದು ವಿಷಯದ ಮೇಲೆ

ಸಿಬಿಐ ತನಿಖೆಯಾಗಬೇಕೆಂದು ನಾವು ಕೇಳತಕ್ಕಂಥಾದ್ದು. ಎರಡನೆಯದಾಗಿ, 150 ಕೋಟಿ ರೂಪಾಯಿಗಳ ಪ್ರಕರಣವೇನಿದೆ, ಸನ್ಮಾನ್ಯ ಅಧ್ಯಕ್ಷರೆ, ಇವೊತ್ತು ಜನಾರ್ಧನ ರೆಡ್ಡಿ ಬಂದಿದ್ದಾರೆ, ಹೋಟೆಲ್‌ನಲ್ಲಿದ್ದಾರೆ ಹೇಳಿಕೆ ಕೊಡುತ್ತಾರೆ ಸಮ್ಮಿಶ್ರ ಸರ್ಕಾರದ ಭಾಗವಾಗಿರುವ ವಿಧಾನ ಪರಿಷತ್ತಿನ ಸದಸ್ಯರೊಬ್ಬರು, ಮೈತ್ರಿ ಪಕ್ಷದ ಘಟಕದ ಅಧ್ಯಕ್ಷರು ಹಾಗೂ ಇಲ್ಲಿಯವರೆಗೂ ಯಡಿಯೂರಪ್ಪನವರಿಂದ ಒಂದೂ ಸ್ಟೇಟ್‌ಮೆಂಟ್ ಕೊಡುವುದಕ್ಕಾಗುತ್ತಿಲ್ಲ, ಅವರನ್ನು ಹತೋಟಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಯಾವ ಮುಖ್ಯಮಂತ್ರಿಗಳ ಮೇಲೆ 150 ಕೋಟಿ ರೂಪಾಯಿಗಳ ಆರೋಪ ಇದೆಯೋ, ಅವರು ತೋರಿಸಬೇಕಾಗಿತ್ತು. ಇವೊತ್ತು ವಿಷಯವೇನಿದೆ, ಇದರೊಂದಿಗೆ ನಾವು ಸುಮ್ಮನೆ ಚೆಲ್ಲಾಟವಾಡುತ್ತಿದ್ದೇವೆಯೇ? ಪತ್ರಿಕೆಗಳಲ್ಲಿ ಬರಲಿಲ್ಲವೇ? ಜನಾಭಿಪ್ರಾಯ ಇಲ್ಲವೇ? ಜೆಡಿಎಲ್‌ಪಿ ಮೀಟಿಂಗ್‌ನಲ್ಲಿ ಮನೆಗಳನ್ನು ಕೊಡತಕ್ಕಂಥಾದ್ದರ ಬಗ್ಗೆ ಚರ್ಚಿಸುತ್ತೀರಾ? ಜೆಡಿಎಲ್‌ಪಿ ಮೀಟಿಂಗ್‌ನಲ್ಲಿ ನಮ್ಮದು ವರ್ಗಾವಣೆ ಮಾಡಿಸಿಕೊಡಿ ಎಂದು ಎಂಎಲ್‌ಎಗಳು ಕೇಳುತ್ತಾರೆ. ನಾವೆಲ್ಲರೂ ಕಳೆದ 36 ವರ್ಷಗಳಿಂದಲೂ ಜೆಡಿಎಲ್‌ಪಿ ಮೀಟಿಂಗ್ ನೋಡಿ ನೋಡಿ ಸಾಕಾಗಿ ಹೋಗಿದೆ. ಜೆಡಿಎಲ್‌ಪಿ ಮೀಟಿಂಗ್‌ನಲ್ಲಿ ಅದೇ ತಾನೇ ಚರ್ಚೆಯಾಗುವುದು? ಆ ಮೀಟಿಂಗ್‌ನಲ್ಲಿ ನೀವು ಇನ್ನೇನು ಮಾತನಾಡುತ್ತೀರಿ? ಜನಾರ್ಧನ ರೆಡ್ಡಿಯವರ ವಿಚಾರವನ್ನು ಏನಾದರೂ ಮಾತನಾಡುತ್ತೀರಾ? That man is in Delhi to meet Mr. Venkaiah Naidu and Mrs. Sushma Swaraj. ಇವೊತ್ತು ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ ನಿಮ್ಮಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲ, ನಿಮ್ಮಲ್ಲಿ ಸರಿಯಾದ ರೀತಿಯಲ್ಲಿ ಮನಸ್ಸಿಲ್ಲ. ಈ ರೀತಿಯಾಗಿ ಒಬ್ಬ ಮುಖ್ಯಮಂತ್ರಿಗಳ ಮೇಲೆ ಆರೋಪ ಬಂದಾಗ ಹೇಳಬೇಕಾಗಿತ್ತು. ಮೊಯ್ಲಿಯವರ ಟೇಪ್ ಹಗರಣದಲ್ಲಿ ಏನಾಯಿತು? ಅವರು ಸಿಕ್ಕಿದರೇ? Ultimately, he became the Chief Minister of the State. ಬಂಗಾರಪ್ಪನವರದ್ದು ಏನಾಗಿತ್ತು? ಅವರೂ ಕೂಡ ಮುಖ್ಯಮಂತ್ರಿಗಳಾಗಿದ್ದರು. ನಟವರ್‌ಸಿಂಗ್ He was one of the best Foreign Affairs Minsiters. ಅವರ ಮೇಲೆ ಯಾವಾಗ allegation ಬಂತೋ, ಆಗಲೇ ಅವರು ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟರು. ಅದೇ ರೀತಿ ಮರಾಂಡಿಯವರೂ ಕೊಟ್ಟಿದ್ದಾರೆ. ಇವೆಲ್ಲವೂ ರಾಜ್ಯದ, ದೇಶದ ರಾಜಕೀಯದ ಆಗು-ಹೋಗುಗಳಲ್ಲಿ ದಾಖಲೆಗಳಿವೆ. ಇವೆಲ್ಲಾ ನಮಗೇಕೆ ಬೇಕಾಗಿದೆ? ನಾವು ಇಲ್ಲ ಸುಮ್ಮನೆ ಕುಳಿತಿದ್ದೇವೆ. ವಿರೋಧ ಪಕ್ಷದವರೇನಾದರೂ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡಿದ್ದರೆ, ಆಗ ಅದು ನಮ್ಮ ಡ್ಯೂಟಿ ಆಗುತ್ತದೆ. ಏಕೆ ಈ ರೀತಿಯಾಗಿ ಬರುತ್ತಿದೆಯೋ, ನಮಗೆ

ಗೊತ್ತಿಲ್ಲ. ಇದೊಂದು ಹಗರಣ. ಇನ್ನು ತಾವು ಮಾತನಾಡುತ್ತಾ, ಇಲಾಖೆಗಳ ಮೇಲೆ ಚರ್ಚೆಯಾಗುತ್ತಿಲ್ಲ, ಮೇಲಿಂದ ಮೇಲೆ ಇವರು ಹೇಳುತ್ತಾರೆಂದು ಹೇಳುತ್ತೀರಿ. ಮೇಲಿಂದ ಮೇಲೆ ನಾವೇನು ಹೇಳಿದ್ದೇವೆ? ಅವರು ಎಲ್ಲೆಲ್ಲಿ ಹೇಳಿದ್ದಾರೆ, ಎಲ್ಲೆಲ್ಲಿ ಎಡವಿದ್ದಾರೆ, ಪ್ರತಿ ಪಕ್ಷದಲ್ಲಿ ಕುಳಿತು ಹೇಳತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯ. 1978ರಿಂದಲೂ ಗಣಿಗಾರಿಕೆಯಲ್ಲಿ ವ್ಯವಹಾರ ನಡೆಯುತ್ತಿತ್ತು. ನಾನು ಮುಖ್ಯಮಂತ್ರಿಯಾದಾಗ ಒಂದು ಟಾಸ್ಕ್‌ಫೋರ್ಸ್ ರಚಿಸಿದ್ದೆ. ಅದರಲ್ಲಿ ಎಸ್‌ಪಿಯವರು, ಡಿಸಿಯವರು ಮತ್ತು ಬೇರೆ ಬೇರೆ ಅಧಿಕಾರಿಗಳೆಲ್ಲರೂ ಕೂಡ ಇರುತ್ತಾರೆ. ಆದರೆ, ಚನ್ನಿಗಪ್ಪನವರು ಒಪ್ಪಬೇಕಾಗುತ್ತದೆ. ಚನ್ನಿಗಪ್ಪನವರು ಅರಣ್ಯ ಮಂತ್ರಿಯಾಗಿ ಅಲ್ಲಿಗೆ ಹೋದರು. ಎಲ್ಲೆಲ್ಲಿ ಏನೇನು ನಡೆಯುತ್ತಿದೆಯೋ ಎಲ್ಲವನ್ನೂ ತನಿಖೆ ಮಾಡಿದರು. ತನಿಖೆ ಮಾಡಿ ಏನು ಮಾಡಿದರೋ ಗೊತ್ತಿಲ್ಲ. ಅಲ್ಲಿಂದ ಪ್ರಾರಂಭವಾಯಿತು ಈ ಕಥೆ. ಚನ್ನಿಗಪ್ಪನವರು ಅರಣ್ಯ ಮಂತ್ರಿಗಳಾಗಿ ಬಳ್ಳಾರಿ ಜಿಲ್ಲೆಗೆ ಭೇಟಿ ಕೊಟ್ಟಂಥ ಸಮಯದಲ್ಲಿ ಉದ್ಭವವಾದ ಸಮಸ್ಯೆ ಏನಿದೆ, ಅದು ಇವೊತ್ತು ರಾಜ್ಯದ ಮುಖ್ಯಮಂತ್ರಿಗಳಿಗೆ ಬಂದು ತಲುಪಿದೆ. ದೇವೇಗೌಡರ ಮೇಲೆ ಸಿಓಡಿ ಆಗಿದೆ; ಮೈಸೂರು ಹಗರಣದ ಬಗ್ಗೆ ಪುಟ್ಟಸ್ವಾಮಿಯವರು ಪ್ರಸ್ತಾಪಿಸಿದ್ದು. ಅದರ ಬಗ್ಗೆ ಏನೂ ಆಗಲಿಲ್ಲ. ಬಂಗಾರಪ್ಪನವರ ಸೊರಬದ ಭೂ ಹಗರಣದ ಬಗ್ಗೆ ಏನಾಯಿತು? ರಾಜೀನಾಮೆ ಕೊಟ್ಟರು, ಮತ್ತೆ ಮುಖ್ಯಮಂತ್ರಿಯಾಗಿ ಆರಿಸಿ ಬಂದರು. ಯಾರಿಗೂ ಕೂಡ ಏನು ಆಗಲಿಲ್ಲ. Democratic setupನಲ್ಲಿ ಇಂತಹ ಒಂದು ಆಪಾದನೆ ಬಂದಂಥ ಸಂದರ್ಭದಲ್ಲಿ ರಾಜೀನಾಮೆ ಕೊಟ್ಟಾಗ ರಾಜ್ಯದ ಜನರ ದೃಷ್ಟಿಯಲ್ಲಿ you will become the hero in the eyes of the people. ನೀವು ಹೋಗಿ, ನಾವೇನೂ ಬರುವುದಿಲ್ಲ, ಅವರು ನಮ್ಮ ಜೊತೆಗೆ ಬರುವುದಿಲ್ಲ. ಅವರ ಜೊತೆಯಲ್ಲಿ ಯಾರು ಹೋಗುತ್ತಾರೆ? ನಮ್ಮದು All India party ಇದೆ. ನಾವು ಎಲ್ಲವನ್ನೂ face ಮಾಡಬೇಕಾಗುತ್ತದೆ. ಬಿಜೆಪಿ ಜೊತೆಯಲ್ಲಿ ಹೋಗುವುದು ಬೇಡವೆಂದು ನಾವು ಮೊದಲಿನಿಂದಲೂ ಹೇಳಿದ್ದೇವೆ. ಯಾವಾಗ 8ನೇ ತಾರೀಖು ಸಭೆ ನಡೆದಾಗ 'ಆಯಿತು. ಕುಮಾರಸ್ವಾಮಿಯವರೆ, ನೀವು ದೊಡ್ಡ ತಪ್ಪು ಮಾಡಿದ್ದೀರಿ. ಅವರ ಜೊತೆಯಲ್ಲಿ ಹೋಗಿದ್ದೀರಿ, ಅದು ಬಹಳ ಕಷ್ಟದ ಕೆಲಸ ವೆಂದು ಹೇಳಿದ್ದೇವೆ. ಏಕೆಂದರೆ, we have tolerated ಸೋನಿಯಾಗಾಂಧಿಯವರ secular forces ಒಂದಾಗಬೇಕು. ಇವೊತ್ತು ದಕ್ಷಿಣ ಭಾರತದಲ್ಲಿ ಸರ್ಕಾರ ಬೀಳಬಾರದು. ಸಿಪಿಎಂ ಸೆಕ್ರೆಟರಿಯವರಾದ ಪ್ರಕಾಶ್ ಕಾರಟ್‌ರವರೂ ಕೂಡ ನನಗೆ ದೂರವಾಣಿ ಕರೆ ಮಾಡಿ 'ನೀವು ಏನಾದರೂ ಮಾಡಿ ಉಳಿಸಿ' ಎಂದಿದ್ದರು. ಏಕೆಂದರೆ, ದೇಶದಲ್ಲಿ ಯಾವ ರೀತಿಯಾಗಿ

ಮನಮೋಹನ್‌ಸಿಂಗ್‌ರವರ ಸರ್ಕಾರಕ್ಕೆ secular forces ಇವೊತ್ತಿನ ದಿವಸ Leftist partyಯ 60 ಜನ ಇದ್ದರೂ they are not participating in the Government. But they are supporting Manmohan Singh Government. ಇದೊಂದು ದೊಡ್ಡ ವಾದವಿದೆ. ಇದರ ಹಿಂದೆ ಒಂದು ಸಿದ್ಧಾಂತವಿದೆ. ಅದರ ಮೇಲೆ ನಾವು ಹೋಗಿದ್ದೇವೆಯೇ ಹೊರತು, ನಾವು ಆ ಕಡೆಯಿಂದ ಈ ಕಡೆಗೆ ಸಂಖ್ಯಾಬಲದ ಮೇಲೆ ಬಂದು ಕುಳಿತಿಲ್ಲ. ಇವೊತ್ತು I am very happy. Because, ಈ ವಯಸ್ಸಿನಲ್ಲಿ ಮೊಟ್ಟಮೊದಲನೆಯದಾಗಿ, you were a Parliament Member. ಇಲ್ಲಿ enter ಆದಿರಿ. ಇವೊತ್ತು ನಿಮಗೆ ಅವಕಾಶ ಸಿಕ್ಕಿದೆ. ಶುರುವಾದಾಗ 2–3 ತಿಂಗಳು ಚೆನ್ನಾಗಿ ಇದ್ದಿರಿ. ನಂತರ ಅದೇನೇನೋ ಆಗಿ ಹೋಗಿದೆ ಅವರು ಮಾಡಿದ್ದಾರೆ ಎಂದು ನಾವೇನೂ ಹೇಳುತ್ತಿಲ್ಲ. ಮತ್ತೆ ಯಡಿಯೂರಪ್ಪನವರು ಮಾತನಾಡುತ್ತಾ, 'ಯಾರ ಕಾಲದಲ್ಲಿ ಏನೇನು ಆಗಿದೆ, ಬರಲಿ' ಎಂದರು. ಹಾಕ್ರಿ, ಯಾರು ಬೇಡವೆಂದು ಹೇಳುವುದು? ನಿಮ್ಮ ಕೈಯ್ಯಲ್ಲಿದೆ. ಯಾರನ್ನು ಜೈಲಿಗೆ ಹಾಕಬೇಕೆನ್ನುತ್ತೀರೋ, ಹಾಕಿ. ಯಾರು ಗಣಿಗಾರಿಕೆ ಮಾಡಿದ್ದಾರೋ, ಅವರನ್ನು ಹಾಕಿರಿ. ನೀವು ಏನೇನು ಮಾಡಬೇಕಾಗಿದೆಯೋ, ಮಾಡಿ. ಹಳ್ಳಿ ಭಾಷೆಯಲ್ಲಿ ಅದನ್ನು ಉಪಯೋಗಿಸುವುದಕ್ಕೆ ಇಚ್ಛಿಸುತ್ತಿಲ್ಲ. ನಾವು ಹೇಳುವುದಿಷ್ಟೆ. ನಿಮ್ಮ ಕೈಯ್ಯಲ್ಲಿ ಸರ್ಕಾರ ಇದೆ, ಇವೊತ್ತು ಮೈನಿಂಗ್‌ನಲ್ಲಿ ಎಲ್ಲೆಲ್ಲಿ ಎಡವಿದ್ದಾರೆಂದು ನಿಮಗೆ ತಿಳಿದರೆ. ನಿಮಗೆ ಸಂಪೂರ್ಣ ಹಕ್ಕು ಇದೆ, ಅಧಿಕಾರವಿದೆ. ಮಾಡಿ. ಇವೊತ್ತು Coalition Government ಇದೆ. You are the youngest Chief Minister of the State. You take whatever action you wnat. ಆದರೆ, ನಿಮ್ಮ ಮೇಲಿರುವ ಆಪಾದನೆ ತಿರುಗು–ಮುರುಗು ಆಗುವುದಕ್ಕೆ ಸಾಧ್ಯವಿಲ್ಲ.... ದಿನಕರ್ ಪುಸ್ತಕ ಇದೆ, ಅದೆಲ್ಲವೂ ಗತ, ಎಲ್ಲವೂ ಹಿಂದಿನ ಕಥೆಗಳು. Today, you are the Chief Minister. You have to tell. ಏನು ಮಾಡುತ್ತೀರಿ? ಇವೊತ್ತು ಏನು ಮಾಡಬೇಕೋ, ಅದನ್ನು ಮಾಡುವುದಕ್ಕೆ ತಾವು ವಿಫಲರಾಗಿದ್ದೀರಿ. 'ಕಾಲ ಹರಣವಾಗುತ್ತಿದೆ' ಎಂದು ಮತ್ತೆ ಮತ್ತೆ ಹೇಳುತ್ತಿದ್ದೀರಿ. ಅಲ್ಲಿ ಬಿ.ಆರ್. ಪಾಟೀಲ್ ಇದ್ದಾರೆ. 'ಬೇರೇನೂ ಕೆಲಸ ಇಲ್ಲವೇ? ಎನ್ನುತ್ತಾರೆ. ಮತ್ತೆ 'ಬೇರೆ ಪ್ರಶ್ನೆ ಕೇಳುವುದೇನೂ ಇಲ್ಲವೇ?' ಎಂದು ನಮ್ಮ ಮೇಲೆ ಎಂಎಲ್‌ಎಗಳು ಹೇಳುತ್ತಾರೆ. ಸಾಕಷ್ಟು ಜನರ ಅಭಿಪ್ರಾಯ ಇದೆ. ಏಕೆಂದರೆ, ಸಾಮಾನ್ಯ ಜನತೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದಲ್ಲಿ ಪೊಲಿಟಿಕಲ್ ಆಗಿ ಪರೋಕ್ಷವಾಗಿ ಬಹಳ ಚಿಂತನೆ ಮಾಡತಕ್ಕಂಥ ಜನರೂ

ಕೂಡ ಇದ್ದಾರೆ. ನಿಮಗೆ ತಿಳಿಯುತ್ತಿರಬಹುದು. Public opinion is different. ನಾವು ಎಲ್ಲಾ ಕೂಡ ಮಾಡಿದ್ದೇವೆ. ಚುನಾವಣೆ ನೋಡಿದ್ದೇವೆ, ಚುನಾವಣೆಯಲ್ಲಿ ಗೆದ್ದು ಬರಬೇಕಾದರೆ, that requires political credibility. ಸುಮ್ಮನೆ ನಾವು ಹೋಗಿ ಬಂದಿಲ್ಲ. ಮ್ಯಾನಿಪ್ಯುಲೇಟ್ ಮಾಡಿಲ್ಲ. ಏನು ದೊಡ್ಡ ಮಹಾತ್ಮನೆಂತಲೂ ಹೇಳುತ್ತಿಲ್ಲ. As a humble worker. Struggle ಮಾಡಿ ಇಲ್ಲಿಯವರೆಗೂ ಬಂದು ಮುಟ್ಟಿದ್ದೇವೆ. ಅದಕ್ಕೋಸ್ಕರ, ಇವೊತ್ತು ಜನಾಭಿಪ್ರಾಯ ಏನು ರೂಪುಗೊಳ್ಳುತ್ತಿದೆ, ಅದನ್ನು ನೋಡಬೇಕು. ನೀವು ಒಂದಾಗಿರಬಹುದು, ಒಂದಾಗಿದ್ದು ಎಲ್ಲಾ ಮಂದಿ ಈ ಕಡೆ ಯಡಿಯೂರಪ್ಪನವರು ಮೀಟಿಂಗ್‌ನ್ನು ಮಾಡುತ್ತಾರೆ. ಕಟ್ಟಾಸುಬ್ರಹ್ಮಣ್ಯನಾಯ್ಡುರವರು ಇರುತ್ತಾರೆ, ಜಗದೀಶ್‌ಶೆಟ್ಟರವರು ಇರುತ್ತಾರೆ. ಈಶ್ವರಪ್ಪನವರೂ ಸಹ ಇರುತ್ತಾರೆ. ಯಾರು ಅಧಿಕಾರವನ್ನು ಬಿಡುವುದಕ್ಕೆ ತಯಾರಿರುತ್ತಾರೆ? Eswarappa is a luckiest fellow. ಇವತ್ತು ಮಂತ್ರಿಯಾಗಿದ್ದೀರಿ, ನೀವು ಬಹಳ ಲಕ್ಕಿ ಯಾರೂ ಬಿಡುವುದಿಲ್ಲ. ಅಧಿಕಾರ ಬೇಕೇ ಬೇಕು, ಅಧಿಕಾರಕ್ಕೋಸ್ಕರ ಸಿದ್ಧಾಂತಕ್ಕೆ ತಿಲಾಂಜಲಿಯನ್ನು ಮಾಡಿ ಒಂದಾಗಿ ನೀವುಗಳು ಒಂದು ಮನಸ್ಸಿನಿಂದ ಇರಿ, ಯಾಕೆ ಕಿರುಕುಳವನ್ನು ಕೊಡುತ್ತಿದ್ದೀರಿ? ಅವನನ್ನು ಕರೆಸಿ ಹೇಳಿಸಿಬಿಡಿ. ಅದಕ್ಕೆ ನಾನು ಹೇಳುವುದೇನೆಂದರೆ, ಎಷ್ಟು ಮಾತನಾಡಿದರೂ ಕೂಡ round about ಅದಕ್ಕೇ ಬರುತ್ತದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಇವತ್ತು ನಿಮ್ಮ ಮೇಲೆ ಆಪಾದನೆ ಇದೆ, ಗುರುತರವಾದ ಆಪಾದನೆಯೂ ಇದೆ. ನೀವು ಮುಖ್ಯಮಂತ್ರಿಗಳಾಗಿ ಮುಂದುವರಿಯುವ ಬಗ್ಗೆ ನಿಮಗೆ ನೈತಿಕ ಹಕ್ಕಿಲ್ಲ. ಈ ತರಹದ ಆಪಾದನೆಯು ರಾಜ್ಯದ ಯಾವ ಮುಖ್ಯಮಂತ್ರಿಗಳ ಮೇಲೆ ಬಂದಿಲ್ಲ. 150 ಕೋಟಿ ರೂಪಾಯಿಗಳ ಬಗ್ಗೆ 8–10 ದಿವಸಗಳಿಂದ ಚರ್ಚೆ ನಡೆಯುತ್ತಿದೆ. ನಿಮಗೆ ಮೈತ್ರಿ ಸರ್ಕಾರದಲ್ಲಿ ಸಹಕಾರವಿಲ್ಲ, ಅವರ ಬೆಂಬಲ ಇಲ್ಲ, ನಿಮ್ಮ ಜೊತೆಗೂಡಿ ಹೋಗುವಂತಹ ಮನಸ್ಸು ಕೂಡ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ರಾಜ್ಯದ ಜನತೆಯು ನಿರೀಕ್ಷಣೆ ಮಾಡುತ್ತಿದ್ದಾರೆ. ಆ ಪ್ರಕಾರ ನೀವೇನು ಮಾಡಬೇಕೆಂದರೆ ಅದಕ್ಕೆ ಸ್ಪಂದಿಸಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಸದನದಲ್ಲಿ ಅನೇಕ ಹಿರಿಯ ಸದಸ್ಯರು ವಿರೋಧಪಕ್ಷದ ಎಲ್ಲಾ ನಾಯಕರು ಹಾಗೂ ಇತರರು ಮಾತನಾಡಿದ್ದಾರೆ. ವಿರೋಧಪಕ್ಷದ ನಾಯಕರೂ ಕೂಡ ತಮ್ಮ ಅನಿಸಿಕೆಗಳನ್ನು ಸದನದ ಮುಂದಿಟ್ಟಿದ್ದಾರೆ. ನಾನು ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ಕೆಲವೇ ವಿಷಯಗಳನ್ನು ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು

ಮೊಟಕುಗೊಳಿಸುತ್ತೇನೆ. ಈ ಒಂದು ವಿಷಯ ಪ್ರಸ್ತಾಪವಾಗುವಂತಹದ್ದು ಕೇವಲ ವಿರೋಧಪಕ್ಷದ ವತಿಯಿಂದ ಪ್ರಸ್ತಾಪವಾಗುತ್ತಿಲ್ಲ. ಇದಕ್ಕೆ ಚಾಲನೆಯನ್ನು ಕೊಟ್ಟವರು ಆಡಳಿತ ಪಕ್ಷದ ಒಬ್ಬ ಸದಸ್ಯರು ಮತ್ತು ಅದಕ್ಕೆ ಪುಷ್ಠೀಕರಿಸಿದವರು ಒಬ್ಬರು ಮಂತ್ರಿಗಳು ಮತ್ತು ಅದೇ ಆಡಳಿತ ಪಕ್ಷದ ಒಬ್ಬ ಪಾರ್ಲಿಮೆಂಟ್ ಸದಸ್ಯರೂ ಕೂಡ ಇದಕ್ಕೆ ಪುಷ್ಠಿಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲಿಯೂ ಕೂಡ ಬಂದಿದೆ, ಪತ್ರಿಕೆಯ ಆಧಾರದ ಮೇಲೆ ನೀವು ಇದನ್ನು ಪ್ರಸ್ತಾಪ ಮಾಡುತ್ತಿದ್ದೀರಿ, ಅಥವಾ ಏನು ಟಿವಿಯಲ್ಲಿ ಹೇಳಿಕೆಯು ಬಂತು ಅದರ ಆಧಾರದ ಮೇಲೆ ತಾವು ಪ್ರಸ್ತಾಪವನ್ನು ಮಾಡಿ ಈ ಅಲಿಗೇಷನ್‌ನ್ನು ತಾವು ಮಾಡುತ್ತಿದ್ದೀರಿ ಎನ್ನುವಂತಹ ಮಾತುಗಳನ್ನು ಪದೇಪದೇ ನಾವು ಕೇಳಿದ್ದೇವೆ. ಇದಕ್ಕೆ ಪ್ರೂಫ್ ಏನಿದೆ? ಅನ್ನುತ್ತೀರಿ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹಿಂದೆಯೂ ಕೂಡ ಈ ಸವಾಲನ್ನು ಹಾಕಿದ್ದಾರೆ. ಅವರು ಪ್ರೂಫ್‌ವನ್ನು ಕೊಟ್ಟರೆ ಅದರ ಎನ್‌ಕ್ವಯರಿಯನ್ನು ನಾನು ಮಾಡಿಸುತ್ತೇನೆ ಎನ್ನುವುದನ್ನೂ ಕೂಡ ಅವರು ಹೇಳಿದ್ದಾರೆ. ಇದರ ಬಗ್ಗೆ ಪ್ರೂಫ್‌ನ್ನು ಯಾರು ಕೊಡಬೇಕು? ಪ್ರೂಫ್‌ನ್ನು ಅವರಿಗೆ ಭಾಗಿಗಳಾಗಿರುವವರು ಅವರ ಆಡಳಿತ ಪಕ್ಷದವರೇ ಒಬ್ಬರು ಸದಸ್ಯರು ಅವರಿಗೆ ಪ್ರೂಫ್‌ನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಗುರುತರವಾದ ಆಪಾದನೆಯನ್ನು ಮಾಡಿ ಓಡಿಹೋಗುವಂತಹದ್ದು ಅಲ್ಲ. ಆಪಾದನೆಯೂ ಮಾಡಿದ ಮೇಲೆ ಅವರೂ ಕೂಡ ಇದರ ಬಗ್ಗೆ ಸಿದ್ಧಪಡಿಸಬೇಕಾಗುತ್ತದೆ. ಇಡೀ ರಾಜ್ಯದ ದೇಶದ ಜನರ ಗಮನವನ್ನು ಈ ಒಂದು ವಿಷಯದ ಮೇಲೆ ಇದ್ದ ಮೇಲೆ ನಾವೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾದುದು ನಮ್ಮ ಕರ್ತವ್ಯವಾಗುತ್ತದೆ. ಏಕೆಂದರೆ ಇದರ ಬಗ್ಗೆ ಜನರು ಕೇಳುತ್ತಾರೆ, ಈ ವಿಷಯವನ್ನು ಆಡಳಿತಪಕ್ಷದ ಮಂತ್ರಿಗಳಿಂದ ಹಿಡಿದುಕೊಂಡು ಪಾರ್ಲಿಮೆಂಟ್ ಸದಸ್ಯರನ್ನು ಹಿಡಿದುಕೊಂಡು ಎಂಎಲ್‌ಸಿಯವರಿಂದ ಹಿಡಿದುಕೊಂಡು ಪ್ರಸ್ತಾಪ ಮಾಡಿದರೂ ಕೂಡ ಬೇರೆಯವರು ಬಾಯಿಮುಚ್ಚಿಕೊಂಡು ಏತಕ್ಕೆ ಕುಳಿತಿದ್ದಾರೆನ್ನತಕ್ಕಂತಹ ಸಂಶಯ ಮೂಡುತ್ತದೆ. ಅದಕ್ಕಾಗಿ ನಮ್ಮೆಲ್ಲರ ಕರ್ತವ್ಯವೇನೆಂದರೆ ನಮ್ಮ ಹತ್ತಿರ ನೇರವಾದಂತಹ ಟೇಪ್ ಇಲ್ಲದೇ ಇರಬಹುದು, ನೇರವಾದಂತಹ ದಾಖಲೆಗಳು, ಕಾಗದಪತ್ರಗಳು ಇಲ್ಲದೆ ಇರಬಹುದು, ಆದರೆ ಇದಕ್ಕೆ ಸಾಕ್ಷಿ ಏನೆಂದರೆ, ಯಾರು ಹೇಳಿದ್ದಾರೋ ಇವತ್ತಿನವರೆಗೆ ಅವರು ಹೇಳುತ್ತಲೇ ಇದ್ದಾರೆ. ಅವರ ಮನವನ್ನು ಒಲಿಸುವ ಬಗ್ಗೆ ನಿನ್ನೆ ಸಾಕಷ್ಟು ಪ್ರಯತ್ನಗಳಾಯಿತು. ಜನಾರ್ಧನರೆಡ್ಡಿಯವರು ಅನೇಕ ಮುಖಂಡರನ್ನು ಭೇಟಿಯಾಗಿದ್ದಾರೆ, ಅವರಿಗೆ ಬೇಕಾದವರೆಲ್ಲರನ್ನು ಭೇಟಿಯಾಗಿ ಕೊನೆಗೆ ದೆಹಲಿಗೆ ಪ್ರಯಾಣ ಮಾಡಿದ್ದಾರೆ.

ದೆಹಲಿಯಲ್ಲೂ ಕೂಡ ಅವರು ವರಿಷ್ಠರಿಗೆ ಭೇಟಿಯಾಗಿ ಈ ವಿಷಯದ ಬಗ್ಗೆ ಪ್ರಸ್ತಾವ ಮಾಡಿ ಪುನಃ ಇವತ್ತು ಕೆಲವು ಈಗಾಗಲೇ ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ, ಅವರು ತಮ್ಮಲ್ಲಿರುವಂತಹ ದಾಖಲೆಗಳನ್ನು ಕೊಟ್ಟು ಅವರ ಮನವನ್ನು ಒಲಿಸುವುದರಲ್ಲಿ ಯಶಸ್ವಿಯಾಗಿದ್ದಾರೆ ಎನ್ನತಕ್ಕಂತಹ ಮಾತನ್ನು ಕೂಡ ಹೇಳಿದ್ದಾರೆ. ಇದಕ್ಕಿಂತಲೂ ದೊಡ್ಡ ಪ್ರೂಫ್ ಏನುಬೇಕು? ಯಾವ ಸದಸ್ಯರು ಹೇಳುವುದಲ್ಲದೆ, he reiterated in the stand not once, twice. Since ten days, continuously and you are not able to get him in this house. ಮಂತ್ರಿಗಳಾದವರು ಇಲ್ಲಿಗೆ ಬಂದು ಡಿನೈ ಮಾಡುತ್ತಿಲ್ಲ, ಆ ಮನೆಯಲ್ಲಿ ಎಂಎಲ್‌ಸಿಯವರು ಹೋಗಿ ಡಿನೈ ಮಾಡುತ್ತಿಲ್ಲ. ಅಥವಾ ಪಕ್ಷದ ವತಿಯಿಂದ ತಾವುಗಳು ಸೇರಿಕೊಂಡು ಕೋ-ಅರ್ಡಿನೇಷನ್ ಕಮಿಟಿ ಮಾಡಿ ಅದರಲ್ಲಿಯೂ ಕೂಡ ಮೂವರನ್ನು ಕರೆಸಿ ಡಿನೈ ಮಾಡುತ್ತಿಲ್ಲ. ಇದರ ಅರ್ಥವೇನು? ಮತ್ತೇನು ಪ್ರೂಫ್ ಬೇಕು? ಪ್ರೂಫ್ ಇದ್ದರೆ ಮಾತ್ರ ಈ ವಿಷಯ ಸತ್ಯ. ನಿಮ್ಮಲ್ಲಿ ದಾಖಲೆಗಳು ಇಲ್ಲ ಅದಕ್ಕೆ ಇದು ಸುಳ್ಳು ಹೇಳತಕ್ಕಂತಹ ಮಾತೆಂದರೆ ಅದು ಬೇರೆ ವಿಷಯ. ಆದರೆ ಇದು ಸತ್ಯಕ್ಕೆ ಸಮೀಪವಾದಂತಹ ಮಾತು ಎನ್ನುವುದು ಈ ಮೂವರು ಇವತ್ತು ಏನು ಅಲಿಗೇಷನ್ ಮಾಡಿ ಮೌನವನ್ನು ಆಚರಿಸಿದ್ದಾರೋ ಮತ್ತು ಅದೇ ಮಾತನ್ನು ರಿಪೀಟಡ್ ಆಗಿ reiterate ಮಾಡುತ್ತಿದ್ದಾರೋ ಅದಕ್ಕಾಗಿ ಇದೇ ಒಂದು ಸತ್ಯ. ಇಲ್ಲಿಯವರೆಗೆ ಅವರಿಗೆ ನೀವು ಬಾಯಿಯನ್ನು ಬಿಡಿಸುವುದಕ್ಕಾಗಲಿಲ್ಲ. ಯಾಕೆ ಈ ರೀತಿಯಾಗಿ ಹೇಳಿದ್ದೀರೆಂದು ಹೇಳುವುದಕ್ಕೂ ಕೂಡ ನಿಮಗೆ ಧೈರ್ಯವಾಗಲಿಲ್ಲ. ಅಂದಾಗ ಅವರು ಯಾವ ದೃಷ್ಟಿಯಿಂದ ಈ ಅಲಿಗೇಷನ್ ಮಾಡಿದರು ಎಂಬುದು ಬೇರೆ ವಿಚಾರವಾಗಿದೆ. ಎಸ್‌ಪಿ ಟ್ರಾನ್ಸ್‌ಫರ್ ಅಕಸ್ಮಾತವಾಗಿ ಬಂದಿರಬಹುದು, ಅಥವಾ ಒಬ್ಬ ಎಸ್‌ಪಿಯವರು ಅಂದರೆ ಅವರಿಗೆ ಬೇಕಾದವರುನ್ನು ರೀಟೈನ್ ಮಾಡದೆಹೋದಾಗ ಈ ಅಲಿಗೇಷನ್ ಮಾಡಿದ್ದಾರೆ. ಈ ಮಾತು ಸತ್ಯವಿದ್ದರೂ ಕೂಡ ತಾವು ಜಂಟಿ : ಸರ್ಕಾರವನ್ನು ನಡೆಸುತ್ತಿದ್ದೀರಿ, ಈ ಸರ್ಕಾರವನ್ನು ನಡೆಸುವಾಗ ಇಂತಹ ಒಂದು ಕರೆಪ್ಷನ್ ಚಾರ್ಜ್‌ಸ್ ನಮ್ಮ ಮೇಲೆ ನೀವು ಮಾಡುತ್ತಿದ್ದೀರಿ. ಆದರೆ ಈ ಕರೆಪ್ಷನ್ ಚಾರ್ಜ್ ಮಾಡುವುದು ಸರಿಯಲ್ಲ. ನೀವು ಇದೇ ರೀತಿಯಾಗಿ ಮಾಡಿದರೆ ನಾನು ಲೀಗಲ್ ಆ್ಯಕ್ಷನ್‌ನ್ನು ತೆಗೆದುಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ತಾವು ಹೇಳಬಹುದಾಗಿತ್ತು. ಇಲ್ಲಾ ಅದೇ ದಿವಸ ಎಫ್‌ಐಆರ್‌ನ್ನು ಮಾಡಬಹುದಾಗಿತ್ತು. Defamation caseಗೆ ನೋಟೀಸ್ ಕೊಡಬಹುದಾಗಿತ್ತು. ಇಷ್ಟೆಲ್ಲಾ ಅಪ್ಷನ್ ಇದ್ದರೂ ಕೂಡ ನೀವು ಮಾಡಿಲ್ಲವೆಂದರೆ ಎಲ್ಲೋ ತಾವು ಎಡವಿದ್ದೀರಿ ಸತ್ಯಾಂಶವನ್ನು ಮುಚ್ಚಿಡುವುದಕ್ಕೆ

ಪ್ರಯತ್ನ ನಡೆದಿದೆ, ಇನ್ನು ಮೇಲೆ ಜನಾರ್ಧನರೆಡ್ಡಿಯವರಾಗಲಿ ಪುನಃ ಮಂತ್ರಿಗಳಾಗಲಿ, ಇಲ್ಲಿ ಬಂದು ಹೇಳಿಕೆ ಕೊಟ್ಟರೂ ಕೂಡ ಅದು ಒತ್ತಾಯದ ಮೇರೆಗೆ ಎನ್ನುವಂತಹ ಪ್ರಶ್ನೆ ಉದ್ಭವವಾಗುತ್ತದೆ. ಇಲ್ಲದಿದ್ದರೆ ಸತ್ಯ ಇರುತ್ತಿದ್ದರೆ ನೆಕ್ಸ್ಟ್ ಡೇನೇ ಮಾಡುತ್ತಿದ್ದರು. ಆ ತಕ್ಷಣವೇ ಡಿನೈ ಮಾಡುತ್ತಿದ್ದೀರಿ. ಅಥವಾ ಇವರು ಮಾಡಿಸುತ್ತಿದ್ದರು. ನನ್ನ ಪ್ರಾಣ ಹೋದರೂ ಕೂಡ ಚಿಂತೆಯಿಲ್ಲ ನಾನು ಇದನ್ನು ಸಾಬೀತುಪಡಿಸುತ್ತೇನೆ ಎನ್ನುವಂತಹ ಮಾತನ್ನು ಅವನು ರಿಪೀಟೆಡ್ ಆಗಿ ಹೇಳಬೇಕಾದರೆ, ಅದರಲ್ಲಿ ಸತ್ಯಾಂಶ ಇದೆ ಎನ್ನುವ ಸಂಶಯ ಸಾರ್ವಜನಿಕರಿಗೆ ಬರುತ್ತದೆ. ಅದಕ್ಕೆ ಆ ಒಂದು ಆಧಾರದ ಮೇಲೆ ನಾವು ಹೇಳಿದರೂ ಕೂಡ ನೀವು ಅನ್ನಬಹುದು. ಈ ಹಿಂದೆ ಹೀಗೇಯೇ ಆಗಿದೆ, ಅಂತ ಆಗಿದೆ. ಅನೇಕ ಉದಾಹರಣೆಗಳು ನಮ್ಮ ಮುಂದೆ ಇವೆ. ಇವತ್ತು ನಿಮಗೆ ಹೇಳಬೇಕಾಗಿದ್ದರೆ, ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿಯೂ ಕೂಡ ಮಾನ್ಯ ಎಸ್. ಶಿವಪ್ಪನವರು ಒಂದು ಮೆಮೋರಾಂಡಮ್ ಅನ್ನು ತೆಗೆದುಕೊಂಡು ಹೋಗಿ ಶ್ರೀಮತಿ ಇಂದಿರಾಜೀಯವರಿಗೆ ಕೊಟ್ಟಿದ್ದರು. ಮಾನ್ಯ ನಿಜಲಿಂಗಪ್ಪನವರು ಲಿಂಗನಮಕ್ಕಿ ಡ್ಯಾಮ್‌ನಲ್ಲಿ ಸಾಕಷ್ಟು ಅವ್ಯವಹಾರ ಮಾಡಿದ್ದಾರೆ ಅನ್ನತಕ್ಕಂಥ ಆಪಾದನೆ ಮಾಡಿದರು. ಲಿಂಗನಮಕ್ಕಿ ಕರ್ಮಕಾಂಡ ಅಥವಾ ಶರಾವತಿ ಕರ್ಮಕಾಂಡ ಎಂಬ ಒಂದು ದೊಡ್ಡ ಆಪಾದನೆ ಮಾಡಿದರು. ಅಂದರೆ ಏನೂ ಇಲ್ಲ. ದಾಖಲೆ, ಪುರಾವೆ ಆ ದಿವಸ ಕೊಟ್ಟರೇ? ಮಾನ್ಯ ಎಸ್. ಶಿವಪ್ಪನವರು ಇದ್ದಾಗ ಮಾನ್ಯ ವಾಟಾಳರೂ ಸಹ ಇದ್ದರೆಂದು ಕಾಣುತ್ತದೆ. ನೀವು ಆಗ ಏನು ದಾಖಲೆ ಕೊಟ್ಟಿರಿ ಸ್ವಾಮಿ? ಏನು ಪುರಾವೆ ಕೊಟ್ಟಿರಿ? ಆಗ ಏನು ಟೇಪ್ ಕೊಟ್ಟಿರಾ ಅಥವಾ ಏನಾದರೂ ದಾಖಲೆಗಳು ಒಯ್ದು ಕೊಟ್ಟಿರಾ? ಮಾನ್ಯ ನಿಜಲಿಂಗಪ್ಪನವರು ರುಜು ಮಾಡಿ ದುಡ್ಡು ತೆಗೆದುಕೊಂಡಿದ್ದು ಚೀಟಿ ಏನಾದರೂ ಕೊಟ್ಟಿರಾ? ಆದರೂ ಕೂಡ ಈ ಅಲಿಗೇಷನ್ಸ್ ಅನ್ನು ಅವರು ಶ್ರೀಮತಿ ಇಂದಿರಾಗಾಂಧೀಜಿಯವರಿಗೆ ತಲುಪಿಸಿದರು. ಮಾನ್ಯ ನಿಜಲಿಂಗಪ್ಪನವರು ಗಾಂಧಿವಾದಿಗಳು, ಬಹಳ sincere ಆಗಿದ್ದರು. ಬಹುಶಃ ನಮ್ಮ ರಾಜಕೀಯ ಜೀವನದಲ್ಲಿ ಅಂತಹ ವ್ಯಕ್ತಿಗಳು ನಾವು ನೋಡಿದ್ದು ವಿರಳ. ಅಂತಹವರ ಮೇಲೆ ಕೂಡ ಅಂದಿನ ಕಾಲದಲ್ಲಿ ಆರೋಪ ಬಂದಿತ್ತು. ಅದಕ್ಕೆ ಪುರಾವೆ ಏನೂ ಇಟ್ಟಿರಲಿಲ್ಲ. ಆದರೂ ಕೂಡ ಅಲಿಗೇಷನ್ ಮಾಡಿದ ಮೇಲೆ, ಅವರು ತಕ್ಷಣ ಅದಕ್ಕೆ ಉತ್ತರವನ್ನು ಕೊಟ್ಟರು, respond ಮಾಡಿದರು. ಅದೇ ರೀತಿಯಾಗಿ ಮುಂದೆ ಮಾನ್ಯ ದೇವರಾಜ ಅರಸ್‌ರವರು ಅಧಿಕಾರಕ್ಕೆ ಬಂದರು. ಮಾನ್ಯ ದೇವರಾಜ ಅರಸ್ ಅವರ ಮೇಲೆ Commission of Enquiry ಕೆಳಗೆ ಎರಡು ಕಮಿಷನ್‌ಗಳು ರಚನೆಯಾದವು. ಒಂದು ಗ್ರೋವರ್ ಕಮಿಷನ್, ಆಮೇಲೆ ಇನ್ನೊಂದು ಷಾ ಕಮಿಷನ್. ಎರಡು

ಕಮಿಷನ್ ಮಾಡಿ ಅವರಿಗೆ ತೊಂದರೆ ಕೊಟ್ಟರು. ಆಗ ಅನೇಕ ವಿಷಯಗಳು ಪ್ರಸ್ತಾಪವಾದವು. ಆದರೆ ಆಗ ಅವರು ಸ್ಪಷ್ಟವಾಗಿ ಹೇಳಿದರು. ಆಗ ಅವರ ಮೇಲೆ ಅಂತಹ ಯಾವುದೇ ಗುರುತರವಾದಂತಹ ಆಪಾದನೆ ಇರಲಿಲ್ಲವಾದರೂ ಕೂಡ, ಪದೇ ಪದೇ ಅವರ ಮೇಲೆ ಆಪಾದನೆ ಮಾಡಿ, ಕೊನೆಗೆ ಎಲ್ಲಿಯವರೆಗೂ ಮಾಡಿದರು ಎಂದರೆ, ನಾವೆಲ್ಲಾ ಆಗ ಮಂತ್ರಿಗಳಾಗಿದ್ದೆವು, ವಿಮಾನದಲ್ಲಿ ಇನ್ನೂ ನಾವು ಕರ್ನಾಟಕ ಭವನಕ್ಕೆ ಹೋಗುತ್ತಾ ಇದ್ದಾಗ ಆ charges ಮೇಲೆ ನಮ್ಮ Assembly dissolve ಆಯಿತು. ಅಂತಹ ದೊಡ್ಡ ಶಿಕ್ಷೆ ಸಿಕ್ಕಿತು. ನಾವು ನೀವೊಬ್ಬರೇ ರಾಜೀನಾಮೆ ಕೊಡಿ, ಇದು ಸಾಬೀತಾಗಲಿಲ್ಲವೆಂದರೆ ಪುನಃ ಬಂದು ಕುಳಿತುಕೊಳ್ಳಿ ಎಂದು ಹೇಳುತ್ತಿದ್ದೇವೆ. ಆದರೆ ಆಗ ಇಡೀ ಹೌಸ್‌ನ್ನೇ ಡಿಸಾಲ್ವ್ ಮಾಡಿದರು. ಆಗ ನಾನು Primary and Secondary Education Minister ಆಗಿದ್ದೆ. ಹೀಗೆ ಅನೇಕ ಸನ್ನಿವೇಶಗಳಿವೆ. ಅನೇಕ ಜನ respond ಮಾಡಿದ್ದಾರೆ, ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಅವರಿಗೆ ಶಿಕ್ಷೆ ಕೊಡಲಾಗಿದೆ. ಅದೇ ರೀತಿಯಾಗಿ ಮುಂದೆ ಮಾನ್ಯ ದೇವೇಗೌಡರ ಮೇಲೆ ಮಾನ್ಯ ಜೀವಿಜಯರವರು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಆಪಾದನೆ ಮಾಡಿದಾಗ ಸಿಓಡಿ ಎನ್‌ಕ್ವೈರಿ ಮಾಡಿಸಲಾಯಿತು. ಎಷ್ಟು ಉದಾಹರಣೆ ಬೇಕು ನಿಮಗೆ? ಆಮೇಲೆ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಬ್ರದರ್ ಗಣೇಶ ಹೆಗಡೆಯವರು rice smugglingನಲ್ಲಿ indulge ಆಗಿದ್ದಾರೆಂದು case register ಮಾಡಿದರು. ಮುಂದೆ ಮಾಣಿಕ್‌ರಾವ್ ಪಾಟೀಲ್‌ರವರು discretionary quotaನಲ್ಲಿ ಸಿಮೆಂಟ್ ಕೊಟ್ಟಿದ್ದಾರೆ ಎಂದು ಆಪಾದನೆ ಮಾಡಿದಾಗ ಅದನ್ನು Public Accounts Committeeಗೆ refer ಮಾಡಿ, ನೀವು ರಾಜೀನಾಮೆ ಕೊಡಬೇಕೆಂದು ಇಲ್ಲಿ ಧರಣಿ ಮಾಡಿದರು. Sub Inspector recruitmentಗೆ 2 ಲಕ್ಷ ರೂಪಾಯಿಗಳನ್ನು ಶ್ರೀಮತಿ ರೇಣುಕಾ ರಾಜೇಂದ್ರನ್ ಆಕೆಯ ಗಂಡ ತೆಗೆದುಕೊಂಡಿದ್ದಾರೆ ಎಂದು ಹೇಳಿ, ಆಕೆಗೆ forcibly resignation ಕೊಡಿಸತಕ್ಕಂಥದ್ದು ಮಾಡಿದರು. ಆರ್.ಡಿ.ಕಿತ್ತೂರ್, ಪಾಪ ! ಅವರ ಮನೆಯಲ್ಲಿ ಯಾರೋ ಗೋವಾದಿಂದ ಒಬ್ಬ ಹೆಣ್ಣುಮಗಳು ಬಂದು ಹೋದಳು ಎನ್ನುವುದನ್ನು ಹಿಡಿದುಕೊಂಡು, ಅದರ ಬಗ್ಗೆ ಸಂಯುಕ್ತ ಕರ್ನಾಟಕದಲ್ಲಿ ದೊಡ್ಡದಾಗಿ ಬಂತು ಎಂದು ಹೇಳಿ, ಅವರಿಗೆ ರಾಜೀನಾಮೆ ಕೊಡಿಸಿದರು. ಆಗ ಅವರು Minister State for Home ಆಗಿದ್ದರು. ಆಗ ರೈಸ್ ಮಾಡಿದಂತಹ ಮಹಾ ಪುರುಷರು ಇಲ್ಲೇ ಇದ್ದಾರೆ. ಮಹಿಳೆ ಮೇಲೆ ಅತ್ಯಾಚಾರ, ಅದು, ಇದು ಎಂದು ದೊಡ್ಡ

ಭಾಷಣ ಬಿಗಿದು, ಒಬ್ಬ innocent ಆದ, ಸಂಬಂಧವಿಲ್ಲದಂತಹ ಮಿನಿಸ್ಟರ್‌ರಿಂದ resignation ಕೊಡಿಸಿದರು. ಆಗ ಯಾವ proof ಕೂಡ ಇರಲಿಲ್ಲ. ಯಾರೂ ಆಗ proof ಕೇಳಲಿಲ್ಲ ಅಥವಾ ಯಾರೂ ಕೂಡ ನೀವು ದಾಖಲೆ ತಂದು ಕೊಡಿ, ನಾನು ತೆಗೆದು ಹಾಕುತ್ತೇನೆ ಅನ್ನತಕ್ಕಂಥದ್ದನ್ನು ಹೇಳಿರಲಿಲ್ಲ. ಗಲಾಟೆ ಮಾಡಿ, ಇಲ್ಲೇ ಎಲ್ಲರೂ ಧರಣಿ ಮಾಡಿ, ಸದನ ನಡೆಸದಂತೆ ಮಾಡಿದಾಗ, ಕೊನೆಗೆ ಆ ನಿರ್ಣಯಕ್ಕೆ ಬಂದರು. ಮಾನ್ಯ ದೇವೇಂದ್ರಪ್ಪ ಗಾಳಪ್ಪ, ಯಾರೋ ಒಬ್ಬ ಹೆಣ್ಣುಮಗಳು ಅವರ ಮನೆಯಲ್ಲಿ ಬಂದು, ಕಾಂಪೌಂಡ್ ಹಾರಿ ಹೋದಳು, ಅವಳು ಯಾರು ಎಂದು ಹುಡುಕಿರಿ ಎಂದು ಹೇಳಿ, ಅದರ ಮೇಲೆ ಗಲಾಟೆಯಾಯಿತು. ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಕಳ್ಳತನ ಮಾಡಿ ಓಡಿ ಹೋದರೆ ಅವರಿಗೆ ಹಿಡಿಯುವುದಿಲ್ಲ. ಹಣಿಕೆ ಹಾಕಿ ನೋಡಿದರೆ ಮಾತ್ರ ಹಿಡಿಯುತ್ತಾರೆ. ಹಾಗಾಗಿದೆ ಇವತ್ತು. ಇನ್ನು ಮಾನ್ಯ ಸಿ.ಎಂ. ಇಬ್ರಾಹಿಂ ಸಾಹೇಬರ ಪ್ರಕರಣ, ಆಗಲೂ ಕೂಡ ಏಳು ರೋಲರ್ ಫ್ಲೋರ್ ಮಿಲ್ಸ್‌ಗೆ, ರೋಲೆಕ್ಸ್ ವಾಚ್‌ಗೆ ಗಲಾಟೆಯಾಯಿತು. ಅದನ್ನು ಯಾವ ಮಾರಾಯನೋ, ಎಲ್ಲಿಂದ ತಂದಿದ್ದನೋ ಗೊತ್ತಿಲ್ಲ. ಈಗ ನೀವೆಲ್ಲಾ ಇಲ್ಲಿ ತಿರುಗಿದರೆ, ವಿಧಾನಸೌಧದಲ್ಲಿ ಇರತಕ್ಕಂಥ ಶಾಸಕರು ಇರಬಹುದು, ಮಂತ್ರಿಗಳು ಇರಬಹುದು, 2–3 ರೋಲೆಕ್ಸ್ ವಾಚ್ ಕಟ್ಟಿರುವವರಾದರೂ ಸಿಗಬಹುದು ಎಂದು ನನಗನ್ನಿಸುತ್ತದೆ. ಈಗ ನಾವು ಮತ್ತು ನೀವೆಲ್ಲಾ ನೋಡಿಕೊಂಡರೂ ಕೂಡ, ಯಾರೂ ಟೈಟಾನ್ ಅಥವಾ ಹೆಚ್.ಎಂ.ಟಿ.ಗಿಂತಲೂ foreign watchಗಳನ್ನೇ ಹೆಚ್ಚಿಗೆ ಕಟ್ಟಿಕೊಂಡಿರುವುದು ಕಂಡು ಬರುತ್ತದೆ. ನಮ್ಮಲ್ಲಿ Foreign pen ಅಥವಾ foreign ಚಶ್ಮಾನೇ ಇಟ್ಟುಕೊಂಡವರೇ ಹೆಚ್ಚಿಗೆ ಇದ್ದೇವೆ. ಆದರೆ ಆ ಕಾಲದಲ್ಲಿ ಆ ಒಂದು ಇಶ್ಯೂ ಮೇಲೆ ಅವರು ರಾಜೀನಾಮೆ ಕೊಟ್ಟರು. ಮಾನ್ಯ ಆರ್.ಎಲ್.ಜಾಲಪ್ಪ ಪ್ರಕರಣ ನಿಮಗೆ ಗೊತ್ತಿದೆ, ಅದರ ಬಗ್ಗೆ ನಾನು ಹೇಳಬೇಕಾಗಿಲ್ಲ. ಆಗ ಅವರು ನಿಮ್ಮ ಗರಡಿಯಲ್ಲೇ ಇದ್ದರು. ಆಗ ಏನೇನು ಕಥೆಯಾಯಿತು ಎಂಬುದು ತಮಗೆ ಗೊತ್ತಿದೆ. ಇಷ್ಟೊಂದು incidents ನಡೆದಿವೆ. ಇದ್ಯಾವುದಕ್ಕೂ ಕೂಡ ಎನ್‌ಕ್ವೈರಿ ಮಾಡುವಾಗ ಅಥವಾ ಎನ್‌ಕ್ವೈರಿಯನ್ನು ಅನೌನ್ಸ್ ಮಾಡುವುದಕ್ಕಿಂತ ಮುಂಚೆ ಯಾರೂ ಕೂಡ ದಾಖಲೆ ಕೊಟ್ಟು, 'ಇಲ್ಲಿ ದಾಖಲೆಗಳಿವೆ, resignation ಈ ಒಂದು ದಾಖಲೆಯ ಆಧಾರದ ಮೇಲೆ ನೀವು ಎನ್‌ಕ್ವೈರಿ ಮಾಡಿ, ತೆಗೆದುಕೊಳ್ಳಿರಿ' ಎಂದು ಹೇಳಲಿಲ್ಲ. ಇವತ್ತು ನಾವು ಆಪಾದನೆ ಮಾಡಿಲ್ಲ. ನಮ್ಮಲ್ಲಿ ಅದು ಇದ್ದಿದ್ದರೆ ನಾವು ಧೈರ್ಯವಾಗಿ ಹೇಳುತ್ತಿದ್ದೆವು. ಆದರೆ ಇವತ್ತು ನಿಮ್ಮ ಮಿತ್ರ ಪಕ್ಷದ ಒಬ್ಬ ಸದಸ್ಯರೇ ಧೈರ್ಯವಾಗಿ ಹೇಳುತ್ತಿದ್ದಾರೆ. ಅವರ ಧೈರ್ಯವನ್ನು ಕುಗ್ಗಿಸತಕ್ಕಂಥ ಕೆಲಸವನ್ನು ರಾತ್ರಿ–ಹಗಲೂ ನೀವು ಮಾಡುತ್ತಿದ್ದೀರಿ. ಅವರ

ಧೈರ್ಯವನ್ನು ಆದಷ್ಟು, ಅವರಿಗೆ ಇಲ್ಲದ ಹಿಂಸೆಗಳನ್ನು ಕೊಟ್ಟು, ತೊಂದರೆಗಳನ್ನು ಕೊಟ್ಟು, ಅವರಿಗೆ ತಿರುಗಿ-ಮುರುಗಿ ಡಿನೈ ಮಾಡಿಸಬೇಕೆಂದು ಪ್ರಯತ್ನಗಳು ನಡೆದಿವೆ. ಆದರೂ ಕೂಡ ಜನಾರ್ಧನ ರೆಡ್ಡಿ ಬಹದ್ದೂರ್ ಎಂದು ನಾನು ಒಪ್ಪುತ್ತೇನೆ. ಏಕೆಂದರೆ, ಪಾಪ ಇವರ್‍ಯಾರ ಮಾತಿಗೂ ಅವರು ಜಗುತ್ತಿಲ್ಲ. ಅವರು ಮಾನ್ಯ ಶೆಟ್ಟರ್‌ರವರ ಹತ್ತಿರ ಹೋದರು, ಮಾನ್ಯ ಯಡಿಯೂರಪ್ಪನವರ ಹತ್ತಿರ ಹೋದರು. ಎಲ್ಲರೂ ಅನೇಕ ಮುಖಂಡರು ಅವರ ಮನೆಗೆ ಹೋಗಿ ಅವರ ಮನವೊಲಿಸತಕ್ಕಂಥ ಪ್ರಯತ್ನವನ್ನು ಮಾಡಿದರು. ಆದರೆ ಕೊನೆಗೆ ಅವರು ಯಾರ ಮಾತನ್ನೂ ಕೇಳಲಿಲ್ಲ. ಅವರೂ ಕೇಳಲಿಲ್ಲ, ಅವರ ಅಣ್ಣನೂ ಕೇಳಲಿಲ್ಲ, ಮೇಯರ್ ಆಗಿರುವ ಅವರ ತಮ್ಮನೂ ಕೇಳಲಿಲ್ಲ, ಅವರಿಗೆ ಸಂಬಂಧಪಟ್ಟಂತಹ ಒಬ್ಬರು ಮಂತ್ರಿಗಳು, ಅವರೂ ಕೇಳಲಿಲ್ಲ. ಇಂತಹ ಪರಿಸ್ಥಿತಿ ಇದ್ದಾಗ ನೀವೇ ಹೇಳಬೇಕು? ಯಾವಾಗ ನಿಮ್ಮ ಜೊತೆಗಾರರೇ ನಿಮ್ಮ ಮೇಲೆ ಅಲಿಗೇಷನ್ ಮಾಡುತ್ತಾರೋ, ಆಗ ನಾನು ಯಾವ ನೈತಿಕ ಧೈರ್ಯವನ್ನು ತೆಗೆದುಕೊಂಡು ಜನರ ಮುಂದೆ ಹೋಗಲಿ, ಯಾವಾಗ ನಿಮ್ಮ ಮಂತ್ರಿ ಮಂಡಲದಲ್ಲೇ ಇದ್ದು ಈ ಚಾರ್ಜಸ್ಸ್ ಅನ್ನು ಮಾಡಿದರೋ, ಆಗ ನಾನು ಹೇಗೆ ಮುಖವನ್ನು ಜನರಿಗೆ ತೋರಿಸಬೇಕು ಅನ್ನತಕ್ಕಂಥ ಮಾತನ್ನು ಜನರಿಗೆ ಹೇಳತಕ್ಕಂಥ ಧೈರ್ಯವನ್ನು ನೀವು ತೋರಿಸಲಿಲ್ಲವೆಂದರೆ ಹೇಗೆ? ನಿಮ್ಮದು ಇದರಲ್ಲಿ ಎಲ್ಲಾ ಇದೆ ಎಂದು ದಿನಕರ್ ಪುಸ್ತಕ ತೋರಿಸುವುದು ಅಥವಾ ಯಾವುದಾದರೂ ಫೈಲ್ ಅಥವಾ ಕಡತ ತಂದು ಇದರಲ್ಲಿ ಕಳೆದ 50 ವರ್ಷಗಳಲ್ಲಿಯ ಎಲ್ಲರ ಹಣೆಬರಹ ಇದೆ ಎಂದು ತೋರಿಸುವುದು, ಕೇವಲ ನಮಗೋಸ್ಕರವೇ? ನಿಮ್ಮ ಹಣೆಬರಹ ಏನು ಎಂಬುದನ್ನು ಮೊದಲು ನೋಡಿಕೊಳ್ಳಿ. ನಿಮ್ಮವರು ನೀವು ಏನೆಂದು ನಿಮ್ಮ ಬಗ್ಗೆ ಅಭಿಪ್ರಾಯ ಕೊಟ್ಟಿದ್ದಾರೆ. ಬೇರೆಯವರು ಹೇಳುವುದು ಬೇರೆ. ನಾವೇನೂ ಹೊಟ್ಟೆಕಿಚ್ಚಿನಿಂದ ಹೇಳುತ್ತೇವೆ ಎಂದಿಟ್ಟುಕೊಳ್ಳಿ ಅಥವಾ ಈ ಕಡೆಗೆ ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ, ಆದ್ದರಿಂದ ಹಾಗೆ ಹೇಳುತ್ತೇವೆ ಎಂದು ಹೇಳುತ್ತೇವೆ ಎಂದಿಟ್ಟುಕೊಳ್ಳಿ. ನಿಮ್ಮವರು ಏಕೆ ಹೇಳುತ್ತಾರೆ? ಇದರಲ್ಲಿ ಸತ್ಯಾಂಶ ಇಲ್ಲವೆಂದರೆ ಅವರು ಏಕೆ ಹಾಗೆ ಹೇಳಿದರು? ಅವರು ಹೇಳಿದರೂ ನೀವು ಸುಮ್ಮನೆ ಏಕೆ ಕುಳಿತಿರಿ ಅಥವಾ ನಿಮ್ಮ ಮಿತ್ರ ಪಕ್ಷದ ಮುಖಂಡರು ಏಕೆ ಸುಮ್ಮನೆ ಕುಳಿತರು? ಈ ಸಂಶಯ ದೇಶದ ಜನರಿಗೆ ಬರುವುದಿಲ್ಲವೇ? ಸಾಮಾನ್ಯ ಜನರಿಗೆ ಬರುವುದಿಲ್ಲವೇ? ಕೆಲವು ಪತ್ರಿಕೆಗಳಲ್ಲಿ ನಾನೂ ನೋಡಿದೆ, ಪ್ರೂಫ್ ಇಲ್ಲವೆಂದು ಬರೆದಿದ್ದಾರೆ. ಪ್ರೂಫ್ ಇಲ್ಲವೆಂದು ಮೇಲೆ ಎಲ್ಲಾ ಪತ್ರಿಕೆಗಳಲ್ಲೂ ಕೂಡ ಏಕೆ ಬರೆದರು? ಇದು ಹೇಗೆ? ಪತ್ರಿಕೆಯವರು ಯಾವ ರೀತಿಯಾಗಿ ಮಾಹಿತಿಯನ್ನು ಕಲೆಕ್ಟ್ ಮಾಡುತ್ತಾರೋ, ಅದೇ ರೀತಿಯಾಗಿ ನಾವೂ ಕೂಡ ಪತ್ರಿಕೆ ಮುಖಾಂತರ, ಜನರ ಮುಖಾಂತರ ಅನೇಕ

ಮಾಹಿತಿ ಕಲೆಕ್ಟ್ ಮಾಡಿದ್ದೇವೆ. ಕೆಲವು ಜನ ನಮ್ಮ ಹೆಸರು ಹೇಳಬೇಡಿ, ಈ ರೀತಿಯಾಗಿ ಮಾಹಿತಿ ಇದೆ ಎಂದು ಹೇಳುತ್ತಾರೆ, ಅದನ್ನು ನಾವೂ ಹೇಳುವುದಕ್ಕಾಗುವುದಿಲ್ಲ. ಪತ್ರಿಕೆಯವರಿಗೂ ಕೂಡ ಆಗುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿ ಕೂಡ ಇರುತ್ತದೆ. ಇವತ್ತು ಪ್ರೂಫ್ ಇರತಕ್ಕಂಥದ್ದೂ ನಿಮ್ಮ ಕಡೆಯಲ್ಲೇ. ಈಗಾಗಲೇ ಮಾನ್ಯ ಧರ್ಮಸಿಂಗ್‌ರವರು ಹೇಳಿದ ಹಾಗೆ ನಾವೇನೂ ನಿಮ್ಮ ಮೇಲೆ ಅಲಿಗೇಷನ್ ಮಾಡಿಲ್ಲ. ಅಲಿಗೇಷನ್ ಮಾಡಿರುವವರು ಯಾರು? ಕೊಟ್ಟಿರುವವರು, ನಾನು ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದಾರೆ. ತೆಗೆದುಕೊಂಡವರು ಮಾತ್ರ ನಮಗೆ ಕೊಟ್ಟಿಲ್ಲ, ಸಿಕ್ಕಿಲ್ಲ, ಇದು ಸುಳ್ಳು, ನಾನು ಎಣಿಸುವುದಕ್ಕೂ ಹೋಗಿಲ್ಲ, 150 ಕೋಟಿ ರೂಪಾಯಿಗಳು ಎಂದರೆ ಎಷ್ಟು ಸೊನ್ನೆ ಇದೆ ಎಂಬುದೂ ಕೂಡ ನನಗೆ ನೆನಪಿಲ್ಲ ಎಂದು ಅವರು ಹೇಳುತ್ತಾರೆ. ಅಂದರೆ ಇದು ನಿಮಗಿಬ್ಬರ ಮಧ್ಯೆ ನಡೆದಿದೆ. ಅದರ ಸತ್ಯಾಂಶ ನಮಗೆ ಗೊತ್ತಾಗಬೇಕಲ್ಲವೇ? ಆ ಸತ್ಯಾಂಶ ನಮಗೆ ಗೊತ್ತಾಗಬೇಕಾದರೆ ಸಿಬಿಐ ಎನ್‌ಕ್ವೈರಿ ಆಗಲಿ. ಅದರಲ್ಲಿ ಪಾರ್ಲಿಮೆಂಟ್ ಸದಸ್ಯರು ಏನು ಹೇಳಬೇಕೋ ಹೇಳುತ್ತಾರೆ, ಎಂಎಲ್‌ಎಗಳು ಏನು ಹೇಳಬೇಕೋ ಹೇಳುತ್ತಾರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಹೇಳಬೇಕಾಗಿದೆಯೋ ಅದನ್ನು ಅಲ್ಲಿ ಹೇಳಲಿ. ಆ ಸಿಬಿಐ ಎನ್‌ಕ್ವೈರಿ ಆದ ಮೇಲೆ ಅದರಲ್ಲಿ ಏನೂ ಇಲ್ಲವೆಂದು ಬಂದಾಗ ಪುನಃ ತಾವು ಬೇಕಾದರೆ ಅಧಿಕಾರ ಸ್ವೀಕಾರ ಮಾಡಿ, ಮತ್ತೆ ಚಲಾಯಿಸಿ, ತಾವು ಅವಾಗ ಹೇಳುತ್ತೇವೆ, ನಿಜವಾಗಲೂ ಅವರಿಗೆ ಅನ್ಯಾಯವಾಯಿತೆಂದು ಆವಾಗ ನಾವು ಹೊಗೋಣ. ಆದರೆ ನಾವಾಗಿ ನಿಮಗೆ ತೇಜೋವಧೆ ಮಾಡುವುದಕ್ಕೆ ಬಂದಿಲ್ಲ, ನೀವಾಗಿ ನಿಮ್ಮ ತಲೆಯ ಮೇಲೆ, ನಿಮ್ಮ ಕಾಲ ಮೇಲೆ ಬಂಡೆಯನ್ನು ಹಾಕಿಕೊಂಡು ನಮ್ಮ ಮೇಲೆ ನೀವು ಸಿಟ್ಟು ಮಾಡುತ್ತಿದ್ದೀರಿ, ನಮ್ಮವರ ಮೇಲೆ ಬ್ಲಾಕ್ ಮೇಲ್ ಮಾಡುವುದು, ನಮ್ಮವರಿಗೆ ಎದುರಿಸತಕ್ಕಂಥದ್ದು, ಶಿವಕುಮಾರ್ ಮಾತನಾಡಿದರೆ, ನಿನ್ನ ಗಣಿ ಇಲ್ಲವೇನು ಎಂದು ಹೇಳುವುದು, ಮತ್ತೆ ಯಾರಾದರೂ ಎದ್ದರೆ ನಿನ್ನ ಕಡತವಿಲ್ಲವೇನು ಎಂದು ಹೇಳುವುದು, ಹೀಗೆ ಹೆದರಿಸಿ ಹೆದರಿಸಿ ಸರ್ಕಾರವನ್ನು ನಡೆಸುವುದಕ್ಕಾಗುತ್ತದೆಯೇ ಅಥವಾ ಹೆದರಿಸಿಕೊಂಡು ಎಷ್ಟು ದಿವಸ ನಾವು ಇಲ್ಲಿ ಬದುಕುವುದಕ್ಕಾಗುತ್ತದೆ? ನಾವು ಹೇಳುತ್ತೇವೆ, ಆಯಿತಪ್ಪ, ಒಂದು ಸಾರಿ, ಎರಡು ಸಾರಿ ಅನ್ನಿಸಿಕೊಂಡಿದ್ದೇವೆ, ಮುಂದೆ ಏನು ಆಗುತ್ತದೆಯೋ ನೋಡೋಣವೆಂದು ನಾವು ತಯಾರಿರುತ್ತೇವೆ. ಅದಕ್ಕೆ ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ, ತಾವು ಎಲ್ಲೆಲ್ಲಿ ಮಾತನಾಡಿದ್ದೀರಿ ಅಲ್ಲೆಲ್ಲ ಸಂಶಯ ಬರುವ ರೀತಿಯಲ್ಲಿ ಮಾತನಾಡಿದ್ದೀರಿ ಉದಾಹರಣೆಗೆ ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಅವರೇನು ಕೇಳಿದ್ದಾರೆ:

Then, why are you not going on the offensive? ಎಂದು I think Reddy must have been compelled to raise the bribery issue in the back drop of changing political ecquation in Bellary District. It must have been an emotional out burst. ಏನು ಪೊಲಿಟಿಕಲ್ ಇಕ್ವೇಷನ್? ಅಂದರೆ, ನಿಮಗೆ ಅವರಿಗೆ ವ್ಯತ್ಯಾಸ ಬಂದಂತಾಯಿತಲ್ಲಾ, ಬಿಜೆಪಿ, ಜೆಡಿಎಸ್ ನೀವಿಬ್ಬರೂ ಕೂಡಿ ಸರ್ಕಾರ ಮಾಡಬೇಕೆಂದು ಅನ್ ಪ್ರಿನ್ಸಿಪಲ್ಡ್ ಅಂಡ್ ಅನ್‌ಹೋಲಿ ಅಲಯನ್ಸ್ ಮಾಡಿಕೊಂಡು ಒಂದು ಕಡೆ ಸೇರಿದ್ದೀರಿ, ಸೇರಿಕೊಂಡು ನೀವು ಸರ್ಕಾರ ನಡೆಸುವುದನ್ನು ಬಿಟ್ಟು, ಒಬ್ಬ ಮುಖ್ಯಮಂತ್ರಿಗಳೇ ಏನೆಂದು ಹೇಳುತ್ತಾರೆಂದರೆ, I think Reddy must have been compelled to raise the bribery issue in the back drop of the changing political ecquations in Bellary District. ಬಿಂಜಿಂಗ್ ಪೊಲಿಟಿಕಲ್ ಇಕ್ವೇಷನ್ಸ್ ಎಂದರೆ, ಗೃಹಮಂತ್ರಿಗಳಾಗಿ ಎಂ.ಪಿ. ಪ್ರಕಾಶ್‌ರವರು ಆಗಿದ್ದಾರೆ ಬಹುಶಃ ಅದಕ್ಕೆ ಹೆದರಿಕೊಂಡು ಅವರು ಈ ರೀತಿಯಾದ ಚಾರ್ಜಸ್ ಮಾಡುತ್ತಿದ್ದಾರೆ ಎನ್ನುವ ಮಾತನ್ನು ತಾವು ಹೇಳಿದಿರಿ, ಅಂದರೆ, ಈ ರೀತಿಯಾಗಿ ಒಬ್ಬರಿಗೊಬ್ಬರು ಹೆದರಿಕೊಂಡು ರಾಜ್ಯ ಆಳುವುದಿದ್ದರೆ ಎಷ್ಟು ದಿವಸ ನೀವು ಆಳುತ್ತೀರಿ? ಎಷ್ಟು ಚೆನ್ನಾಗಿ ಆಳುತ್ತೀರಿ? ಎಷ್ಟರ ಮಟ್ಟಿಗೆ ಕಾನೂನು ಸುವ್ಯವಸ್ಥೆ ಇರುತ್ತದೆ? ಮತ್ತೆ ಎಷ್ಟರ ಮಟ್ಟಿಗೆ ಹೊಂದಾಣಿಕೆ ಇದೆ, ಎಷ್ಟರಮಟ್ಟಿಗೆ ರಾಜ್ಯ ಅಭಿವೃದ್ಧಿಯಾಗುತ್ತದೆ ಎನ್ನುವ ಮಾತನ್ನು ನಾನು ಕೇಳಬೇಕಾಗುತ್ತದೆ. ಮುಂದೆ ಇಷ್ಟಕ್ಕೆ ನಿಲ್ಲುವುದಿಲ್ಲ, ಇನ್ನೊಂದು ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ, Are you suggesting a conspiracy? Conspiracy is a part of Political King. When something like this comes up, there has to be a conspiracy. But, I will not lose my confidence. Neither will I back off out of fear? Reddy says he has concrete evidence to substantiate his claim. So, is the Congress. I will not run away from the situation. If, they have any evidence, let them produce. I know how to handle it. ಅಂದರೆ, ರೂಲಿಂಗ್ ಪಾರ್ಟಿಯ ಒಬ್ಬ ಸದಸ್ಯರು ನಮ್ಮಲ್ಲಿ ಪ್ರೂಫ್ ಇದೆ ನಾನು ಸಾಬೀತುಪಡಿಸುತ್ತೇನೆಂದು ಚಾಲೆಂಜ್ ಮಾಡುತ್ತಾರೆ, ಇವರು (ಮುಖ್ಯಮಂತ್ರಿಗಳು) ಆ ಎವಿಡೆನ್ಸ್ ಕೊಡಲಿ ನಾನು ಎನ್‌ಕ್ವೈರಿ ಮಾಡುತ್ತೇನೆ ಅಂತ ಅನ್ನುತ್ತಾರೆ. ನಿಮಗೆ ಎವಿಡೆನ್ಸ್ ಕೊಟ್ಟು, ನಿಮ್ಮ ಮೇಲೇ ಅಲಿಗೇಷನ್ ಇದ್ದು, ನಿಮಗೆ

ಪುರಾವೆಗಳನ್ನು ಕೊಟ್ಟು ನಾವೆಲ್ಲಿಗೆ ಹೋಗಬೇಕು? ಎನ್‌ಕ್ವೈರಿ ಕಮಿಷನ್ ಬಂದಾಗ ಅದರ ಮುಂದೆ ಪುರಾವೆಗಳನ್ನು ಕೊಡುತ್ತಾರೆ. ಅದನ್ನು ಬಿಟ್ಟು ನಮ್ಮ ಪುರಾವೆಗಳನ್ನು ತೆಗೆದುಕೊಂಡು ನೀವು ಮತ್ತೊಂದು ಕೊಟ್ಟರೆ ನಾವೇನು ಮಾಡೋಣ? ಅದಕ್ಕೆ, ರೆಡ್ಡಿಯವರೂ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ, ಏನೆಂದರೆ, ನಾನು ಎನ್‌ಕ್ವೈರಿ ಕಮಿಷನ್ ಮುಂದೆ ಅಥವಾ ನೀವೇನು ಎನ್‌ಕ್ವೈರಿ ಸೆಟ್ ಆಪ್ ಮಾಡುತ್ತೀರೋ ಅವರ ಮುಂದೆ ನಾನು ಎಲ್ಲಾ ಡಾಕ್ಯುಮೆಂಟ್ಸ್ ಎವಿಡೆನ್ಸ್ ಕೊಡುತ್ತೇನೆ ಎಂದು ಹೇಳಿದ್ದಾರೆ; ಇಷ್ಟೇ ಅಲ್ಲ ನನ್ನಲ್ಲಿ ಟೇಪ್ ಮಾಡಿದ್ದು ಇದೆ, ಆ ಟೇಪ್ ಅನ್ನು ಕೂಡ, ಯಾರು ಮುಖ್ಯಮಂತ್ರಿಗಳ ಬಗ್ಗೆ ಏನು ಮಾತನ್ನು ಹೇಳಿ ಹಣವನ್ನು ವಸೂಲ್ಮಾಡುತ್ತಿದ್ದರು ಅಂತಹದ್ದರ ಬಗ್ಗೆಯೂ ಕೂಡ ನಮ್ಮಲ್ಲಿ ಟೇಪ್ ಇದೆ ಎನ್ನುವ ಮಾತನ್ನು ಕೂಡ ಅಪ್ರತ್ಯಕ್ಷವಾಗಿ ದೆಹಲಿ ಮುಖಂಡರ ಮುಂದೆ ಹೇಳಿದ್ದಾರೆ. ಅವನ್ನೂ ಕೂಡ ಒಯ್ದಿದ್ದಾರೆ ಎನ್ನುವ ಮಾಹಿತಿ ನಮಗೆ ಬಂದಿದೆ, ಅದನ್ನು, ಸ್ವಾಭಾವಿಕವಾಗಿ ಅವರಲ್ಲಿ ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ಇದೆ ವೆರಿಫೈ ಮಾಡಲಿ. ಪಾಪ ಅವರನ್ನು ಇಲ್ಲಿ ಕರೆಯಿಸುವುದಕ್ಕೆ ಬರುತ್ತಿಲ್ಲ, ಆ ಟೇಪ್ ಇವರಿಗೆ ಹೇಗೆ ಸಿಗಬೇಕು? ಅದಕ್ಕೆ ಇದು ಡೆಫನೆಟ್, ಆ ಎವಿಡೆನ್ಸ್ ಹೊರಗಡೆ ಬರಬೇಕು, ಆ ಸತ್ಯಾಂಶ ಹೊರಗಡೆಗೆ ಬರಬೇಕೆಂದರೆ, ಇದರ ಬಗ್ಗೆ ಸಿಬಿಐ ಎನ್‌ಕ್ವೈರಿಯಾಗಬೇಕು, ಅದರ ಮುಂದೆ ಎವಿಡೆನ್ಸ್ ಕೊಡಲು ಸಾಧ್ಯವಾಗುತ್ತದೆ, ಎನ್‌ಕ್ವೈರಿ ಅಲಿಗೇಷನ್ ಯಾರ ಮೇಲಿದೆ, ಅವರೆ ನನಗೆ ಕೊಡಿ ಎಂದರೆ, ಇದು ಎಂದೂ ಕೂಡ ಸಾಧ್ಯವಾಗುವುದಿಲ್ಲ, ಎನ್‌ಕ್ವೈರಿ ಕೂಡ ಇಂಪಾರ್ಷಿಯಲ್ ಆಗಿ ನಡೆಯುವುದು ಇಲ್ಲ; ಇದೊಂದು ಕಡೆ; ಮೂರನೆಯದಾಗಿ, ಮೊನ್ನೆ ಯಡಿಯೂರಪ್ಪ ನವರೂ ಕೂಡ ಬಹಳ ಸಿಟ್ಟಿನಿಂದ ಹೇಳಿದರು, ಯಾರ ಮೇಲಿ ಸಿಟ್ಟಿತ್ತೋ ಗೊತ್ತಿಲ್ಲ, ಸರಿಯಾಗಿ ಊಟಗಿಟವಾಗಿರಲಿಲ್ಲವೇನೋ; ಅವರು ಸಿಟ್ಟಿನಿಂದ ನಡೆಯಿರಿ ಅದೇನಾಗುತ್ತದೆಯೋ ಆಗಲಿ ನೋಡೋಣ, ಹಿಂದೆಲ್ಲಾ ಏನೇನು ಆಗಿದೆ ಎಂದು ನನಗೂ ಗೊತ್ತಿದೆ ಎಂದು ಅವರು ಹೇಳಿದರು. ಆಮೇಲೆ ಸ್ವಲ್ಪ ಕಾವ್ರಾ ಡೌನ್ ಆದ ಮೇಲೆ, ಇದು ಇನ್ನೊಂದು ಮೂರ್ನಾಲು ದಿವಸದಲ್ಲಿ ಬಗೆಹರಿಸಯುತ್ತದೆ. ಯಾರೂ ಇಲ್ಲದೇ ಹೇಳಿದ್ದಾರೆ, ಪುನಃ ಅವರೇ ಬಂದು ಸತ್ಯ ಏನಿದೆ ಎನ್ನುವುದನ್ನು ಹೇಳುತ್ತಾರೆ ಎನ್ನುವ ಮಾತನ್ನು ಕೂಡ ಹೇಳಿದರು. ಅಂದರೆ, ಬಹುಶಃ ಇನ್ನೂ ಯಡಿಯೂರಪ್ಪನವರಿಗೆ ಮತ್ತು ಜನಾರ್ಧನರೆಡ್ಡಿಯವರಿಗೆ ಮೆಮೊರ್‍ಯಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಸಹಿ ಆಗಿಲ್ಲ, ಏಕೆಂದರೆ ಎಂಓಯುಗೆ ಸಹಿ ಆಗಿದ್ದರೆ ಮ್ಯಾಟರ್ ಕ್ಲೋಸ್ ಆಗುತ್ತಿತ್ತು, ಇನ್ನೂ ಎಂಓಯು ಸಹಿಯಾಗಿಲ್ಲ, ಇದು ಇನ್ನೂ ಹಾಗೆ ನಡೆದಿದೆ. ಇದನ್ನು ತಾವು ಕಂಟಿನ್ಯೂ ಮಾಡಿದಿರಿ, ಕಂಟಿನ್ಯೂ ಮಾಡಿದ್ದಕ್ಕಾಗಿ ರಾಜ್ಯದ ಜನ 10–15

ದಿವಸಗಳಿಂದ ಇದರ ಬಗ್ಗನೇ ಯೋಚನೆ ಚಿಂತನೆ ಮಾಡಿಕೊಂಡಿದ್ದಾರೆ. ಕೇವಲ ಅಸೆಂಬ್ಲಿಯಲ್ಲಿದ್ದವರು ಏನೋ ಇದನ್ನು ರೈಸ್ ಮಾಡಿ ತಮ್ಮ ಹೇಳಿಕೆಗಳನ್ನು ಕೊಟ್ಟು ಶಹಭಾಷ್‌ಗಿರಿ ಪಡೆಯಬೇಕೆನ್ನುವುದಲ್ಲಿ, ಇಡೀ ರಾಜ್ಯದ ಜನತೆಯೂ ಕೂಡ ಇದರ ಬಗ್ಗೆ ಚಿಂತಿತರಾಗಿದ್ದಾರೆ ಮತ್ತೆ ಇಡೀ ರಾಜ್ಯದ ಜನ ಕೂಡ ಇದರ ಬಗ್ಗೆ ಯೋಚನೆ ಮಾಡುತ್ತಿದ್ದಾರೆ, ಇದರಲ್ಲಿ ಏನಾದರೂ ಸತ್ಯಾಂಶವಿಲ್ಲದೆ ಇದ್ದರೆ ಇಷ್ಟರಲ್ಲಿ ತಾವು ಏನಾದರೂ ಮಾತನಾಡಿ ಇದೇನಾದರೂ ಇತ್ಯರ್ಥವಾಗುತ್ತಿತ್ತು, ನ್ಯಾಚುರಲಿ, ಇವತ್ತು ಅದು ಇಲ್ಲ, ಅದಕ್ಕಾಗಿ ಅವರು (ಜನಾರ್ಧನರೆಡ್ಡಿಯವರು) ಸ್ಪಷ್ಟವಾಗಿ ಸದನಕ್ಕೆ ಬರುವುದನ್ನೇ ಬಿಟ್ಟಿದ್ದಾರೆ, ಮಂತ್ರಿಗಳೂ ಬಿಟ್ಟಿದ್ದಾರೆ, ಎಂಎಲ್‌ಸಿಯವರೂ ಬಿಟ್ಟಿದ್ದಾರೆ, ಈಗ ಇವರ ಕೈಯಲ್ಲೂ ಕೂಡ ಅವರು ಸಧ್ಯಕ್ಕಿಲ್ಲ, ಇದೇನೋ ಅಧಿವೇಶನ ಧಾಟಲಿ ಎನ್ನುವ ಧಾಟಿಯಲ್ಲಿ ಅವರೂ ಕೂಡ ಇದ್ದಾರೆಂದು ಬಹುಶಃ ನನಗೆ ಸಂಶಯಬರುತ್ತಿದೆ; ಅವರೇನೋ 20 ತಿಂಗಳು ಮುಖ್ಯಮಂತ್ರಿಗಳಾಗಿ ಆದ ಮೇಲೆ ಮುಖ್ಯಮಂತ್ರಿಗಳಾಗಿ ಇವರು ಹೋಗಬೇಕೆಂದಿತ್ತು, ಈ ಅಧಿವೇಶನವಾದ ಮೇಲೆ ಎಲ್ಲಿ ವಿಸರ್ಜಿಸುತ್ತಾರೋ ಎನ್ನುವ ಸಂಶಯ ಮಾತ್ರ ಖಂಡಿತ ಬಂದಿದೆ, ಏಕೆಂದರೆ ಮಂತ್ರಿಗಳೇ ಸ್ವತಃ ಇಲ್ಲಿ ಬಂದು ಕ್ಲಾರಿಫೈ ಮಾಡುವುದಕ್ಕೆ ಸಿದ್ದರಿಲ್ಲ ಮತ್ತೆ ಎಂಎಲ್‌ಸಿಯವರಿಂದ ಸ್ಟೇಟ್‌ಮೆಂಟ್ಸ್ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲ.

(ಮಾನ್ಯ ಉಪ ಸಭಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಒಂದು ಪರಿಸ್ಥಿತಿಯಲ್ಲಿ ಇವತ್ತು ಇವರಿದ್ದಾರೆ; ಅದಕ್ಕಾಗಿ ನಾನು ಬಹಳ ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ, ಯಾವುದೇ ಪ್ರೂಫ್ ಇಲ್ಲದೆ ಅನೇಕ ಸಲ, ಈ ಹಿಂದೆ ಕೂಡ ಯಾರೂ ಕೂಡ ಇಲ್ಲಿ ಬಂದು ದಾಖಲೆ ಕೊಟ್ಟು ರಾಜೀನಾಮೆಯನ್ನು ಕೇಳಿಲ್ಲ. ಇವತ್ತು ನಮ್ಮಲ್ಲಿ ದಾಖಲೆ ಏನೇ ಇದ್ದರೂ ಕೂಡ ಅದನ್ನೂ ನಾವು ಎನ್‌ಕ್ವೈರಿ ಕಮಿಟಿ ಮುಂದು ಪ್ರೊಡ್ಯೂಸ್ ಮಾಡುತ್ತೇವೆ, ಅದು ಟೇಪ್ ಇರಬಹುದು ಅಥವಾ ಕ್ಲಿಪಿಂಗ್ ಇರಬಹುದು ಮತ್ತೊಂದಿರಬಹುದು, ನಾವು ಏನೇನು ಹೇಳಬೇಕೋ ಅದನ್ನು ಜನಾರ್ಧನ ರೆಡ್ಡಿಯವರ ಜೊತೆಯಲ್ಲಿ ನಮ್ಮಲ್ಲೇನಾದರೂ ಇದ್ದದ್ದನ್ನು ಪ್ರೊಡ್ಯೂಸ್ ಮಾಡಿ ನಮ್ಮ ಅಳಿಲು ಸೇವೆಯನ್ನು ಕೂಡ ಮಾಡುತ್ತೇವೆ, ಆದರೆ ನೀವು ಇಂಪಾರ್ಷಿಯಲ್ ಎನ್‌ಕ್ವೈರಿಗೋಸ್ಕರ ಅವಕಾಶ ಮಾಡಿಕೊಡಬೇಕಲ್ಲಾ? ಇಂಪಾರ್ಷಿಯಲ್ ಎನ್‌ಕ್ವೈರಿ ಅವರು ರಾಜಿನಾಮೆ ಕೊಟ್ಟರೆ ಮಾತ್ರ ಸಾಧ್ಯ ಅದಕ್ಕೆ ಅವರು ರಾಜಿನಾಮೆ ಕೊಟ್ಟು ಇದನ್ನು ಸಿಬಿಐಗೆ ರೆಫರ್ ಮಾಡಲಿ. ಅಲ್ಲಿಯವರೆಗೆ ಬೇಕಾದರೆ ಯಡಿಯೂರಪ್ಪನವರು ಇಂಚಾರ್ಜ್ ಇರಲಿ, ಆಕಾಶ ಕಡಿದು

ಬೀಳುವುದಿಲ್ಲ ಅವರೂ ನಿಮ್ಮ ಪಾರ್ಟಿನವರೇ ಅವರೂ ಕೂಡ 70–80 ಜನರಿದ್ದಾರೆ, ನಿಮ್ಮ ಡಬಲ್ ಸ್ಟ್ರಂಗ್ತ್ ಇದ್ದಾರೆ, ಯಾರಿಗೆ ಡಬಲ್ ಸ್ಟ್ರಂಗ್ತ್ ಇದೆ. ಅವರಿಗೆ ಕೆಲಸ ಮಾಡುವುದಕ್ಕೆ ಇನ್ನೂ ಹೆಚ್ಚಿನ ವಿಗರ್ ಬರುತ್ತದೆ, ಈಗ ನೀವೆಲ್ಲಾ ಅವರ ಮೇಲೆ ಡಿಪೆಂಡೆಂಟ್, ಅದಕ್ಕಾಗಿ ಅಲ್ಲಿಯವರೆಗೆ ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಆಕ್ಟಿಂಗ್ ಮುಖ್ಯಮಂತ್ರಿಗಳಾಗಿ ಮುಂದುವರೆಯಲಿ, ನೀವು ಸ್ವಲ್ಪದಿವಸ ರೆಸ್ಟ್ ತೆಗೆದುಕೊಂಡು, ನಿಮ್ಮ ವಿರುದ್ಧ ಯಾವುದೇ ಎವಿಡೆನ್ಸ್ ಇಲ್ಲ, ಏನೂ ಇಲ್ಲವೆಂಬುದಿದ್ದರೆ ಖಂಡಿತವಾಗಿಯೂ ತಾವು ಪುನಃ ಬರುವುದಕ್ಕೆ ಅವಕಾಶವಿದೆ. ಅದಕ್ಕೆ ಅಧ್ಯಕ್ಷರೆ, ಅವರು ರಾಜೀನಾಮೆ ಕೊಡಬೇಕು. ಈ ಕೇಸ್ ಸಿಬಿಐಗೆ ರೆಫರ್ ಮಾಡಬೇಕು, ಅಂದಾಗ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಇಲ್ಲದಿದ್ದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಮತ್ತು ಸ್ಪಷ್ಟವಾಗಿ ರಾಜ್ಯದ ಜನರ ಮನಸ್ಸಿನಲ್ಲಿ ಹಾಗೂ ದೇಶದ ಜನರ ಮನಸ್ಸಿನಲ್ಲಿ ಇದು ಇರುತ್ತದೆ. ಸುಮಾರು 150 ಕೋಟಿ ರೂಪಾಯಿ ಹಗರಣ ಏನಿದೆ ಎನ್ನತಕ್ಕಂಥದ್ದು ಇರುತ್ತದೆ. ನೇರವಾದ ಛಾರ್ಜಸ್ ತಾವು ಹೊತ್ತಿಕೊಳ್ಳುವುದಕ್ಕಿಂತಲೂ ಇದು ಎನ್‌ಕ್ವೈರಿ ಮಾಡಿಸಿ ತೊಳೆದು ಹಾಕಬೇಕೆಂದು ತಮ್ಮ ಮುಖಾಂತರ ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಅವರು ಮಾತನಾಡಲಿ ಸ್ವಲ್ಪ ಬೇಗ ಮುಗಿಸಲಿ. ಇನ್ನು ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ (ಅಳಂದ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ವಿಧಾನಸಭೆಯಲ್ಲಿ ಸದನದ ಕಲಾಪ ನಡೆಸುವುದಕ್ಕಾಗಿ ಒಂದು ಗಂಟೆಗೆ 2.50 ಲಕ್ಷ ರೂಪಾಯಿ ಸರ್ಕಾರದಿಂದ ಖರ್ಚಾಗುತ್ತದೆ ಎಂದು ಮತ್ತು ವಿಧಾನ ಪರಿಷತ್ತಿನದು 90,000 ರೂಪಾಯಿ ಖರ್ಚಾಗುತ್ತದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಮೊನ್ನೆಯಿಂದ ಇವತ್ತಿನವರೆಗೆ ಇದೇ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಇಷ್ಟೆಲ್ಲಾ ದುಡ್ಡು ಖರ್ಚು ಮಾಡಿ ನಾವೆಲ್ಲಾ ಸದನದ ಸದಸ್ಯರು ಸೇರಿ ಇದಕ್ಕೆ ಏನಾದರೂ ಒಂದು ನಿರ್ದಿಷ್ಟವಾದ ನಿರ್ಣಯವನ್ನು ಮಾಡಬೇಕು. ರಾಜ್ಯದ ಜನರ ಮನಸ್ಸಿನಲ್ಲಿ ಒಂದು ಅನುಮಾನ ಬಂದಿದೆ. ಆ ಅನುಮಾನವನ್ನು ನಾವು ನಿವಾರಣೆ ಮಾಡುವಂತಹ ಕೆಲಸವನ್ನು ಸರ್ಕಾರದವರು ಮಾಡಬೇಕೆನ್ನುವಂತಹ ಮಾತನ್ನು ಇವತ್ತು ಹೇಳುತ್ತಾ ಏನು ಆಳುವ ಪಕ್ಷದ ಸದಸ್ಯರಾದ ಮಾನ್ಯ ಜನಾರ್ಧನ ರೆಡ್ಡಿಯವರು ಒಂದು ಸುದ್ದಿ ಮಾಡಿದರು. ಈ ತರಹ ಮಂತ್ರಿಗಳು ದುಡ್ಡು ತೆಗೆದುಕೊಂಡರು ಎಂದು ಸುದ್ದಿ ಮಾಡಿದರು. ಈ ಸುದ್ದಿ ಆದ ತಕ್ಷಣ ನಮ್ಮ ನಿರೀಕ್ಷೆ ಏನಿತ್ತು ಎಂದರೆ ತಕ್ಷಣ ಸರ್ಕಾರದವರು ಅಲ್ಲಗಳೆದು ಇದಕ್ಕೆ

ಏನಾದರೂ ಒಂದು ಇತಿಶ್ರೀ ಹಾಕಿ, ಅದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ ಎನ್ನುವಂತಹ ಒಂದು ಭರವಸೆ ನಮಗೆಲ್ಲಾ ಇತ್ತು. ಈ ಮಧ್ಯೆ ಜನಾರ್ಧನ ರೆಡ್ಡಿಯವರು ತಾವು ಮಾಡಿದಂತಹ ಹೇಳಿಕೆ ಬಗ್ಗೆ ಮೇಲಿಂದ ಮೇಲೆ ಮೇಲಿಂದ ಮೇಲೆ ನಾನು ಹೇಳಿದ್ದಕ್ಕೆ ಬದ್ಧನಾಗಿದ್ದೇನೆ ಮತ್ತು ತನಿಖೆ ನಡೆದರೆ ಇದನ್ನು ಸಾಬೀತು ಪಡಿಸಲಿಕ್ಕೆ ನನ್ನ ಹತ್ತಿರ ಎಲ್ಲಾ ಸಾಕ್ಷ್ಯಾಧಾರಗಳು ಇವೆ ಎನ್ನುವ ಮಾತನ್ನು ಇವತ್ತಿನವರೆಗೂ ಹೇಳುತ್ತಾ ಬಂದಿದ್ದಾರೆ. ಇದರ ಬಗ್ಗೆ ಬಿಜೆಪಿ ಮೂಲಗಳಿಂದ ಒಬ್ಬರು ಹೇಳುತ್ತಾರೆ, ಇಲ್ಲ ಜನಾರ್ಧನ ರೆಡ್ಡಿಯವರು ಈ ತರಹ ಹೇಳಲಿಲ್ಲ ಪತ್ರಿಕೆಯವರು ಬೇರೆ ತರಹ ವರದಿ ಮಾಡಿದ್ದಾರೆ. ಇನ್ನೊಬ್ಬರು ಹೇಳುತ್ತಾರೆ ಅದನ್ನೆಲ್ಲಾ ನಾವು ಸರಿಪಡಿಸುತ್ತೇವೆ. ಮತ್ತೊಬ್ಬರು ಹೇಳುತ್ತಾರೆ ಇಲ್ಲ ಭಾವಾವೇಷದಿಂದ ಅವರು ಹೇಳಿದ್ದಾರೆ ಅಂತ. ಆದರೆ ಜನಾರ್ಧನ ರೆಡ್ಡಿಯವರು ಮಾತ್ರ ನಿರಂತರವಾಗಿ ತಾವು ಹೇಳಿದಂತಹ ಮಾತನ್ನು ಇವತ್ತಿನವರೆಗೂ ಹೇಳಿಕೊಂಡು ಬಂದಿದ್ದಾರೆ. ಯಾರು ಆರೋಪ ಮಾಡಿದ್ದಾರೆ ಆ ಆರೋಪವನ್ನು ಸಾಬೀತು ಪಡಿಸುತ್ತೇನೆ ಎನ್ನುವಂತಹ ಮಾತನ್ನು ಹೇಳಬೇಕಾದರೆ ಅವರಿಗೆ ಸೂಕ್ತವಾದ ಒಂದು ವೇದಿಕೆಯನ್ನು ಮಾಡಿಕೊಡಬೇಕಾದುದು ಸರ್ಕಾರದ ಜವಾಬ್ದಾರಿಯಾಗುತ್ತದೆ. ತಕ್ಷಣ ಎನ್‌ಕ್ವೈರಿಗೆ ಆರ್ಡರ್ ಮಾಡಿದ್ದರೆ ಸದನದಲ್ಲಿ ಇಷ್ಟೊಂದು ದೀರ್ಘವಾದ ಚರ್ಚೆ ಆಗಬೇಕಾದ ಅವಶ್ಯಕತೆ ಇರಲಿಲ್ಲ. ಮತ್ತು ರಾಜ್ಯದ ಜನರ ಮನಸ್ಸಿನಲ್ಲಿ ಇದರ ಬಗ್ಗೆ ಅನುಮಾನ ಆಗಬೇಕಾದ ಅವಶ್ಯಕತೆ ಇರಲಿಲ್ಲ. ಇದಕ್ಕೆ ಏನಾದರೂ ಒಂದು ಸ್ಪಷ್ಟವಾದ ನಿರ್ಣಯ ತೆಗೆದುಕೊಳ್ಳದೇ ಇದ್ದ ಕಾರಣಕ್ಕಾಗಿ ಜನರ ಮನಸ್ಸಿನಲ್ಲಿ ಸಂಪೂರ್ಣವಾಗಿ ಸ್ಪಷ್ಟವಾದ ಗುಮಾನಿ ಬಂದಿದೆ. ಇದರಲ್ಲಿ ಏನೋ ಒಂದು ನಡೆದಿದೆ. 'ದಾಲ್ ಮೆ ಕುಚ್ ಕಾಲಾ ಹೈ'. Something is fishy ಅಂತ. ಈ ಜನಾರ್ಧನ ರೆಡ್ಡಿಯವರು ಇವತ್ತು ಬೆಳಿಗ್ಗೆ ಡೆಲ್ಲಿಗೆ ಹೋಗಿದ್ದಾರೆಂದು ಪತ್ರಿಕೆಯಲ್ಲಿ ನೋಡಿದ್ದೇವೆ. ಇಲ್ಲಿ ನಮಗೆ ತಿಳಿದ ಹಾಗೆ ಜನಾರ್ಧನ ರೆಡ್ಡಿಯವರಿಗೆ ನಮ್ಮ ರಾಜ್ಯದ ಬಿಜೆಪಿ ನಾಯಕರು ಅವರ ಮೇಲೆ ಆದಷ್ಟು ಒತ್ತಡ ಹೇರಿ ಅವರ ಹೇಳಿಕೆ ವಾಪಸ್ ಪಡೆಯುವಂತಹ ಪ್ರಯತ್ನ ನಡೆಸಿದ್ದಾರೆಂದು ತಿಳಿದುಬಂದಿದೆ. ಆದರೆ ಇದರಲ್ಲಿ ಯಶಸ್ಸು ಆಗಲಿಲ್ಲ. ಇನ್ನು ಮುಂದೆ ದಿಲ್ಲಿ ನಾಯಕರ ಮುಖಾಂತರ ಹೇಳಿಸಿ ಜನಾರ್ಧನ ರೆಡ್ಡಿಯವರ ಹೇಳಿಕೆಯನ್ನು ವಾಪಸ್ ಪಡೆಯತಕ್ಕಂತಹ ಪ್ರಯತ್ನ ಕೂಡ ಆ ಪಕ್ಷದಲ್ಲಿ ನಡೆದಿದೆ ಎಂದು ತಿಳಿದು ಬಂದಿದೆ. ನನಗನ್ನಿಸುತ್ತದೆ ಬಿಜೆಪಿ ಅದೂ ಕೂಡ ಒಂದು ರಾಷ್ಟ್ರೀಯ ಪಕ್ಷ. ಅದೇ ಪಕ್ಷದ ಒಬ್ಬ ಸದಸ್ಯರು ಈ ತರಹದ ಬಹಿರಂಗವಾದ ಆರೋಪವನ್ನು ಮಾಡಿದ ಮೇಲೆ ಒಂದು ರಾಷ್ಟ್ರೀಯ ಪಕ್ಷದಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳುವುದು ಸಾಮಾನ್ಯ ಪದ್ಧತಿ ಮತ್ತು ಪರಂಪರೆ ಅವರ ಪಕ್ಷದಲ್ಲಿ ಬಂದಿದೆ.

ಯಾರೇ ಪಕ್ಷದ ವಿರುದ್ಧ ಅಥವಾ ಸರ್ಕಾರದ ವಿರುದ್ಧ ನಿಂತುಕೊಂಡು ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಂಡ ಉದಾಹರಣೆಗಳು ಇವೆ. ಆದರೆ ಇಲ್ಲಿಯವರೆಗೆ ಅವರ ಮೇಲೆ ಯಾರೂ ಕೂಡ ಕ್ರಮ ಕೈಗೊಂಡಿಲ್ಲ. ಇದರ ಅರ್ಥವೇನು? ಇದರ ಅರ್ಥವೇನೆಂದರೆ ಜನಾರ್ಧನ ರೆಡ್ಡಿಯವರ ಹತ್ತಿರ ಇದಕ್ಕೆ ಸಾಬೀತು ಪಡಿಸುವಂತಹ ಸಂಪೂರ್ಣ ಸಾಕ್ಷ್ಯಾಧಾರಗಳು ಇವೆ ಎಂದು ಕೂಡ ಬಿಜೆಪಿ ನಾಯಕರಿಗೆ ಮನವರಿಕೆ ಆಗಿರಲೇಬೇಕು. ಇಲ್ಲದಿದ್ದರೆ ಒಂದು ರಾಜಕೀಯ ಪಕ್ಷವಾಗಿ ಅವರು ಏನಾದರೂ ಒಂದು ಕ್ರಮ ಕೈಗೊಳ್ಳುತ್ತಿದ್ದರು. ಇದು ಆಗಲಿಲ್ಲ. ಇದು ಆದ ಮೇಲೆ ನಮ್ಮ ಮುಖ್ಯಮಂತ್ರಿಗಳು ಸ್ವಾಭಾವಿಕವಾಗಿ ಯಾರೇ ಒಬ್ಬರು ನಿರಾಧಾರವಾದ ಆರೋಪವನ್ನು ಮಾಡಿದರೆ ಆ ಜಾಗದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ ಇರಲಿ, ನಾವು ಇರಲಿ ಯಾವುದೇ ಮುಖ್ಯ ಮಂತ್ರಿ ಆ ಜವಾಬ್ದಾರಿ ಜಾಗದಲ್ಲಿ ಇರಲಿ ಆರೋಪ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸಾಮಾನ್ಯವಾದ ಪದ್ಧತಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಅವರ ಮೇಲೆ ಡೆಫರ್ಮೇಷನ್ ಕೇಸ್ ಹಾಕುತ್ತೇನೆಂದು ಹೇಳಿದರು. ಬಹಳ ಸಂತೋಷ ಏಕೆಂದರೆ ಯಾವುದೇ ಒಬ್ಬ ವ್ಯಕ್ತಿ ನಿರಾಧಾರವಾದ ಆರೋಪ ಮಾಡಿದ ಮೇಲೆ ಈ ತರಹ ಕಾನೂನು ಕ್ರಮ ಕೈಗೊಂಡು ಅದರಿಂದ ಹೊರಗಡೆ ಬರಬೇಕಾದಂಥದ್ದು ಬಹಳ ಅವಶ್ಯಕತೆ ಇರುತ್ತದೆ. ಆದರೆ ಇಲ್ಲಿಯವರೆಗೆ ಯಾವುದೇ ಒಂದು ಕಂಪ್ಲೇಂಟ್ ಕೂಡ ಕೊಡಲಿಲ್ಲ. ಕೇಸ್ ಮಾಡಲಿಲ್ಲ. ಮತ್ತು ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಕೂಡ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಒಬ್ಬ ಮಾನ್ಯ ಮುಖ್ಯಮಂತ್ರಿಗೆ ಬ್ಲಾಕ್ ಮೇಲ್ ಮಾಡುವುದು ಎಂದರೆ ಬಹಳ ದೊಡ್ಡ ಅಪರಾಧ. ಬ್ಲಾಕ್ ಮೇಲ್ ಮಾಡುವುದಾದರೆ ಅವರ ಮೇಲೆ ಪೋಲಿಸ್ ಕಂಪ್ಲೇಂಟ್ ಕೊಡಬಹುದಾಗಿತ್ತು. ಇಂತಹ ಒಬ್ಬ ಮನುಷ್ಯ ನನಗೆ ಬ್ಲಾಕ್ ಮೇಲ್ ಮಾಡಿ ನನ್ನ ಘನತೆಗೆ ಮತ್ತು ಗೌರವಕ್ಕೆ ಧಕ್ಕೆ ತರುತ್ತಿದ್ದಾನೆಂದು ಇವರ ಮೇಲೆ ಕ್ರಮಕೈಗೊಳ್ಳಬೇಕೆಂದು ಪೋಲೀಸ್‌ನವರಿಗೆ ಕಂಪ್ಲೇಂಟ್ ಕೊಡಬಹುದಾಗಿತ್ತು. ಅದು ಮಾನ್ಯ ಮುಖ್ಯಮಂತ್ರಿಗಳು ಮಾಡಲಿಲ್ಲ. ಈ ಮತ್ತೆ ಕರ್ನಾಟಕದ ಜನತೆಗೆ ಇದರಲ್ಲಿ ಏನೋ ಒಂದು ನಡೆದು ಹೋಗಿದೆ ಎನ್ನುವಂತಹ ದೃಢ ಅನುಮಾನ ಬಂದಿದೆ. ಇಷ್ಟು ಆದರೂ ಕೂಡ ಜನಾರ್ಧನ ರೆಡ್ಡಿಯವರು ವಿಚಲಿತರಾಗಿಲ್ಲ. ಇಷ್ಟು ಆದರೂ ಕೂಡ ಅವರು ತಮ್ಮ ಹೇಳಿಕೆಯಿಂದ ದೂರ ಸರಿದಿಲ್ಲ. ನಿರಂತರವಾಗಿ ಅವರು ತಮ್ಮ ಹೇಳಿಕೆಯನ್ನು ಅವರು ದೃಢೀಕರಿಸುತ್ತಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಇವತ್ತು ಕೋಟಿ ಕೋಟಿ ಗಟ್ಟಲೆ ಅವ್ಯವಹಾರ ನಡೆದಿದೆ ಎನ್ನುವಂಥದ್ದು, ಮಾನ್ಯ ಚನ್ನಿಗಪ್ಪನವರು ಹೇಳಿದರು 26,000 ಕೋಟಿ ರೂಪಾಯಿ ಈ

ರಾಜ್ಯಕ್ಕೆ ಹಾನಿಯಾಗಿದೆ ಎಂದು. ಅವರು ಹಾನಿಯಾಗಿದೆ ಎಂದು ಹೇಳಿರುವುದರ ಬಗ್ಗೆ ತನಿಖೆ ಮಾಡಿ ಇಲಾಖೆಯನ್ನು ಸರಿಪಡಿಸಲಿಕ್ಕೆ ಏನಾದರೂ ಪ್ರಯತ್ನ ಮಾಡಿದ್ದರೆ ಅವರನ್ನು ಹೊಗಳುತ್ತಿದ್ದೆವು. ಆದರೆ ಆ ಕೆಲಸ ಮಾಡಲಿಲ್ಲ. ಬದಲಿಗೆ ಅವರ ಮೇಲೆ ಬೇರೆ ರೀತಿ ಒತ್ತಡ ಹಾಕಿ ಅವರಿಂದ ಹಣ ವಸೂಲಿ ಮಾಡುವ ಕೆಲಸ ನಡೆದಿದೆ ಎನ್ನುವುದು ಇವತ್ತು ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ಈ ಕೋಟಿ ಗಟ್ಟಲೆ ವ್ಯವಹಾರ ಈ ರಾಜ್ಯದಲ್ಲಿ ನಡೆಯುತ್ತಿರುವಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಯಾಗುತ್ತದೆ. ಏನೆಂದರೆ ಇದಕ್ಕೆ ಸರಿಪಡಿಸಬೇಕು ಮತ್ತು ರಾಜ್ಯಕ್ಕೆ ಹೆಚ್ಚಿನ ಆದಾಯ ತಂದು ಕೊಡಬೇಕು ಮತ್ತು ಈ ಅವ್ಯವಹಾರವನ್ನು ತಡೆದು ಒಂದು ಒಳ್ಳೆಯ ಆಡಳಿತವನ್ನು ನಡೆಸಬೇಕೆನ್ನುವ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗುತ್ತದೆ. ಇಷ್ಟಾದರೂ ಕೂಡ ಈ ಗಣಿಗಾರಿಕೆಯಲ್ಲಿ ನಡೆಯತಕ್ಕಂತಹ ಅವ್ಯವಹಾರದ ಬಗ್ಗೆ ಒಂದು ಕ್ರಮ ಕೂಡ ಸರ್ಕಾರದಿಂದ ಇಲ್ಲಿಯವರೆಗೆ ಆಗಲಿಲ್ಲ. ಏನು ಹಿಂದೆ ನಡೆಯುತ್ತಿತ್ತು ಇವತ್ತೂ ಕೂಡ ಅದೇ ತರಹ ನಡೆದುಕೊಂಡು ಬಂದಿದೆ. ಈ ಸ್ಟೇಟ್‌ಮೆಂಟ್ ಏನು ನಮ್ಮ ಫಾರೆಸ್ಟ್ ಮಂತ್ರಿಗಳು ಮಾಡಿದರು ಇದರ ಹಿಂದಿನ ಪ್ರಾಮಾಣಿಕತೆ ಏನು? ಇದರ ಹಿಂದೆ ಯಾವ ಪ್ರಾಮಾಣಿಕತೆ ಇಲ್ಲ. ಇದರ ಹಿಂದೆ ಉದ್ದಿಮೆಗಳವರನ್ನು ಹೆದರಿಸಿ ಅವರಿಂದ ವಸೂಲಿ ಮಾಡುವುದು ಎನ್ನುವಂಥದ್ದು ಬಹಳ ಸ್ಪಷ್ಟವಾದ ಚಿತ್ರ ಇವೊತ್ತು ನಮಗೆ ಎದ್ದುಕಾಣುತ್ತಿದೆ. ನೈಸ್ ವಿಷಯದಲ್ಲಿಯೂ ಕೂಡ ಇದೇ ಆಯಿತು ಎಂದು ನೇರವಾಗಿ ನಾನು ಹೇಳಬಯಸುತ್ತೇನೆ. ನೈಸ್ ವಿಷಯದಲ್ಲಿಯೂ ಕೂಡ ಹೆದರಿಸುವಂಥ ಕೆಲಸವಾಯಿತು. ಇವೊತ್ತು ಉದ್ದಿಮೆಗಳವರು ಸರ್ಕಾರದ ಜೊತೆ ನೇರವಾಗಿ ಸಂಘರ್ಷಕ್ಕೆ ಇಳಿದಿದ್ದಾರೆ. ಇದು ಸರ್ಕಾರಕ್ಕೆ ಒಳ್ಳೆಯ ಲಕ್ಷಣವಲ್ಲ. ಹೀಗಾಗಿ ಇವೊತ್ತು ಯಾರನ್ನಾದರೂ ಹೆದರಿಸಿ ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವಂಥ ಪ್ರಯತ್ನ ನಡೆದಿದೆಯೋ ಇದು ಯಾವತ್ತೂ ಕೂಡ ರಾಜ್ಯಕ್ಕೆ ಒಳ್ಳೆಯದು ಮಾಡತಕ್ಕಂಥದ್ದಲ್ಲ. ಇವೊತ್ತು ಬೆಳಿಗ್ಗೆ ನಮ್ಮ ಸ್ನೇಹಿತರಾದ ಮಾನ್ಯ ಪುಟ್ಟೇಗೌಡರು ಮಾತನಾಡುವಾಗ ಪತ್ರಿಕೆಗಳ ಆಧಾರದ ಮೇಲಿಯೇ ಇವೊತ್ತು ಸದನದಲ್ಲಿ ಚರ್ಚೆ ನಡೆದಿದೆ, ಪತ್ರಿಕೆಯವರೇ ಬರೆದಿದ್ದಾರೆ ಎಂದರು. ನನಗೆ ಆಶ್ಚರ್ಯವಾಯಿತು, ಇವೊತ್ತು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೆ ಕೂಡ ನಾಲ್ಕನೇ ಕಂಬ ಎನ್ನುವಂಥದ್ದನ್ನು ನಾವೆಲ್ಲರೂ ಒಪ್ಪುತ್ತೇವೆ. ಜನಾರ್ಧನರೆಡ್ಡಿಯವರು ಹೇಳಿದ ಮೇಲೆ ಮಾತ್ರ ಪತ್ರಿಕೆಯವರು ಬರೆದರು. ಪತ್ರಿಕೆಯವರೇ ಸ್ವಯಂ ಸೃಷ್ಟಿ ಮಾಡಿ ಸುದ್ದಿಮಾಡಿ ಮುಖ್ಯಮಂತ್ರಿಗಳಿಗೆ, ಅರಣ್ಯ ಸಚಿವರಿಗೆ ಆರೋಪ ಮಾಡಬೇಕೆಂಬ ಉದ್ದೇಶದಿಂದ ಪತ್ರಿಕೆಯವರು ಯಾವತ್ತೂ ಕೂಡ ತಮ್ಮ ಸ್ವಂತ ಸುದ್ದಿ ಮಾಡಲಿಲ್ಲ. ಆದರೆ ಇವೊತ್ತು

ಪತ್ರಿಕೆಯಲ್ಲಿ ಬಂದಂಥ ಸುದ್ದಿ, ಅದು ಆಧಾರವಲ್ಲ ಎನ್ನುವಂಥ ಮಾತನ್ನು ಇವೊತ್ತು ಯಾರೂ ಕೂಡ ಒಪ್ಪುವುದಿಲ್ಲ. ಈ ದೇಶದಲ್ಲಿ ಪತ್ರಿಕೆಯವರು ಬಹಳಷ್ಟು ಇಂಥ ಹಗರಣಗಳನ್ನು ಹೊರಗೆ ತಂದು ಸರ್ಕಾರಗಳನ್ನು ಬದಲಾವಣೆ ಮಾಡಿದ್ದಾರೆ. ಇದಲ್ಲದೆ ಇಡೀ ವ್ಯವಸ್ಥೆಯನ್ನೇ ಬದಲಾವಣೆ ಮಾಡುವುದಕ್ಕೆ ಪತ್ರಿಕೆಗಳು ಪಾತ್ರವಹಿಸಿವೆ. ಆದರೆ ಪತ್ರಿಕೆಗಳ ಬಗ್ಗೆ ಇಷ್ಟೊಂದು ಹಗುರವಾಗಿ ಮಾತನಾಡಿ ಇದರಿಂದ ಪಾರಾಗುವಂಥ ಪ್ರಯತ್ನವನ್ನೇನು ಈ ಸರ್ಕಾರ ಮಾಡುತ್ತಿದೆ, ಇದು ಸರಿಯಲ್ಲ. ಜನಾರ್ಧನರೆಡ್ಡಿಯವರು ಹೇಳಿದರು. ಅವರು ಬರೆದರು. ಜನಾರ್ಧನರೆಡ್ಡಿ ಏನು ಹೇಳುತ್ತಾರೆ ಇವೊತ್ತೂ ಕೂಡ ಮಾಧ್ಯಮದಲ್ಲಿ ಅದನ್ನು ತೋರಿಸುತ್ತಾರೆ, ಅದನ್ನು ಬರೆಯುತ್ತಾರೆ. ಆದರೆ ಪತ್ರಿಕೆಯವರೇ ಈ ವಿಷಯವನ್ನು ಸೃಷ್ಟಿ ಮಾಡಿ ಬರೆಯುವುದಕ್ಕೆ ಹೋಗಿಲ್ಲ. ಇವೊತ್ತು ಬಿ.ಜೆ.ಪಿ ಪಕ್ಷದವರು, ತಮ್ಮ ಪಕ್ಷದ ಸದಸ್ಯರೇ ಇಂತಹ ಹೇಳಿಕೆಯನ್ನು ಕೊಟ್ಟ ಮೇಲೆ ಅವರು ಕೈಕಟ್ಟಿ ಕುಳಿತಿರುವುದನ್ನು ನೋಡಿದರೆ ಅವರ ಹತ್ತಿರ ಸಂಪೂರ್ಣವಾಗಿ ಸಾಕ್ಷಿ, ಆಧಾರಗಳು ಇವೆ ಎನ್ನುವಂಥದ್ದನ್ನು ಬಹಳ ಸ್ಪಷ್ಟವಾಗಿ ಇವೊತ್ತು ನಾವೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಆದಕಾರಣ ಈ ಒಂದು ಅನುಮಾನದಿಂದ ಹೊರಬರಬೇಕಾಗಿದ್ದರೆ ಈ ರಾಜ್ಯದ ಜನತೆಗೆ ಏನು ಸಂದೇಶ ಹೋಗಿದೆ ಮುಖ್ಯಮಂತ್ರಿಗಳು ಮತ್ತು ಅರಣ್ಯ ಸಚಿವರು ದುಡ್ಡು ತೆಗೆದುಕೊಂಡಿದ್ದಾರೆಂದು, ಅದರಿಂದ ಹೊರಬರಬೇಕಾಗಿದ್ದರೆ ಅವರೇ ಸ್ವತಃ ನಮ್ಮ ವಿರೋಧ ಪಕ್ಷದ ನಾಯಕರು ಏನು ಬೇಡಿಕೆಯನ್ನು ಇಟ್ಟಿದ್ದಾರೆ ಸಿ.ಬಿ.ಐ. ಎನ್‌ಕ್ವೈರಿ ಆಗಬೇಕೆಂದು ಹೇಳಿ, ಆ ಪ್ರಕಾರ ಸಿ.ಬಿ.ಐ ಎನ್‌ಕ್ವೈರಿ ಆಗಲೇಬೇಕು. ಇವೊತ್ತು ಸಾಮಾನ್ಯವಾಗಿ ಯಾವುದೇ ವಿಷಯದಲ್ಲಿಯೂ ರಾಜಕಾರಣಿಗಳನ್ನು ವಕ್ರದೃಷ್ಟಿಯಿಂದ ನೋಡುವಂಥ ಒಂದು ಪದ್ಧತಿ ಬೆಳೆದುಬಂದಿದೆ. ಅದರಲ್ಲೂ ರಾಜ್ಯದ ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವರ ಮೇಲೆ ಇಂಥ ಒಂದು ಗಂಭೀರವಾದ ಆರೋಪ ಬಂದಮೇಲೆ ಸಿ.ಬಿ.ಐ. ಎನ್‌ಕ್ವೈರಿ ಆಗಲೇಬೇಕೆಂದು ನಾನು ಹೇಳುತ್ತೇನೆ. ಬಹಳಷ್ಟು ಜನ ನಮ್ಮ ಸ್ನೇಹಿತರು ಅವೊತ್ತು ಬೇಡಿಕೆ ಇಟ್ಟಾಗ ಸಿ.ಬಿ.ಐ. ಎನ್‌ಕ್ವೈರಿಗಳ ಬಗ್ಗೆ ಹಿಂದಿನ ಉದಾಹರಣೆಯನ್ನು ಕೊಟ್ಟು ಅದರಿಂದೇನಾಗುತ್ತದೆ, ಚಿತ್ತರಂಜನ್ ಕೂಲಿ ಇಶ್ಯೂಸ್‌ನಲ್ಲಿ ಏನಾಯಿತು? ಮತ್ತೊಂದು ಇಶ್ಯೂನಲ್ಲಿ ಏನಾಯಿತು? ಹಾಗಾದರೆ ಸಿ.ಬಿ.ಐ. ಸಂಸ್ಥೆಯೇ ಇರಬಾರದೇ? ಹಿಂದೆ ನೀವೂ ಸರ್ಕಾರದಲ್ಲಿದ್ದಿರಿ, ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದರು. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಸಿ.ಬಿ.ಐ. ಮೇಲೆ ನಿಮಗೆ ಅನುಮಾನವಿದ್ದರೆ, ಸಿ.ಬಿ.ಐ ಮೇಲೆ ನಿಮಗೆ ಗುಮಾನಿ ಇದೆ ಎಂದರೆ ಸಿ.ಬಿ.ಐ ಏಜೆನ್ಸಿಯನ್ನೇ ರದ್ದು ಮಾಡುವುದಕ್ಕೆ ನೀವು ಹೋಗಬಹುದಾಗಿತ್ತು. ಇವೊತ್ತು ಸಿ.ಬಿ.ಐ.

ಸರಿಯೋ ತಪ್ಪೋ, ಅದೊಂದು ಕೇಂದ್ರ ಸರ್ಕಾರದ ಸಂಸ್ಥೆಯಾಗಿದೆ. ಇವೊತ್ತು ಸಿ.ಬಿ.ಐ. ಬಗ್ಗೆ ನಾವಿಷ್ಟು ಹಗುರವಾಗಿ ಮಾತನಾಡಬಾರದು. ಲಾಲೂಪ್ರಸಾದ್ ಯಾದವ್‌ರವರ ಮೇಲೆ ಕೇಸ್ ಹಾಕಿ ಅವರಿಗೆ ಜೈಲಿಗೆ ಹಾಕುವಂಥ ಕೆಲಸವನ್ನೂ ಕೂಡ ಈ ದೇಶದಲ್ಲಿ ಸಿ.ಬಿ.ಐ ಮಾಡಿದೆ. ಅದನ್ನೂ ಕೂಡ ನಾವು ಮರೆಯಬಾರದು. ಸಿ.ಬಿ.ಐ. ಯಾವತ್ತೂ ಯಾರ ಕೈವಾಡವಾಗಿ ಕೆಲಸವನ್ನು ಮಾಡಿಲ್ಲ. ಹೀಗಾಗಿ ಇವೊತ್ತೇನು ಸಿ.ಬಿ.ಐ. ತನಿಖೆಯಾಗಬೇಕು ಎನ್ನುವಂಥ ಬೇಡಿಕೆ ಇದೆ ಅದು ನ್ಯಾಯಸಮ್ಮತವಾದ ಬೇಡಿಕೆಯಾಗಿದೆ. ಆ ಬೇಡಿಕೆಗೆ ಈ ಸರ್ಕಾರದವರು ಮನ್ನಣೆಯನ್ನು ಮಾಡಿ ಈ ಒಂದು ಆರೋಪದಿಂದ ಹೊರಗೆ ಬರಬೇಕು. ಈ ಸರ್ಕಾರ ಬಂದಮೇಲೆ ಇದು ಮೂರನೇ ವಿಷಯವಾಗಿ ಚರ್ಚೆಗೆ ಬರುತ್ತಿದೆ. ಮೊದಲನೆಯದಾಗಿ ರಾಜ್‌ಕುಮಾರ್‌ರವರು ನಿಧನರಾದಾಗ ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಆಡಳಿತವೇ ಇರಲಿಲ್ಲ. ಬೆಂಗಳೂರಿನಲ್ಲಿ ಬೆಂಕಿ ಹತ್ತಿತ್ತು. ಯಾವ ಜನರಿಗೂ ಕೂಡ ಇಲ್ಲಿ ರಕ್ಷಣೆ ಇರಲಿಲ್ಲ. ಇಂಥ ಒಂದು ಭಯಾನಕವಾದಂಥ ವಾತಾವರಣ ರಾಜ್‌ಕುಮರ್‌ರವರು ಸತ್ತಮೇಲಿ ಕರ್ನಾಟಕದಲ್ಲಿ ನೋಡಿದ್ದೇವೆ. ಇದನ್ನು ಸರ್ಕಾರದ ಸಾಧನೆ ಎಂದು ಹೇಳಬೇಕೋ ಅಥವಾ ವಿಫಲತೆ ಎಂದು ಹೇಳಬೇಕೋ. ಯಾವ ಪಟ್ಟಭದ್ರಹಿತಾಸಕ್ತಿಗಳು ಎಂಬ ಬಗ್ಗೆ ಸರ್ಕಾರ ತನಿಖೆ ಮಾಡಿ ಯಾರು ಆರೋಪಿಗಳು ಇದ್ದಾರೆ ಅವರನ್ನು ಒಳಗೆ ಹಾಕಿ, ಅಂಥವರ ಬಗ್ಗೆ ನಾವ್ಯಾರೂ ಕುಡ ಅವರಿಗೆ ರಕ್ಷಣೆ ಮಾಡಿ ಎಂದು ನಾವ್ಯಾರೂ ಹೇಳುವುದಿಲ್ಲ. ಆದರೆ ರಾಜ್ಯದಲ್ಲಿ ಅಂದು ನಡೆದಂಥ ವಿಷಯದ ಬಗ್ಗೆ ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಅದೇ ತರಹ ನೈಸ್ ವಿಷಯದಲ್ಲಿ, **XX** ಉದಯ ಟಿ.ವಿ.ಯಲ್ಲಿ ಒಂದೂವರೆ ತಾಸುಗಳ ಕಾಲ ಮಾತನಾಡಿದರು. ಆಗ ಬಿ.ಜೆ.ಪಿ ಬಗ್ಗೆ ಕೂಡ ಬಹಳ ಹಗುರವಾಗಿ ಮಾತನಾಡಿದರು. ನ್ಯಾಶನಲ್ ಪಾರ್ಟಿ, ಬಿ.ಜೆ.ಪಿ. ಬಗ್ಗೆ ನ್ಯಾಶನಲ್ ಪಾರ್ಟಿ ಕಾಂಗ್ರೆಸ್, ನ್ಯಾಶನಲ್ ಪಾರ್ಟಿ, ಈ ತರಹ ಅಣಕು ಮಾತುಗಳನ್ನು ಈ ಬಿ.ಜೆ.ಪಿ ಬಗ್ಗೆ ಹೇಳಿ ಇವೊತ್ತು ಬಿ.ಜೆ.ಪಿ ಕೂಡ ಈ ಕಾನೂನನ್ನು ತರುವುದಕ್ಕೆ ತಯಾರಿಲ್ಲ ಎನ್ನುವಂಥ ಮಾತನ್ನೂ ಕೂಡ ಮಾನ್ಯ ದೇವೇಗೌಡರು ಹೇಳಿದರು. ನೈಸ್ ಬಗ್ಗೆ ದೇವೇಗೌಡರೇ ಹೇಳುತ್ತಿದ್ದರು ಕಾನೂನನ್ನು ತರುತ್ತೇನೆ, ಕಾನೂನನ್ನು ತರುತ್ತೇನೆ ಎಂದು ಹೇಳುತ್ತಿದ್ದರು. ಕಾನೂನು ಏಕೆ ತರಲಿಲ್ಲ? ಕಾನೂನನ್ನು ತರುವುದಕ್ಕೆ ಸರ್ಕಾರ ಸಾರ್ವಭೌಮ. ಕಾನೂನನ್ನು ತಂದುಬಿಡಿ. ನಾವೆಲ್ಲರೂ ಕೂಡ ಅದಕ್ಕೆ ಬೆಂಬಲ ಕೊಡುತ್ತೇವೆ. ಕಾನೂನು ಆಗಬೇಕು. ಕಾನೂನು

XXಈ ಪದಗಳನ್ನು ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಕಡತ ದಿಂದ ತೆಗೆದು ಹಾಕಲಾಗಿದೆ.

ಇದ್ದರೆ ಮಾತ್ರ ಈ ಬದಲಾವಣೆಯನ್ನು ತರುವುದಕ್ಕೆ ಸಾಧ್ಯತೆ ಇದೆ. ಕಾನೂನಿನಿಂದ ಮಾತ್ರ ಇದನ್ನು ಸರಿಪಡಿಸಲಿಕ್ಕೆ ಸಾಧ್ಯತೆ ಇದೆ. ಇವೊತ್ತು ಕೂಡ ಆ ವಿಷಯದಲ್ಲಿ ನಂಬಿಕೆ ಇಟ್ಟುಕೊಂಡು ನಾವು ಹೇಳುತ್ತೇವೆ. ಆದರೆ ಕಾನೂನು ತರಲಿಲ್ಲ. ಅಲ್ಲಿ ಕೂಡ ನೈಸ್‌ನವರಿಗೆ ಹೆದರಿಸುವಂಥ ಕೆಲಸವನ್ನು ಮಾಡಿದರು. ಬಹಳ ದೊಡ್ಡ ದೊಡ್ಡ ಸಂಗತಿ ನಾವು ದುಃಖದಿಂದ ಈ ಮಾತನ್ನು ಹೇಳುತ್ತೇನೆ. **XX** ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವುದಕ್ಕೆ ಹೊರಟಂಥ ನಾವು ನೀವೆಲ್ಲರೂ ಬೇರೆಯವರ ಜಾತಿ ಎಣಿಸಿ ನಾವೆಷ್ಟು ದೊಡ್ಡವರಾಗುತ್ತೇವೆ ಎನ್ನುವಂಥದ್ದನ್ನು ನಾವೆಲ್ಲರೂ ಕೂಡ ಅರ್ಥ ಮಾಡಿಕೊಳ್ಳಬೇಕು. ಜೀತ ವಿಷಯದಿಂದ ಈ ರಾಜ್ಯದಲ್ಲಿ ಎಲ್ಲಿಂದಲೋ ಹೊರಟು ಎಲ್ಲಿಗೋ ಮುಟ್ಟುತ್ತಿದ್ದೇವೆ. ಹೀಗಾಗಿ.........

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಒಂದ್ನಿಮಿಷ ಉಪಾಧ್ಯಕ್ಷರೆ, ಪಾಟೀಲರೆ, ಜಾತಿ ಯಾರ್ರೀ ಹೇಳಿದ್ದು? ಸ್ವಲ್ಪ ಬಾಯಿ ಬಿಟ್ಟು ಹೇಳಿ, ಯಾರು ಜಾತಿ ಹೆಸರು ತಂದಿದ್ದು? ದೇವೇಗೌಡರು ಯಾವತ್ತೂ ಜಾತಿ ವಿಷಯ ತಂದಿಲ್ಲ. ಯಾರು ತಂದವರು ಎನ್ನುವುದನ್ನು ಸ್ವಲ್ಪ ಹಿಂದಿನ ಘಟನೆಗಳನ್ನು ನೋಡಿ ಆಗ ನಿಮಗೆ ಅರ್ಥವಾಗುತ್ತದೆ. ಮಾತನಾಡುವುದಕ್ಕೂ ಇತಿಮಿತಿ ಇದೆ. ಯಾರನ್ನೂ ಹೆದರಿಸಿ ರಾಜಕೀಯ ಮಾಡಬೇಕಾಗಿಲ್ಲ. ಜಾತಿಯ ವಿಷಯ ಹೇಳಿದರು ಎಂದು ತಾವೇನು ಹೇಳುತ್ತಿದ್ದೀರಿ ಅದನ್ನು ಹೇಳಿಲ್ಲ ಎಂದು ಅವರನ್ನು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿ ಸಾಧ್ಯವಿಲ್ಲ. **XX** ಆದಕಾರಣ ಈ ಪದವನ್ನು ಕಡತದಿಂದ ತೆಗೆಸಿಹಾಕಬೇಕು ಮಾನ್ಯ ಉಪಾಧ್ಯಕ್ಷರೆ.

ಶ್ರೀ ಬಿ.ಆರ್. ಪಾಟೀಲ್ : ನಾನು ಮತ್ತೆ ಹೇಳುತ್ತೇನೆ, ಮತ್ತೆ ಹೇಳುತ್ತೇನೆ, ಉದಯ ಟಿ.ವಿಯಲ್ಲಿ ಮಾತನಾಡುವಾಗ ಮಾನ್ಯ ದೇವೇಗೌಡರು ಈ ಭಾಷೆಯನ್ನು ಬಳಸಿದ್ದಾರೆ. ಬೇಕಾದರೆ ಉದಯ ಟಿ.ವಿ. ಕ್ಯಾಸೆಟ್‌ನ್ನು ತಂದುಹಾಕಿನೋಡೋಣ. ಅವರು ಆ ರೀತಿ ಪದ ಬಳಸದೇ ಇದ್ದಿದ್ದರೆ ಈ ಸದನ ಏನು ಶಿಕ್ಷೆ ಕೊಡುತ್ತದೆಯೋ ಅದನ್ನು ಒಪ್ಪುವುದಕ್ಕೆ ನಾನು ತಯಾರಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಈ ಮನೆಯ ಸದಸ್ಯರಾಗಿಲ್ಲದಿರುವವರ ಬಗ್ಗೆ ಸದನದಲ್ಲಿ ಹೇಳುತ್ತಿದ್ದಾರೆ. ಅವರು ಸದನದಲ್ಲಿ ಡಿಫೆಂಡ್

XX ಈ ಪದಗಳನ್ನು ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಬಿ.ಆರ್. ಪಾಟೀಲರು ಹಿರಿಯರಿದ್ದಾರೆ. ಇಂಥವರು ಈ ರೀತಿ ಮಾತನಾಡುತ್ತಿರುವಾಗ ಮಾನ್ಯ ಉಪಾಧ್ಯಕ್ಷರೆ, ತಾವು ಅವರಿಗೆ ಬುದ್ಧಿವಾದವನ್ನು ಹೇಳಬೇಕು. ಮಾನ್ಯ ಸದಸ್ಯರು ಹೊಸಬರೇನೂ ಅಲ್ಲ.

ಶ್ರೀ ಬಿ.ಆರ್. ಪಾಟೀಲ್ : ನಾನೇನೂ ಸೃಷ್ಟಿ ಮಾಡಿ ಹೇಳುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಒಂದ್ನಿಮಿಷ. ಮಾನ್ಯ ಬಿ.ಆರ್. ಪಾಟೀಲರು ಈ ರೀತಿ ಹೇಳುತ್ತಿದ್ದಾರೆ. ಪಾಪ ಅವರು ವಕಾಲತ್ತು ಯಾವ ರೀತಿ ವಹಿಸುತ್ತಿದ್ದಾರೆ ಎಂದು ಗೊತ್ತಾಗಬೇಕಾಗುತ್ತದೆ. ಏಕೆಂದರೆ ಸದನದಲ್ಲಿರುವಂಥ ವ್ಯಕ್ತಿ ಬಗ್ಗೆ ಮಾತನಾಡಲಿ. ಆದರೆ ಸದನದಲ್ಲಿ ಇರದಂಥ ವ್ಯಕ್ತಿ ಬಗ್ಗೆ ಮಾತನಾಡಲು ನಿಯಮಾವಳಿ ಇದೆಯೇ ಎಂಬ ಬಗ್ಗೆ ಉಪಾಧ್ಯಕ್ಷರಾದ ತಾವು ದಯಮಾಡಿ ಹೇಳಬೇಕು. ಅವರೇನಾದರೂ ಈ ಸದನದಲ್ಲಿ ಇದ್ದು ಅವರೇ ಡಿಫೆಂಡ್ ಮಾಡಿಕೊಳ್ಳವಂಥ ಪರಿಸ್ಥಿತಿ ಇಲ್ಲ. ಆ ರೀತಿ ಇದ್ದರೆ ಬೇಕಾದರೆ ಅದೇನು ಇದೆಯೋ ಹೇಳಲಿ. ಇದುವರೆಗೂ ಯಾರ್‍ಯಾರು ಹೆದರಿಸಿ ಯಾರ್‍ಯಾರೂ ಏನೇನು ಮಾಡಿದ್ದಾರೆ ಈ ದೇಶದಲ್ಲಿ, ಏಕೆಂದರೆ ಪಾಪ ಅವರು ವಕಾಲತ್ತು ಹಾಕುತ್ತಿದ್ದಾರೆ, ಹಿಂದೆ ಇದೇ ರಾಜ್ಯದಲ್ಲಿ ಲೋಕಾಯುಕ್ತ ಬಗ್ಗೆ ಅತಿ ಹೆಚ್ಚಿನ ಗೌರವ ಇದೆ ಈ ರಾಷ್ಟ್ರದಲ್ಲಿ. ನಮ್ಮ ವೆಂಕಟಾಚಲಯವರ ಬಗ್ಗೆ ಇಡೀ ರಾಷ್ಟ್ರದಲ್ಲಿ ಗೌರವ ಇದೆ. ವೆಂಕಟಾಚಲರವರು ಏನು ಹೇಳಿದರು ಸ್ವಾಮಿ, 280 ಕೋಟಿಯೋ, 230 ಕೋಟಿಯೋ, 180 ನನಗೆ ಗೊತ್ತಿಲ್ಲ, ಈ ರಾಜ್ಯದಲ್ಲಿ ಪೂರ್ತಿ ಇದಾಗಿಹೋಗಿದೆ ಅಂತ. ಕಂಪ್ಲೀಟ್ ಪೂರ್ತಿ ಎಲ್ಲಾ ಪೇಜ್‌ನಲ್ಲೂ ಪ್ರಿಂಟ್ ಹೊಡೆದರು. ಏನಾಯ್ತು ಸ್ವಾಮಿ ಅದು? ಏಕೆ ಇವರೆಲ್ಲಾ ಎಲ್ಲಿಗೆ ಹೋಗಿದ್ದರು, ಅವೊತ್ತು ಮಾತನಾಡಬೇಡಿ ಎಂದು ಹಿಡಿದು ಕೊಂಡಿದ್ದೇವಾ? ಅದನ್ನೇನು ಸಿ.ಬಿ.ಐ.ಗೆ ಕೊಟ್ಟಿದ್ದರೆ ಅವೊತ್ತು? ಬೇಕಾದರೆ ಪ್ರೂವ್ ಮಾಡಲಿ, ಸಭೆಯಲ್ಲಿ ಯಾವ ತರಹ ಬೇಕಾದರೂ ಪ್ರೂವ್ ಮಾಡಲಿ, ಕುಮಾರಸ್ವಾಮಿ ಏನಾದರೂ ಅಥವಾ ಚೆನ್ನಿಗಪ್ಪ ಅಥವಾ ಎಂ.ಪಿ. ಪ್ರಕಾಶ್‌ರವರು ಈ ರೀತಿ ಎಂದು ಯಾವುದಾದರೂ ಸಭೆಯಲ್ಲಿ ಪ್ರೂವ್ ಮಾಡುವುದಕ್ಕೆ ಬಿಟ್ಟು ಇದೊಂದು ತರಹ ಇವರು ಸಂತೆ ಭಾಷಣ ಮಾಡಿದ ಹಾಗೆ ಮಾಡುತ್ತಿದ್ದಾರೆ. ಏಕೆಂದರೆ ಇದು ರಾಜ್ಯದ ಜನತೆಗೆ ಹೋಗಬೇಕಾಗುತ್ತದೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ರೇವಣ್ಣನವರು ಮಾತನಾಡಿದ ವಾಕ್ಯವನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಇಲ್ಲಿ ಸಂತೆಯಲ್ಲಿ ಭಾಷಣ ಮಾಡಿದ ಹಾಗೆ ಮಾಡುವುದಕ್ಕೆ ಬಂದಿಲ್ಲ. ಭಾಷಣ ಮಾಡಬೇಕೆಂದು ಜನ ನನಗೆ ಆರಿಸಿ ಕಳುಹಿಸಿಲ್ಲ. ಈ ತರಹ ಮಾತನಾಡುವುದರಿಂದ..

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಚರ್ಚೆಯಾಗುತ್ತಿರುವುದು ಗಣಿ ಬಗ್ಗೆ ನಾನು 150 ಕೋಟಿ ರೂಪಾಯಿ ಏನು ಸಂಗ್ರಹ ಮಾಡಿಬಿಟ್ಟಿದ್ದೇನೆ ಅದರ ಬಗ್ಗೆ ಚರ್ಚೆ ಮಾಡುತ್ತಿರುವುದು. ನೈಸ್ ಬಗ್ಗೆ ಅವತ್ತು ಮಾತನಾಡಬೇಕಾಗಿತ್ತು. ಈಗ ಏಕೆ? ನೈಸ್ ಬಗ್ಗೆ ಎಂಟು ದಿವಸ ಚರ್ಚೆ ನಡೆಯಿತು ಅವತ್ತು ಚರ್ಚೆ ಮಾಡಲಿಲ್ಲ, ಇವತ್ತು ಜಾತಿ ಹೆಸರು ಹಿಡಿದುಕೊಂಡು ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ. ಇವತ್ತು ಗಣಿ ಬಗ್ಗೆ 140 ಕೋಟಿ ರೂಪಾಯಿ ವಿಷಯವೇನಾದರೂ ಇದ್ದರೆ ಮಾತನಾಡಿ ಸ್ವಾಮಿ. ಮಾನ್ಯ ಉಪಾಧ್ಯಕ್ಷರೆ, 140 ಕೋಟಿ ರೂಪಾಯಿ ವಿಷಯವಿದ್ದರೆ ಮಾತನಾಡಲಿ. ನೈಸ್ ಬಗ್ಗೆ ಈಗ ಏಕೆ ಚರ್ಚೆ ಮಾಡುತ್ತಾರೆ? ಆ ಜಾತಿ ಹೆಸರಿನಲ್ಲಿ ಈಗ ಏಕೆ ತರುತ್ತಾರೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಎರಡು ವಿಷಯ ಪ್ರಸ್ತಾಪಿಸಲ್ಪಟ್ಟಿದೆ. ಅವರೂ ಹಿರಿಯ ಸದಸ್ಯರು. ಯಾರು ತಮ್ಮನ್ನು ತಾವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಈ ಸದನದ ಸದಸ್ಯರಾಗಿರುವುದಿಲ್ಲವೋ ಅವರ ಹೆಸರನ್ನು ನಾವಿಲ್ಲಿ ತರಬಾರದು ಎಂದು ನಿಯಮ ಇದೆ. ಅದರಂತೆ ತಾವು ಅನೇಕ ಸಂದರ್ಭದಲ್ಲಿ ರೂಲಿಂಗ್ ಅನ್ನು ಕೊಟ್ಟಿರತಕ್ಕಂಥಾದ್ದು ಇದೆ. ಆ ಕಾರಣಕ್ಕಾಗಿ ಮಾಜಿ ಪ್ರಧಾನಿ ಮಂತ್ರಿಗಳ ಹೆಸರನ್ನು ಇಲ್ಲಿ ಹೇಳಬೇಕಾದಂತಹ ಅಗತ್ಯತೆ ಇರಲಿಲ್ಲ. ಇದು ಒಂದನೆಯದು. ಇನ್ನು ಎರಡನೆಯದಾಗಿ ಅವರು ಏನು ಹೇಳುತ್ತಾರೆಂದು ಟಿ.ವಿ ಯನ್ನು ಎಲ್ಲರೂ ಕೂಡ ನೋಡಿದ್ದೇವೆ. ಇಂತಹ ಒಂದ ಅವ್ಯವಹಾರ ನಡೆದಿರತಕ್ಕಂಥ ಘಟನೆಗಳಲ್ಲಿ ಜಾತಿಯ ಹೆಸರಿನ ಮೇಲೆ ಏನಾದರೂ ಕೂಡ ಅದರ ಅಂಬ್ರೆಲಾದ ಕೆಳಗಡೆ ನಾವು ಅದನ್ನು ದುರುಪಯೋಗ ಪಡಿಸಿಕೊಳ್ಳತಕ್ಕಂಥ ಪ್ರವೃತ್ತಿ ಕೂಡ ನಡೆಸುತ್ತಿದ್ದಾರೆ, ಜಾತಿಯ ಹೆಸರಿನ ಮೂಲಕವಾಗಿ ಸುಮ್ಮನೆ ಇವರ ಮೇಲೆ ಆಪಾದನೆ ಕೊಡುತ್ತಾರೆ ಎಂದೇಳಿ ಈ ಕೀಳು ಮಟ್ಟದ ಟೀಕೆ ಕೂಡ ಆಗುತ್ತಿದೆ ಎನ್ನುವಂತಹ ರೀತಿಯಲ್ಲಿ ಅವರು ಮಾತನಾಡಿದ್ದಾರೆಯೇ ವಿನಹ ಜಾತಿಯನ್ನು ತಂದು ಅವರು ಪ್ರಸ್ತಾಪ ಮಾಡಿಲ್ಲ. ಈ ಜಾತಿಯ ಕಾರಣಕ್ಕಾಗಿ ಇವರು ವಿರೋಧಿಸುತ್ತಾರೆಂದು ಹೇಳಿಲ್ಲ. ಕೆಲವರು ಕುಚೋದ್ಯ ಇರುವಂತಹ ಜನ ಈ ಜಾತೀಯತೆಯನ್ನು ಸೇರಿಸುವಂತಹ ಪ್ರಯತ್ನವನ್ನು ಮಾಡುತ್ತಾರೆ. ಯಾರಾದರೂ ಅವ್ಯವಹಾರ ಮಾಡಿದ್ದರೆ, ಅದು ಅವ್ಯವಹಾರನೇ, ಯಾವ ಜಾತಿಯವರು ಮಾಡಿದ್ದರೂ ಕೂಡ ಅದು ಅವ್ಯವಹಾರವೇ ಅದರ ಕೆಳಗಡೆಗೆ ನಾವು ರಕ್ಷಣೆಯನ್ನು ಪಡೆಯಬೇಕಾಗಿರುವಂತಾದ್ದಲ್ಲ. ಆದುದರಿಂದ ದಯವಿಟ್ಟು ಅವರ ಹೆಸರು ಇಲ್ಲಿ ಪ್ರಸ್ತಾಪವಾಗಿದೆ ಅದನ್ನು ತೆಗೆದುಹಾಕಬೇಕೆಂದು

ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ತಾವು ಉಳಿದ ವಿಷಯವನ್ನು ಹೇಳಿ, ತಮಗೇನೂ ಆಕ್ಷೇಪಣೆ ಇಲ್ಲ. ಬೇರೆಯವರ ಹೆಸರನ್ನು ಇಲ್ಲಿ ತರಬಾರದು.

ಶ್ರೀ ಬಿ.ಆರ್. ಪಾಟೀಲ್ : ಇಲ್ಲಿ ದೇವೇಗೌಡರ ಹೆಸರನ್ನು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ ನಾನು ಮಾಡುವುದು ಮಾತ್ರ ಅಪಚಾರ, ಬೇರೆಯವರು ಮಾಡಿದರೆ ಅದು ಸರಿ ಎಂದು ನಿರ್ಧಾರಕ್ಕೆ ಬರುವುದು ತಪ್ಪು.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನನಗೆ ತಾವು ಸಂಪೂರ್ಣವಾದ ರಕ್ಷಣೆ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗ ಪ್ರಶ್ನೆ ಇಷ್ಟೆ, ದೊಡ್ಡ ದೊಡ್ಡವರ ಹೆಸರುಗಳನ್ನು ನಾವು ಅನೇಕ ಸಂದರ್ಭದಲ್ಲಿ ತರುತ್ತೇವೆ. ಅವರ ವಿಷಯಗಳನ್ನೂ ಕೂಡ ಪ್ರಸ್ತಾಪ ಮಾಡುತ್ತೇವೆ. ಆದರೆ ಅದು ಟೀಕಾತ್ಮಕವಾಗಿಯಾಗಲಿ, ಸತ್ಯ ಸಂಗತಿಯನ್ನು ತಿರುಚಿ ಹೇಳತಕ್ಕಂಥಾದ್ದಾಗಲಿ ಆಗಬಾರದು. ಟಿ.ವಿ. ಕ್ಲಿಪಿಂಗ್ಸ್ ಅನ್ನು ತೋರಿಸಬೇಕೆಂದು ಇದ್ದಾರಲ್ಲಾ, ತೋರಿಸಲಿ. ಅದರಲ್ಲಿ ಜಾತಿಯ ಹೆಸರುಗಳನ್ನು ಹೇಳಿ ಅವ್ಯವಹಾರವನ್ನು ಮುಚ್ಚಿಟ್ಟುಕೊಳ್ಳುವಂತಹ ರಕ್ಷಣೆಯನ್ನು ಮಾಡಬಾರದು ಎನ್ನುವಂತಹ ಮಾತನ್ನು ಹೇಳಿದ್ದಾರೆಯೇ ವಿನಹ ಜಾತೀಯತೆ ತಂದಿದ್ದಾರೆ ಎನ್ನುವ ಮಾತು ಅವರ ಘನತೆಗೆ ಕುಂದುಂಟಾಗುತ್ತದೆ ಎನ್ನುವ ಮಾತಾಗುವುದರಿಂದ ಹಾಗೂ ಅವರು ಇಲ್ಲಿ ಅದರ ಬಗ್ಗೆ ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವಾದ್ದರಿಂದ ಇದನ್ನು ಎಷ್ಟೋ ಸಂದರ್ಭದಲ್ಲಿ ಮಾಡಿದ್ದೀರಿ. ಆ ಕಾರಣಕ್ಕಾಗಿ ದಯವಿಟ್ಟು ಆ ವಿಷಯವನ್ನು ಬಿಟ್ಟು ಬೇರೆ ಮಾತನ್ನು ಹೇಳಬಹುದು. ಅದನ್ನು ಹೇಳುವುದಕ್ಕೆ ಬರುತ್ತದೆ ಎಂದರೆ ತಾವು ಹೇಳಬಹುದು.

ಶ್ರೀ ಬಿ.ಆರ್. ಪಾಟೀಲ್ : ಅದನ್ನು ಕಡತದಿಂದ ತೆಗೆದರೂ ಕೂಡ ಜನ ಏನು ಅರ್ಥ ಮಾಡಿಕೊಂಡಿದ್ದಾರೆ ಅದು ಮಾಡಿಕೊಂಡಿದ್ದಾರೆ....

ಉಪಾಧ್ಯಕ್ಷರು : ಆಯಿತು, ಆ ಸಬ್ಜೆಕ್ಟ್ ಬಿಟ್ಟು ಇದರ ಬಗ್ಗೆ ಮಾತನಾಡಿ.

ಶ್ರೀ ಬಿ.ಆರ್. ಪಾಟೀಲ್ : ಏನು ಹೇಳಿದ್ದೇವೆ ಎನ್ನುವುದು....

ಉಪಾಧ್ಯಕ್ಷರು : ಆಯಿತು, ಪಾಟೀಲರೇ, ಬೇಗ ಮುಗಿಸಿಬಿಡಿ. ತಾವು 150 ಕೋಟಿ ರೂ. ಬಗ್ಗೆ ಮಾತನಾಡಿ. ಈಗ ನೈಸ್ ಬಗ್ಗೆ ಹೋಗಬೇಡಿ, ಅದರ ಕತೆ ಆಗಲೇ ಮುಗಿದುಹೋಯಿತು. ಮತ್ತೆ ಏಕೆ ಹೋಗುತ್ತೀರಿ?

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ನಾನು ಮಾತನಾಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನೀವು ನೆಟ್ಟಗೆ ಮಾತನಾಡಿದರೆ ನಾವೂ ನೆಟ್ಟಗೆ ಮಾತನಾಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ : ಈ ತರಹ ಅಡ್ಡಿ ಪಡಿಸುವುದು ಸರಿಯಲ್ಲ.

ಉಪಾಧ್ಯಕ್ಷರು : ಪಾಟೇಲರೇ, ಬೇಗ ಮುಗಿಸಿ. ಈಗಾಗಲೇ ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಅರ್ಧ ಗಂಟೆಯಾಯಿತು ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನೀವು ಮಾತನಾಡುವಾಗ ಮಾತನಾಡಿ. ನನಗೆ ಅವಕಾಶ ಕೊಟ್ಟಿದ್ದಾರೆ. ನಾನು ಮಾತನಾಡುತ್ತೇನೆ. ನಿಮಗೆ ಅವಕಾಶ ಕೊಟ್ಟಾಗ ನೀವು ಮಾತನಾಡಿ.

ಉಪಾಧ್ಯಕ್ಷರು : ಈಗ ಮಧ್ಯದಲ್ಲಿ ದಯವಿಟ್ಟು ಯಾರೂ ಮಾತನಾಡುವುದಕ್ಕೆ ಹೋಗಬೇಡಿ. ಅವರು ಮುಗಿಸಲಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಿಮ್ಮನ್ನು ಬಿಟ್ಟು ನನ್ನನ್ನು ಅಡ್ಡಿ ಪಡಿಸುವಂತಹ ಅಧಿಕಾರ ಯಾರಿಗೂ ಇಲ್ಲ ನಿಮ್ಮೊಬ್ಬರಿಗೆ ಮಾತ್ರ ಅಧಿಕಾರ ಇದೆ.

ಉಪಾಧ್ಯಕ್ಷರು : ಬೇಗ ಮುಗಿಸಿ, ನಮ್ಮ ವೈಜನಾಥ ಪಾಟೀಲರು ಕಾಯುತ್ತಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್ : ಇಷ್ಟೊಂದು ದುಡ್ಡು ಈ ಸದನದಲ್ಲಿ ಒಂದು ಗಂಟೆಗೆ ಎರಡೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಏನು ಚರ್ಚೆ ಮಾಡುತ್ತಿದ್ದೇವೆ. ಹಾಗಾಗಿ ಇದಕ್ಕೆ ಏನಾದರೂ ಒಂದು ನಿರ್ಣಯ ಬರಬೇಕೆಂದರೆ, ಸರ್ಕಾರದವರು ಮುಕ್ತವಾಗಿ ಹೊರಗೆ ಬರಬೇಕಾದರೆ ಸಿ.ಬಿ.ಐ ಎನ್‌ಕ್ವೈರಿ ಆಗಲೇಬೇಕು. ಆದರಿಂದ ಮಾತ್ರ ಜನರ ಮನಸ್ಸಿನಲ್ಲಿ ಇರುವಂತಹ ಅನುಮಾನವನ್ನು ದೂರ ಮಾಡುವುದಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ಹೇಳಿ ತಮಗೆ ಒಂದೇ ಒಂದು ಸಣ್ಣ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ನೈಸ್ ವಿಷಯದಲ್ಲಿ ಇಡೀ.....

ಉಪಾಧ್ಯಕ್ಷರು : ಮತ್ತೆ ಈಗ ಅದಕ್ಕೆ ಹೋಗಬೇಡಿ. ನೈಸ್ ಬೇಡ, ಇದನ್ನು ಹೇಳಿ.

ಶ್ರೀ ಬಿ.ಆರ್. ಪಾಟೀಲ್ : ನಾನು ಪ್ರಸ್ತಾಪ ಮಾಡುತ್ತಿಲ್ಲ. ಟಿ.ವಿ ಮೂಲಕ ಅದನ್ನು ರಾಜ್ಯಕ್ಕೆ ತೋರಿಸಿದಿರಿ, ಈ ವಿಷಯವನ್ನೂ ಕೂಡ ಟಿ.ವಿ ಮುಖಾಂತರ

ರಾಜ್ಯಕ್ಕೆ ತೋರಿಸಿದರೆ ಒಳ್ಳೆಯದಿತ್ತು ಎಂದು ನನ್ನ ವಿನಂತಿಯನ್ನು ಮಾಡಿಕೊಂಡು ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರೆ : ಈಗ ವೈಜನಾಥ್ ಪಾಟೀಲರೆ, ಬೇಗ ಮಾತನಾಡಿ. ಈಗ ಪಾಟೀಲರು ಮಾತನಾಡುತ್ತಾರೆ. ಸುಮ್ಮನೆ ಕೇಳಿ ಚೆನ್ನಾಗಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ನೀವೇ ಹೀಗೆ ಎಲ್ಲಾ ಕೇಳಿ ಚೆನ್ನಾಗಿ ಮಾತನಾಡುತ್ತಾರೆ ಎಂದರೆ ಹೇಗೆ?

ಉಪಾಧ್ಯಕ್ಷರು : ಮಾತನಾಡಲಿ, ಅವರು ಸ್ವಲ್ಪ ಕ್ಲೀನಾಗಿ ಮಾತನಾಡುತ್ತಾರೆ. ಅವರು ಸ್ವಲ್ಪ ಅನುಭವದ ಮಾತುಗಳನ್ನು ಹೇಳುತ್ತಾರೆ, ನಾನು ತಮಾಷೆಗೆ ಹೇಳಲಿಲ್ಲ. ಅನುಭವದ ಮಾತುಗಳನ್ನು ಹೇಳುತ್ತಾರೆ, ಕೇಳೋಣ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಕೇಳಿ ಚೆನ್ನಾಗಿದೆ ಎಂದರೆ ಏನು?

ಉಪಾಧ್ಯಕ್ಷರು : ಎಲ್ಲರೂ ಚೆನ್ನಾಗಿ ಮಾತನಾಡಿದ್ದಾರೆ, ಅವರೂ ಮಾತನಾಡುತ್ತಾರೆ ಚೆನ್ನಾಗಿ ಎಂದು ಹೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವು ಹೀಗೆ ಹೇಳಿಬಿಟ್ಟರೆ ಹೇಗೆ?

ಉಪಾಧ್ಯಕ್ಷರು : ಇಲ್ಲ, ಏನಾದರೂ ತಪ್ಪಿದೆಯಾ ನಾನು ಮಾತನಾಡಿರುವುದರಲ್ಲಿ?

ಶ್ರೀ ವಾಟಾಳ್ ನಾಗರಾಜ್ : ತಪ್ಪು ಎಂದಲ್ಲ, ತಾವೇ ಹೇಳಿಬಿಟ್ಟರೆ ಹೇಗೆ ಎಂದು. ನಾವ್ಯಾರಾದರೂ ಒಂದು ಮಾತು ಹೇಳಬಹುದು. ಅದುಬಿಟ್ಟು ಎಲ್ಲರೂ ಕೇಳಿ ಎಂದರೆ ಏನದು?

ಉಪಾಧ್ಯಕ್ಷರು : ಅನುಭವದ ಮಾತುಗಳು ಚೆನ್ನಾಗಿ ಮಾತನಾಡುತ್ತಾರೆ, ಸ್ವಲ್ಪ ಎಲ್ಲರೂ ಕೇಳೋಣ ಅವರು ಏನು ಹೇಳುತ್ತಾರೆಂದು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮಿಷ್ಟ, ನಾವು ಕೇಳುತ್ತೇವೆ ಇಲ್ಲವೆಂದರೆ ಹೋಗುತ್ತೇವೆ.

ಉಪಾಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಒಬ್ಬರು ಮಾನ್ಯ ಸದಸ್ಯರು : ವಾಟಾಳ್ ನಾಗರಾಜ್ ಆ್ಯಕ್ಷನ್ ಮಾಡುತ್ತಾರೆ, ಪಾಪ ಯಜನಮಾನರ ಕೈ ಆ್ಯಕ್ಷನ್ ಮಾಡುವುದಿಲ್ಲ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಉಪಾಧ್ಯಕ್ಷರೆ, ಎಂದು ಯಾರೂ ಲಂಚ ಕೊಡುವವರು ಅಥವಾ ಲಂಚ ಪಡೆಯುವವರು ಈ ದೇಶದಲ್ಲಿ ರೆಸಿಟ್ ಕೊಡುವುದಿಲ್ಲ. ಆದರೆ ಇದೆಲ್ಲಾ ಸರ್ಕಮೆಟೆನ್ಸಸ್ ಮೇಲೆ

ಹೋಗುತ್ತದೆ. ಈ ಲಂಚದ ಬಗ್ಗೆ ಆರೋಪ ಪ್ರತ್ಯಾರೋಪ ದೇಶದಲ್ಲಿ ಯಾವಾಗಲೂ ನಡೆಯುತ್ತಿರುತ್ತದೆ. ಲಂಚಗುಳಿತನ ಮತ್ತು ಬ್ರಷ್ಟಾಚಾರ ಈ ದೇಶದಲ್ಲಿ ಹೆಚ್ಚಾಗಿದೆ. ಆದರೆ ಎಲ್ಲರೂ ಸಿಕ್ಕಿಬೀಳುವುದಿಲ್ಲ. ಆದರೆ ಎಲ್ಲಿ ಸರ್ಕಮೆಟನ್ಷಿಯಲ್ ಎವಿಡೆನ್ಸ್ ಸಿಗುತ್ತವೆ, ಅಂತಹ ವಿಷಯದಲ್ಲಿ ಕೋರ್ಟ್‌ನಲ್ಲಿ ಶಿಕ್ಷೆಯಾಗುತ್ತದೆ. ಅಲ್ಲಿ ಯಾರೂ ರೆಸಿಟ್ ಕೊಡುವುದಿಲ್ಲ ನಾನು ಮರ್ಡರ್ ಮಾಡಿದರೆ ಮತ್ತೊಂದು ಮಾಡಿದರೆ. ಅದು ಸರ್ಕಮೆಟ್‌ನ್ಸಸ್ ಮೇಲೆ ಹೋಗುತ್ತವೆ. ಆ ದೃಷ್ಟಿಯಿಂದ ಇಲ್ಲಿ ಕೂಡ ಸರ್ಕಮೆಟೆನ್ಸಸ್ ಈ ರೀತಿ ಕ್ರಿಯೇಟ್ ಆಗಿ ಮಾನ್ಯ ಜನಾರ್ಧನ ರೆಡ್ಡಿಯವರು ಆರೋಪ ಮಾಡಿದ್ದಾರೆ. ಅವರು ಆರೋಪವನ್ನು ಅಲ್ಲಗೆಳೆಯುವ ಹಾಗೆ ಇಲ್ಲ, ಬರೋಬರಿ ಪ್ರೂವ್ ಮಾಡುತ್ತೇವೆ ಎಂದು ಹೇಳುತ್ತಾರೆ. ಮತ್ತೆ ಆ ಪಕ್ಷದವರೂ ಕೂಡ ಅವರ ವಿರುದ್ಧ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಸಂಶಯ ಹೀಗೆ ತಯಾರಾಗಿದೆ ಬಹುಶಃ ಇದರಲ್ಲಿ ಏನೋ ಇದೆ ಎಂದು. ಈಗ ಇದರಿಂದ ಪಾರಾಗಬೇಕು. ಪಾರಾಗಬೇಕಾದರೆ ಎನ್‌ಕ್ವೈರಿ ಆಗಬೇಕು, ಇಂಪಾರ್ಷಿಯಲ್ ಎನ್‌ಕ್ವೈರಿಯಾಗಬೇಕು. ಆ ದೃಷ್ಟಿಯಿಂದ ವಿರೋಧ ಪಕ್ಷದವರು ಇವತ್ತು ಸಿ.ಬಿ.ಐ ಎನ್‌ಕ್ವೈರಿ ಆಗಬೇಕೆಂದು ಕೇಳಿದ್ದಾರೆ. ಇವತ್ತು ಈ ಬ್ರಷ್ಟಾಚಾರ ಎಷ್ಟು ವ್ಯಾಪಿಸಿದೆ ಎಂದರೆ ಈ ದೇಶದ ಆರ್ಥಿಕ ಪರಿಸ್ಥಿತಿಯ ವಿಷಮತೆ ದೊಡ್ಡ ವಿಷಮತೆಯಾಗಿದೆ. ಕೆಲವು ಮಾಫಿಯಾಗಳು ಸಿಕ್ಕಾಪಟ್ಟೆ ಹಣ ಮಾಡಿಕೊಂಡಿದ್ದಾರೆ ಅದರಿಂದ ಯಾರನ್ನು ಬೇಕಾದರೂ ಖರೀದಿ ಮಾಡುತ್ತಿದ್ದಾರೆ. ಮತ್ತು ಕೆಲವರು ಅಧಿಕಾರದಿಂದ ಏನು ಬೇಕಾದರೂ ಮಾಡುತ್ತಾರೆ. ಅದು ಈ ಲೆವೆಲ್‌ಗೆ ಹೋಗಿದೆ. ಆ ದೃಷ್ಟಿಯಿಂದ ಇವತ್ತೇನು ಪರಿಸ್ಥಿತಿ ನಿರ್ಮಾಣವಾಗಿದೆ ಇದಕ್ಕಿಂತ ಮೊದಲೂ ಕೂಡ ಮಾನ್ಯ ಹೆಗಡೆಯವರ ಮೇಲೆ ಆರೋಪ ಇತ್ತು. ರೇವುಜಿತ್ ಹಾಗೂ ಎಂ.ಡಿ ಸೀಟ್ ಬಗ್ಗೆ, ಅವರು ಸ್ವಂತ ವಾಲಂಟರಲಿ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿದರು. ಇಂತಹ ಕನ್‌ಫ್ರಂಟೇಷನ್‌ಗೆ ಅವಕಾಶ ಕೊಟ್ಟಿಲ್ಲ. ಆ ದೃಷ್ಟಿಯಿಂದ ಇವತ್ತು ಸರ್ಕಾರ ಅಂತಹದೊಂದು ಎನ್‌ಕ್ವೈರಿಗೆ ತಯಾರಾಗಬೇಕು. ಏಕೆಂದರೆ ಭ್ರಷ್ಟಾಚಾರದ ಬಗ್ಗೆ ಮಾನ್ಯ ಮುರಾರ್ಜಿ ದೇಸಾಯಿ ಇದ್ದಾಗ ಒಂದು ಸಲ ಹೇಳಿದ್ದರು. ಅವರು ಪ್ರಧಾನ ಮಂತ್ರಿ ಇದ್ದಾಗ ಯಾರೋ ಪಾರ್ಲಿಮೆಂಟ್‌ನಲ್ಲಿ ಹೇಳುತ್ತಿದ್ದರು. ಏನೆಂದರೆ ಮೊದಲು ರಾಜಕೀಯದಲ್ಲಿ ಕೆಲವು ಒಳ್ಳೆಯ ಜನ ಚುನಾವಣೆಯಲ್ಲಿ ಗೆಲ್ಲಬೇಕಾದರೆ ಕೆಲವು ಅನ್ ಸೋಷಿಯಲ್ ಎಲಿಮೆಂಟ್ಸ್‌ಗೆ ಪ್ರೊಟೆಕ್ಷನ್ ಕೊಡುತ್ತಿದ್ದರಂತೆ. ಅವರು ಒಳ್ಳೆಯವರು ಇದ್ದರೂ ಕೂಡ ಕೆಲವರಿಗೆ ಕಂಪಲ್ಸಷನ್ ಅಂತವರಿಗೆ ಕೊಡುತ್ತಿದ್ದರು. ಆದರೆ ಮುಂದೆ ಬರುಬರುತ್ತಾ ದಿನಗಳಲ್ಲಿ ಅನ್ ಸೋಷಿಯಲ್ ಎಲಿಮೆಂಟ್ಸ್ ಅವರೇ ನಿಂತು ಆರಿಸಿ

ಬರುತ್ತಿದ್ದಾರೆ ಮಾಫಿಯಾಗಳು ಇವತ್ತು ಆರಿಸಿ ಬರುತ್ತಿದ್ದಾರೆ. ಅದು ಲಿಕ್ಕರ್ ಲಾಬಿ ಇರಲಿ, ಶುಗರ್ ಲಾಬಿ ಇರಲಿ ಮೆಡಿಕಲ್ ಲಾಬಿ ಇರಲಿ ಅಥವಾ ಮೈನ್ಸ್ ಲಾಬಿ, ಇದು ಈಗ ಎಲ್ಲದ್ದಕ್ಕಿಂತ ಲೇಟಸ್ಟ್ ಬಹಳ ಸ್ಟ್ರಾಂಗ್ ಲಾಬಿ ನಮ್ಮ ಕರ್ನಾಟಕದಲ್ಲಿ. ಈಗ ಅವರಲ್ಲಿ ಕೂಡ ಮೈನ್ಸ್ ಹಗರಣದಲ್ಲಿ ಜಗಳವಾಯಿತು. ಅವರು ಎಷ್ಟು ಅರ್ನ್ ಮಾಡುತ್ತಿದ್ದಾರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಬಹುಶಃ ಬೇರೆ ಯಾವ ಲಾಬಿಗಳಿಂದ ಕೂಡ ಹಣ ಗಳಿಸುತ್ತಿಲ್ಲ. ನಮ್ಮ ಮಂತ್ರಿಗಳು ಅಂಥಾದ್ದರಲ್ಲಿ ಹೋಗಿ, ಅವರ ಬಗ್ಗೆ ಎನ್‌ಕ್ವಾಯರಿ ಮಾಡಿದ್ದರೂ ಪರವಾಗಿಲ್ಲ, ಅವರಿಗೆ ಲಗಾಮ್ ಹಾಕಿದ್ದರೂ ಪರವಾಗಿಲ್ಲ. ಆದರೆ ಇವರು ಬಹಳ ಅರ್ನ್ ಮಾಡುತ್ತಿದ್ದಾರೆ, ಹೆಚ್ಚು ಹಣ ಹೇಗ ಬಂತು? ನಾವು ಇಷ್ಟೆಲ್ಲಾ ರಾಜಕಾರಣದಲ್ಲಿ ಇದ್ದು, ಶ್ರಮ ಪಟ್ಟು ಮುಂದೆ ಬಂದಮೇಲೆ, ನಮಗಿಂತ ನಮ್ಮ ಹಿಂಬಾಲಕರೆ, ಹೆಚ್ಚು ಅರ್ನ್ ಮಾಡುತ್ತಿದ್ದಾರೆಂಬ ಸ್ಥಿತಿಯಲ್ಲಿ ಅವರು ಇವತ್ತು ಬ್ರಷ್ಟಾಚಾರದ ಆರೋಪದಲ್ಲಿ ಸಿಕ್ಕಿ ಬಿದ್ದಿದ್ದಾರೆ. ಇವತ್ತು ಅವರು ಏನೂ ಹೇಳುತ್ತಾ ಇಲ್ಲ. ಇದರಿಂದ ಅವರು ಪಾರು ಆಗಬೇಕು, ಇಲ್ಲಿ ಸಂಶಯ ನಿರ್ಮಾಣವಾಗಿದೆ. ಇದರಿಂದ ಪಾರು ಆಗಬೇಕಾಗಿದೆ, ದಿನಾ ಪತ್ರಿಕೆಗಳಲ್ಲಿ ಆರೋಪವಾಗುವಂಥಾದ್ದು ನಡೆಯುತ್ತವೆ, ಎಷ್ಟೋ ಜನರು ಭಾಷಣದಲ್ಲಿ ಆರೋಪವನ್ನು ಹೊರಿಸುತ್ತಾರೆ. ಆದರೆ ಈ ಆರೋಪ ಆ ರೀತಿಯಾಗಿ ಇಲ್ಲ. ಇದರಲ್ಲಿ ಸಂಶಯ ನಿರ್ಮಾಣವಾಗಿದೆ. ಈ ಸಂಶಯದಿಂದ ದೂರವಾಗಬೇಕಾದರೆ, ಸರ್ಕಾರದವರು ತಯಾರು ಆಗಬೇಕು. ಈ ದೇಶದಲ್ಲಿ ಅನೇಕ ಉದಾಹರಣೆಗಳು ಇವೆ, ಸ್ವತಃ ವಾಲೆಂಟರಿಯಾಗಿ ಅವರೇ ಎನ್‌ಕ್ವಾಯರಿಗೆ ತಯಾರಾಗಿದ್ದರು. ಆದರೆ ಈ ಸರ್ಕಾರ ಏಕೆ ಇಷ್ಟು ಪಟ್ಟು ಹಿಡಿದಿದ್ದಾರೋ, ಎನ್‌ಕ್ವಾಯರಿಗೆ ತಯಾರು ಇಲ್ಲವೋ, ಗೊತ್ತಿಲ್ಲ. ಈ ಎರಡೂ ವಿಷಯಗಳನ್ನು ಸಿ.ಬಿ.ಐ.ಗೆ ಕೊಡಬೇಕು. ಮೊದಲನೆಯದು ನೈಸ್ ಬಗ್ಗೆ, ಎರಡನೆಯದು ಮೈನ್ಸ್ ಹಗರಣ, ಈ ಎರಡನ್ನೂ ಸಿ.ಬಿ.ಐ.ಗೆ ಎನ್‌ಕ್ವಾಯರಿಗೆ ಕೊಡಬೇಕು. ನಾವು ಈಗ ನೈಸ್‌ನವರ ಬಗ್ಗೆ ವಕಾಲತ್ತು ಮಾಡುತ್ತಿಲ್ಲ. ಈ ದೇಶದಲ್ಲಿ ಬಂಡವಾಳ ಶಾಹಿಗಳು, ಅದು ರಿಲೆಯನ್ಸ್‌ನ ಅಂಬಾನಿಯಾಗಲಿ, ಅಥವಾ ನೈಸ್‌ನವರಾಗಲಿ, ಇಂಥವರು ಎಷ್ಟೋ ಬಂಡಾವಾಳಶಾಹಿ ಜನರು, ಪ್ರಾರಂಭದಲ್ಲಿ 100, 200, 70 ರೂ.ಗಳನ್ನು ಕೊಟ್ಟು ರಿಜಿಸ್ಟರ್ ಮಾಡಿಸಿದ್ದಾರೆಂದು, ಅದೇ ರೀತಿಯಲ್ಲಿ ಮಾಡಿ ಮುಂದೆ ಬಂದಿದ್ದಾರೆ. ಬ್ಯಾಂಕ್‌ಗಳಲ್ಲಿ ಲೋನ್ ತೆಗೆದುಕೊಳ್ಳುವುದಕ್ಕೆ ಸರ್ಕಾರದ ಕಡೆಯಿಂದ ಅಶ್ಯೂರ್‌ನ್ಸ್ ಕೊಡಿಸುವಂಥಾದ್ದು ಮಾಡಿ, ಈ ರೀತಿಯಲ್ಲಿ ಇವರು ದೇಶದಲ್ಲಿ ಮುಂದೆ ಬಂದಿರುವಂಥಾದ್ದು. ಈ ದೇಶದಲ್ಲಿ ಬಂಡವಾಳಶಾಹಿ ಜನರೆಲ್ಲರೂ ಅದೇ ರೀತಿಯಲ್ಲಿ ಮುಂದೆ ಬಂದಿದ್ದಾರೆ. ಈಗ ಬಳ್ಳಾರಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ

ಕಡೆಗಳಲ್ಲಿ ಆಗಿದೆ, ಅದರಲ್ಲಿ ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಆಗಿದೆ. ಈ ಅರಣ್ಯಗಳನ್ನು ನಾಶ ಮಾಡಿ ಇವತ್ತು ಹಣವನ್ನು ಸಂಪಾದನೆ ಮಾಡುವುದು. ಆ ಹಣದ ಬಲದಿಂದ ಡರ್ಬಿ ಮಾಡುವುದು. ಆ ಹಣದ ಬಲದಿಂದ ಪಕ್ಷದಿಂದ ಚುನಾವಣೆಗೆ ಟಿಕೇಟ್‌ಗಳು ಸಿಗುತ್ತದೆಯೇ, ಎಂದು ಕೇಳುವುದು. ಬಳ್ಳಾರಿ ಜಿಲ್ಲೆಯಲ್ಲಿ ಹಾಗೆ ಇಲ್ಲ, ಅವರೇ ಪಕ್ಷಕ್ಕೆ ಕೊಟ್ಟು ಬಿಡುತ್ತಾರೆ, ನಮಗೆ ಇಷ್ಟಿಷ್ಟು ಟಿಕೇಟ್ ನಮಗೆ ಕೊಡಬೇಕೆಂದು ಕೊಡುತ್ತಾರೆ. ಇಂತಹ ಪರಿಸ್ಥಿತಿ ಅಲ್ಲ ನಿರ್ಮಾಣವಾಗಿದೆ. ಇಂತಹ ಜನರಿಗೆ ಪುಕ್ಕಟೆಯಾಗಿ ಏಕೆ ಬಿಡಬೇಕು? ಇದರಲ್ಲಿ ಹಣವನ್ನು ಕೇಳಿ ವಸೂಲು ಮಾಡುವುದಕ್ಕೆ 15 ದಿವಸಗಳು ಕಾಯುವಂತಹ ಅವಶ್ಯಕತೆ ಇದ್ದಿರಲಿಲ್ಲ. ಅವರ ಕ್ವಾಯರಿಗಳನ್ನೆಲ್ಲಾ ಬಂದ್ ಮಾಡಿ, ಅವರಿಂದ ಹಣವನ್ನು ವಸೂಲು ಮಾಡಿ, ನಂತರ ಶ್ರೀ ಜನಾರ್ಧನ ರೆಡ್ಡಿಯವರು ಬಹುಶಃ ಇನ್‌ವಾಲ್ವ್ ಇದ್ದಿರಬಹುದು. ಅವರು ಕೊನೆಗೆ expose ಮಾಡಿರಬೇಕು. ಆನಂತರ ಇವರು ಆರೋಪ ಮಾಡಿರಬಹುದು, ಮತ್ತೆ ಯಾರಾದರೂ ರಸ್ತೆಯ ಮೇಲೆ ಹೋಗುವವರು ಆರೋಪ ಮಾಡಿದ್ದರೆ, ಮತ್ತೆ ನಾವು ಯಾರಾದರೂ ಆರೋಪ ಮಾಡಿದ್ದರೆ, ನಾವು ಇದರ ಬಗ್ಗೆ ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳುತ್ತಾ ಇರಲಿಲ್ಲ. ಇವತ್ತು ಅವರು ಆರೋಪ ಮಾಡಿದ್ದಾರೆ. ಆ ಆರೋಪ ಅವರ ಪಕ್ಷದವರೇ, ಇವತ್ತು ನಿರಾಕರಣೆ ಮಾಡುತ್ತಿಲ್ಲ. ಇಲ್ಲಿ ಏನು ಇದೆಯೆಂದರೆ ಒಂದು ಕಡೆ ಭ್ರಷ್ಟಚಾರ, ಮತ್ತೊಂದು ಕಡೆ ಬಿ.ಜೆ.ಪಿ ಪಕ್ಷದಲ್ಲಿ ಎರಡು ಗ್ರೂಪ್‌ಗಳ ಜಗಳ, ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಪಕ್ಷಗಳ ಜಗಳ, ಇದರಿಂದಾಗಿ ಇದು ಹೊರಗೆ ಬಂದಿದೆ. ಈ ಭ್ರಷ್ಟಚಾರದ ಬಗ್ಗೆ ಸಿ.ಬಿ.ಐ ಎನ್‌ಕ್ವಾಯರಿಯಿಂದ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಅನೇಕ ಎನ್‌ಕ್ವಾಯರಿಗಳು ದೇಶದಲ್ಲಿ ಆಗಿವೆ. ಅನೇಕ ಜನರು ಸಿಕ್ಕಿ ಬಿದ್ದಿದ್ದಾರೆ, ಅನೇಕ ಜನರು ಪಾರು ಆಗಿದ್ದಾರೆ. ಆ ದೃಷ್ಟಿಯಿಂದ ಇದರಲ್ಲೂ ಕೂಡ ಸರ್ಕಾರ, ಇದು ಹೊಸದಾಗಿ ಆಗಿರುವಂತಹ ಸರ್ಕಾರ ಆಗಿದ್ದು, ಇನ್ನೂ ಮೂರ್ನಾಕು ವರ್ಷಗಳ ಕಾಲ ಸರ್ಕಾರ ನಡೆಸಬೇಕಾಗಿದೆ. ಅದುದರಿಂದ ಇದನ್ನು ಎನ್‌ಕ್ವಾಯರಿಗೆ ರೆಫರ್ ಮಾಡಿ, ತಾವು ಕ್ಲೀನ್ ಆಗಿ ಇರುವಂತಹ ಸರ್ಕಾರವೆಂದು ತೋರಿಸಿಕೊಡಬೇಕು, ಎಂದು ನಾನು ಮಾನ್ಯ ಉಪಾಧ್ಯಕ್ಷರ ಮುಖಾಂತರ ತಮಗೆ ತಿಳಿಸಲಿಚ್ಛಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಕೃಷ್ಣ ಭೈರೇಗೌಡರು ಮಾತನಾಡಬೇಕು. ತಾವು ಬೇಗ ಮುಗಿಸಬೇಕು. ಇದು ಆದಮೇಲೆ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು; ತಾವು ಸ್ವಲ್ಪ ಬೇಗ ಮುಗಿಸಿ.

ಶ್ರೀ ಸಿ.ಬಿ. ಭೈರೇಗೌಡ : ಆಗಬಹುದು.

ಶ್ರೀ ಸಿ.ಬಿ. ಕೃಷ್ಣ ಭೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಇವತ್ತು ಈ ವಿಷಯದ ಬಗ್ಗೆ ಈ 150 ಕೋಟಿ ರೂಪಾಯಿಗಳು ಹಸ್ತಾಂತರವಾಗಿದೆ, ಎನ್ನುವ ಬಗ್ಗೆ ಹಾಗೂ ಭ್ರಷ್ಟಚಾರದ ಬಗ್ಗೆ, ಸದನದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಈ ಹಿಂದೆ ಆ ವಿಷಯದ ಬಗ್ಗೆ ಮಾತನಾಡಬೇಡಿಯೆಂದು ಹೇಳಿದ್ದೀರಿ. ಆದರೂ ಸಹ ಬಿ.ಎಂ.ಐ.ಸಿ. ಬಗ್ಗೆಯೂ ಸಹ ಸಾಕಷ್ಟು ಹಣ ಹಸ್ತಾಂತರವಾಗಿದೆಯೆಂಬ ವಿಚಾರದ ಬಗ್ಗೆ ಕಳೆದ ವಾರ ಸಾಕಷ್ಟು ಚರ್ಚೆಯಾಗಿದೆ. ಈ ವಾರ ಗಣಿಗಾರಿಕೆಯಲ್ಲಿ ಸಾಕಷ್ಟು ಹಣ ಹಸ್ತಾಂತರವಾಗಿದೆಯೆಂದು ಇದೆ. ಇಲ್ಲಿ ವಾರದಿಂದ ವಾರಕ್ಕೆ ಯಾವುದಾದರೂ ಒಂದು ದೊಡ್ಡ ಭ್ರಷ್ಟಚಾರದ ಆರೋಪ, ಹಣ ಹಸ್ತಾಂತರದ ಆರೋಪ, ಬರುತ್ತಲೇ ಇದೆ. ಆದರೆ ನಮ್ಮ ಪಕ್ಷದಿಂದ ಈ ವಿಷಯಗಳು ಚರ್ಚೆಯಾಗಬೇಕೆಂದು, ನಾವು ಏಕೆ ಒತ್ತಾಯವನ್ನು ಮಾಡಿದೆವೆಂದರೆ, ಎಲ್ಲೋ ಒಂದು ಕಡೆ ಭ್ರಷ್ಟಚಾರವೆಂದು ಹೇಳಿದರೆ, ಸರ್ವೆ ಸಾಮಾನ್ಯ ಭ್ರಷ್ಟಚಾರವಿಲ್ಲದೆ ರಾಜಕೀಯವನ್ನು ಮಾಡುವುದಕ್ಕೆ ಆಗುವುದಿಲ್ಲ, ದೈನಂದಿನ ಜೀವನವನ್ನು ಮಾಡುವುದಕ್ಕೆ ಆಗುವುದಿಲ್ಲವೆಂಬ ಅಭಿಪ್ರಾಯ ಮೂಡಿ ಬರುತ್ತಾ ಇತ್ತು. ಈಗಲೂ ಬರುತ್ತಾ ಇದೆ, ನಾವು ಏನು ನಿಲ್ಲಿಸಿದ್ದೇವೆಂದು ಹೇಳುವುದಿಲ್ಲ. ನಾವು ಈ 150 ಕೋಟಿ ರೂಪಾಯಿಗಳ ಒಂದು ಹಗರಣವಾಗಿದೆಯೆಂದು ಹೇಳಿ, ಅದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕೆಂದು ಹೇಳಿದಾಗ, ಅದಕ್ಕೆ ಸರ್ಕಾರ ಅದರ ಅವಶ್ಯಕತೆ ಇಲ್ಲವೆಂದು ಹೇಳಿತು. ಆದರೆ ನಾವು ಅದಕ್ಕೆ ಏಕೆ ಪಟ್ಟು ಹಿಡಿದವೆಂದರೆ ಕನಿಷ್ಟ ಅದರ ಬಗ್ಗೆ ಚರ್ಚೆ ಮಾಡಿ, ಆ ವಿಷಯ ಗಂಭೀರವಾದದ್ದು, ಆ ಭ್ರಷ್ಟಚಾರದ ಬಗ್ಗೆ ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕೆಂಬುದು ಮತ್ತೆ ನಮ್ಮ ಅಭಿಪ್ರಾಯವನ್ನು ಕನಿಷ್ಟ ವ್ಯಕ್ತ ಪಡಿಸದೇ ಹೋದರೆ, ನಾವು ಮತ್ತಷ್ಟು ಹಳಿ ತಪ್ಪಿದ ಹಾಗೆ ಆಗುತ್ತದೆಂಬ ಉದ್ದೇಶದಿಂದ ಇವತ್ತು ನಾವೆಲ್ಲರೂ ಚರ್ಚೆಯನ್ನು ಮಾಡುತ್ತಿದ್ದೇವೆ. ಇವತ್ತು 150 ಕೋಟಿ ರೂಪಾಯಿಗಳದ್ದು ಒಂದು ಕಡೆಯಾದರೆ, ಅದರ ಜೊತೆಗೆ ದೈನಂದಿನ ಭ್ರಷ್ಟಚಾರದ ಬಗ್ಗೆ ಕೂಡ ನಾವು ಸ್ವಲ್ಪಮಟ್ಟಿನ ಗಮನವನ್ನು ಹರಿಸಬೇಕಾಗುತ್ತದೆ. ಇದರ ಹಿನ್ನಲೆಯಲ್ಲಿ ನಾವು ನೋಡಬೇಕಾಗುತ್ತದೆ. ಇವತ್ತು ರಾಜಕಾರಣಿಗಳನ್ನು ಸಮಾಜದಲ್ಲಿ, ಅದು ರಾಜಕಾರಣಿಗಳನ್ನಾಗಬಹುದು, ಅಧಿಕಾರಿಗಳನ್ನಾಗಬಹುದು, ಸಮಾಜದಲ್ಲಿ ನಮ್ಮನ್ನು ಯಾವ ರೀತಿಯಾಗಿ ಕಾಣುತ್ತಾರೆಂಬುದನ್ನು ನಾವು ಸ್ವಲ್ಪ ಆತ್ಮಾವಲೋಕನವನ್ನು ಮಾಡಿಕೊಳ್ಳುವಂತಹ ಪರಿಸ್ಥಿತಿ ಇದೆ. ನಮ್ಮಲ್ಲಿ ರಾಜಕಾರಣದಲ್ಲಿ, ಸದನದ ಸದಸ್ಯರಿಗಾಗಲಿ, ಇರತಕ್ಕಂಥವರಿಗೆ ಕನಿಷ್ಟ ಗೌರವ ಏನಾದರೂ ಇದೆಯಾ ಅಥವಾ ಇವತ್ತು ರಾಜಕಾರಣದಲ್ಲಿ ನಮ್ಮ ಅನೇಕ ಯುವಕರು, ಪ್ರವೇಶವನ್ನು ಮಾಡುತ್ತಿದ್ದಾರೆ.

ಇವರು ಯಾವ ಉದ್ದೇಶದಿಂದ ಪ್ರವೇಶವನ್ನು ಮಾಡುತ್ತಿದ್ದಾರೆಂಬ ಬಗ್ಗೆ ನಾವು ಯಾವತ್ತಾದರೂ ಯೋಚನೆ ಮಾಡಿದ್ದೇವಾ? ಈ ಹಿನ್ನಲೆಯಲ್ಲಿ ನಾವು ಈ ಹಗರಣವನ್ನು ನೋಡಬೇಕಾಗುತ್ತದೆ. ನಾನು ಆಗಲೇ ಹೇಳಿದ ಹಾಗೆ, ಎಲ್ಲೋ ಒಂದು ಕಡೆ 100 ಕೋಟಿ, 50 ಕೋಟಿ, ಎಷ್ಟೋ ಇದು ಒಂದು ಮಾಮೂಲಿ ಎನ್ನತಕ್ಕಂಥ ಅಭಿಪ್ರಾಯ, ವಾತಾವರಣ ಸೃಷ್ಟಿಯಾಗುತ್ತಿರುವಂತಹ ಹಿನ್ನಲೆಯಲ್ಲಿ, ಇದನ್ನು ನಾವು ನೋಡಿದಾಗ, ಸ್ವಲ್ಪ ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆಂಬ ಅವಶ್ಯಕತೆಯ ಅರಿವು ಆಗುತ್ತದೆಂದು ಭಾವಿಸುತ್ತೇನೆ. ಈಗ ಈ ಒಂದು ಘಟನೆಗೆ ಬರುವುದಾದರೆ, ಈ ಘಟನೆ ಮಾನ್ಯ ಚೆನ್ನಿಗಪ್ಪನವರು ಮಂತ್ರಿಗಳಾದ ತಕ್ಷಣ ಶುರುವಾಯಿತು. ಇವರು ಸುಮಾರು 25 ಸಾವಿರ ಕೋಟಿ ರೂಪಾಯಿಗಳಷ್ಟು ಸೋರಿಕೆಯಾಗುತ್ತಿದೆಯೆಂದು ಹೇಳಿದರು. ಬೇರೆ ಯಾರೂ ಹೇಳಿದ್ದೂ ಅಲ್ಲ. ಇವತ್ತು ಮಾತು ಎತ್ತಿದರೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು, ಶ್ರೀ ಕೆ.ಎಸ್. ಈಶ್ವರಪ್ಪನವರು, ಅದು ಏನು ಎವಿಡೆನ್ಸ್ ಇದೆ. ಅದನ್ನು ಕೊಟ್ಟು ಬಿಡಿ, ಎಂದು ಕೇಳುತ್ತಾರೆ. ಆ ಎವಿಡೆನ್ಸ್ ಸಂಪೂರ್ಣ ಸರ್ಕಾರದ ಕೈಯಲ್ಲೇ ಇದೆ. ಇದು ನಾವೆಲ್ಲ ಹೇಳಿದ್ದು, ಮಾನ್ಯ ಚೆನ್ನಿಗಪ್ಪನವರು 25 ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಸೋರಿಕೆಯಾಗುತ್ತಿದೆಯೆಂದು ಹೇಳಿದರು. ಇದನ್ನು ಆಧಾರವಿಲ್ಲದೇ ಹೇಳಿದ್ದಾರಾ? ಅಲ್ಲಿಗೆ ಮಾನ್ಯ ಮಂತ್ರಿಯವರು ಬೇಜವಾಬ್ದಾರಿಯಿಂದ ಹೇಳಿಕೆಯನ್ನು ಕೊಟ್ಟಿದ್ದಾರಾ ಎಂಬ ಸ್ಪಷ್ಟೀಕರಣವನ್ನು ಪ್ರಥಮವಾಗಿ ಅವರು ಮಾಡಲಿ, ಇಲ್ಲ, ಮಂತ್ರಿಯವರು ಬಾಯಿ ತಪ್ಪಿ ಹೇಳಿಬಿಟ್ಟರು. ಈ 25 ಸಾವಿರ ಕೋಟಿ ರೂಪಾಯಿಗಳ ಸೋರಿಕೆಯಾಗುತ್ತಿಲ್ಲವೆಂದು ಹೇಳಲಿ, ಅಮೇಲೆ ನಾವು ಆಧಾರ ಕೊಡುವ ಬಗ್ಗೆ ಯೋಚನೆ ಮಾಡುತ್ತೇವೆ. ಮಾನ್ಯ ಅರಣ್ಯ ಸಚಿವರೇ ಇದನ್ನು ಆರಂಭ ಮಾಡಿದ್ದು. ಇವರು 25 ಸಾವಿರ ಕೋಟಿ ರೂಪಾಯಿಗಳ ಸೋರಿಕೆಯಾಗುತ್ತಿದೆ. ಇದನ್ನು ಬಿಡುವುದಿಲ್ಲ, ಇದನ್ನು ಏನೇ ಆಗಲಿ, ನನ್ನ ಮಂತ್ರಿಗಿರಿ ಹೋದರೂ ಸರಿ, ಯಾವುದು ಹೋದರೂ ಸರಿ, ರಾಜಕೀಯ ಹೋದರೂ ಸರಿ, ನಾನು ಇದನ್ನು ನಿಲ್ಲಿಸೇ ನಿಲ್ಲಿಸುತ್ತೇನೆಂದು ಮಾನ್ಯ ಮಂತ್ರಿಯವರು ಹೇಳಿದರು. ನಾವು ಎಲ್ಲರೂ ಸಂತೋಷ ಪಟ್ಟೆವು. ಮಾನ್ಯ ಮುಖ್ಯಮಂತ್ರಿಯವರಿಗೆ ವರದಿಯನ್ನು ಕೊಟ್ಟರು, ನಂತರ ಏನಾಯಿತು? ಇವರು ಕನಕಮರಕ್ಕೆ ಹೋದರು, ಅಲ್ಲಿ ಒಂದು ವಾರದಲ್ಲೇ ಯಾರ್‍ಯಾರು ಗಣಿಗಾರಿಕೆಯನ್ನು ಮಾಡುತ್ತಿದ್ದರೂ, ಅದನ್ನೆಲ್ಲಾ ನಿಲ್ಲಿಸಿದರು. ನಾವು ಅದನ್ನು ಏನಾದರೂ ಪ್ರತಿಭಟನೆಯನ್ನು ಮಾಡಿದೆವಾ? ನ್ಯಾಯವಾಗಿ ಗಣಿಗಾರಿಕೆ ಮಾಡುವವರಿಗೆ ಅವಕಾಶ ಮಾಡಿಕೊಡಿಯೆಂದು ಕೇಳಿರಬಹುದು. ಅದು ಬಿಟ್ಟರೆ ನಮ್ಮ ಪಕ್ಷದಿಂದ ನಾವು ಇದನ್ನು ಮಾಡಬೇಡಿಯೆಂದು ಎಂದೂ ಹೇಳಲಿಲ್ಲ. ಅದೇ

ಸಂದರ್ಭದಲ್ಲಿ ಬಳ್ಳಾರಿಯಲ್ಲೂ ನಡೆಯುತ್ತಾ ಇದೆ, ಚಿಕ್ಕನಾಯಕನ ಹಳ್ಳಿಯಲ್ಲಿ ನಡೆಯುತ್ತಿದೆ. ಇನ್ನು ರಾಜ್ಯದ ನಾನಾ ಭಾಗಗಳಲ್ಲಿ ನಡೆಯುತ್ತಿದೆ. ಕನಕಪುರಕ್ಕೆ ಇದು ಕಾಕತಾಳಿಯನೋ, ಏನೋ, ನನಗೆಗೊತ್ತಿಲ್ಲ. ನಾನು ಏಕೆ ವಿವರಣೆಯನ್ನು ಕೊಡುತ್ತಿದ್ದೇನೆಂದರೆ, ಎವಿಡೆನ್ಸ್ ಎಂದು ಕೇಳಿದಾಗ, ಇದು ಕಾಕತಾಳೀಯ ನ್ಯಾಯನೋ just coincidence ಏನೋ, ಎಂಬುದರ ಬಗ್ಗೆ ಸ್ವಲ್ಪ ವಿಮರ್ಶೆ ಆಗಬೇಕಾಗುತ್ತದೆ. ಬಳ್ಳಾರಿಯಲ್ಲಿ ಸೋರಿಕೆಯಾಗುತ್ತಿರುವಂಥಾದ್ದನ್ನು ಮಂತ್ರಿಯವರೇ ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಒಂದು ಸಂದರ್ಭದಲ್ಲಿ ಆಗುತ್ತಾ ಇರಬಹುದೆಂದು ಹೇಳುತ್ತಾರೆ, ನಂತರ ಇವರು ಕನಕಪುರದಲ್ಲಿ ಹೋಗಿ, ಇವರು ಇಲ್ಲೀಗಲ್ ಆಗಿ ನಡೆಯುತ್ತಿರುವಂಥಾದ್ದನ್ನು ಸಾಕಷ್ಟು, ತತ್ ತಕ್ಷಣ ನಿಲ್ಲಿಸಿದರು. ನಾವು ಅದನ್ನು ಸ್ವಾಗತ ಮಾಡಿದೆವು, ಇನ್ನೊಂದು ಮಾಧ್ಯಮಕ್ಕೆ ಕೊಟ್ಟಂತಹ ಸಂದರ್ಶನದ ಸಮಯದಲ್ಲಿ ಆರೋಗ್ಯ ಮಂತ್ರಿಯವರು, ಮಾನ್ಯ ಡಿ.ಕೆ. ಶಿವಕುಮಾರ್‌ರವರು ಕೇಳಿದಾಗ ಇಲ್ಲ, ಒಂದು ವಾರದಲ್ಲಿ ಬಳ್ಳಾರಿ ಜಿಲ್ಲೆಯಲ್ಲೂ ಕ್ರಮ ಜರುಗಿಸುತ್ತೇವೆಂದು ಹೇಳಿದರು. ಇದನ್ನು ಮಾನ್ಯ ಮಂತ್ರಿಗಳೇ ಹೇಳಿದ್ದು, ಇಷ್ಟೆಲ್ಲಾ ಆಗಿಯೂ ಸಹ ಬಳ್ಳಾರಿಯಲ್ಲಿ ಇದುವರೆಗೂ ಮೈನಿಂಗ್ ಇಲ್ಲೀಗಲ್ ಆಗಿ ನಡೆಯುವಂಥಾದ್ದನ್ನು ತಡೆಗಟ್ಟುವುದಕ್ಕೆ ಕ್ರಮವನ್ನು ಸರ್ಕಾರ ಏಕೆ ಕೈಗೊಂಡಿಲ್ಲ? ಹಣ ಹಸ್ತಾಂತರವಾಗಿದ್ದರಿಂದಲೇ ಬಳ್ಳಾರಿಯಲ್ಲಿ ತೆಗೆದುಕೊಂಡಿಲ್ಲ. ಅದು ಕೋ-ಇನ್ಸಿಡೆನ್ಸೇ ಅಥವಾ if there is more than coincidence ಎನ್ನುವುದನ್ನು ನಾನು ಸರ್ಕಾರದ ವಿವೇಚನೆಗೇ ಬಿಡುತ್ತೇನೆ. ಇದರ ಬಗ್ಗೆ ನಾವು ಈ ಸದನದೊಳಗೆ ಮಾತ್ರವಲ್ಲ, ಇಡೀ ದೇಶದಲ್ಲೇ ಚರ್ಚೆಯಾಗುತ್ತಿದೆ. ಎಲ್ಲಾ ಕಡೆ ನಿಲ್ಲಿಸುತ್ತೇವೆ ಎಂದು ಹೇಳಿದವರು ಬಳ್ಳಾರಿಯನ್ನು ಬಿಡಲು ಕಾರಣವೇನು? ಹಾಗೆಯೇ, ಈ ಬಗ್ಗೆ ಆರೋಪ ಮಾಡಿದವರ್‍ಯಾರು? ಆರೋಪವನ್ನು ಒಬ್ಬ ಸಾಮಾನ್ಯ ಸದಸ್ಯ ಮಾಡಿದನೇ? ದಿನಬೆಳಗಾದರೆ ನೂರೊಂದು ಜನ ನೂರೊಂದು ಹೇಳುತ್ತಾರೆ ಎನ್ನುವ ಮಾತನ್ನೂ ಸಹ ನಾವು ಈ ಸದನದಲ್ಲಿ ಕೇಳಿದ್ದೇವೆ. ಆರೋಪ ಮಾಡಿದವರ ಯಾರು? ದಾರಿಯಲ್ಲಿ ಹೋಗತಕ್ಕಂಥ ಯಾರೋ ಒಬ್ಬ ಮನುಷ್ಯ ಆರೋಪ ಮಾಡಿದ್ದಾನೆಯೇ? ಆಡಳಿತ ಪಕ್ಷದ ಒಬ್ಬ ಸದಸ್ಯರು ವಿಧಾನ ಪರಿಷತ್ ಸದಸ್ಯರು ಹೇಳಿದ್ದಾರೆ. ಈ ಅಂಶವನ್ನು ಈಗಾಗಲೇ ಮಾತನಾಡಿದ ಸಾಕಷ್ಟು ಜನ ಸದಸ್ಯರು ಹೇಳಿದ್ದಾರೆ. ಆದರೂ ನಾನೂ ಇದನ್ನು ಒತ್ತಿ ಹೇಳಬೇಕಾಗುತ್ತದೆ. ಏಕೆಂದರೆ, ಇದನ್ನು ಯಾರೋ ಹೇಳಿದ್ದು ಅಲ್ಲ, ರಸ್ತೆಯಲ್ಲಿ ಹೋಗುವವರು ಯಾರೋ ಹೇಳಿ ಹೋಗಿದ್ದು ಅಲ್ಲ. ಆಡಳಿತ ಪಕ್ಷದ ಒಬ್ಬ ಸದಸ್ಯರು ಆರೋಪ ಮಾಡಿರತಕ್ಕಂಥಾದ್ದು. ಎಲ್ಲಿ ಆರೋಪ ಮಾಡಿದರು ಎನ್ನವುದನ್ನೂ

ಕೆಲವು ಸದಸ್ಯರು ಪಾಯಿಂಟ್ ಔಟ್ ಮಾಡಿ ತೋರಿಸಿದ್ದಾರೆ. ಅವರಿಗೆ ಯಾರ್‍ಯಾರ ಹಿನ್ನಲೆ ಇದೆ ಎನ್ನುವುದನ್ನೂ ಹೇಳಿದ್ದಾರೆ. ಅವರು ಇದುವರೆಗೆ ಅದನ್ನು ಏಕೆ ವಾಪಸ್ಸು ತೆಗೆದುಕೊಂಡಿಲ್ಲ ಎನ್ನುವ ವಿಷಯವನ್ನೂ ಸಾಕಷ್ಟು ಜನರು ಹೇಳಿರುವುದರಿಂದ ಮತ್ತೆಮತ್ತೆ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಎವಿಡೆನ್ಸ್ ಎಂದು ಅನೇಕ ಬಾರಿ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಕೇಳಿದರು. ನನ್ನ ಹತ್ತಿರ ಎವಿಡೆನ್ಸ್ ಇದೆ ಎಂದು ಜನಾರ್ಧನ ರೆಡ್ಡಿಯವರೇ ಹೇಳಿದ್ದಾರೆ. ನನ್ನ ಹತ್ತಿರ ಎವಿಡೆನ್ಸ್ ಇದೆ ಎಂದು ಜನಾರ್ಧನರೆಡ್ಡಿಯವರು ಹೇಳಿದ್ದಾರೋ, ಇಲ್ಲವೋ ಎನ್ನುವುದನ್ನು ಹೇಳಲಿ. ಅವರು ನನ್ನ ಹತ್ತಿರ ಎವಿಡೆನ್ಸ್ ಇದೆ ಎಂದು ಹೇಳಿದ ಮೇಲೂ ನೀವು, ಪ್ರಾಸಿಕ್ಯೂಟ್ ಮಾಡಲಿಕ್ಕೆ ನಮಗೆ 6 ತಿಂಗಳು ಇದೆ ಎಂದು ಹೇಳಿಕೊಂಡು ಯಾವುದಕ್ಕೆ ಕಾಯುತ್ತಿದ್ದೀರಿ? ಎವಿಡೆನ್ಸ್ ನಾಶವಾಗಲಿ ಎಂದು ಕಾಯುತ್ತಿರುವರೇ ನೀವು? ಅವರ ಮೇಲೆ ತಕ್ಷಣ ಕೇಸ್ ಹಾಕಿ, ನಿನ್ನ ಹತ್ತಿರ ಏನು ಎವಿಡೆನ್ಸ್ ಇದೆ ಅದನ್ನು ಸಬ್ಮಿಟ್ ಮಾಡು ಎಂದು ಏಕೆ ಫೋರ್ಸ್ ಮಾಡಲಿಲ್ಲ? ಎವಿಡೆನ್ಸ್ ಯಾರ ಹತ್ತಿರ ಇದೆ, ಅವರನ್ನು ನೀವು ಕೇಳುತ್ತಿಲ್ಲ. ಎವಿಡೆನ್ಸ್ ಇದೆ ಎಂದು ಹೇಳಿರುವವರನ್ನು ಕೇಳುವುದು ಬಿಟ್ಟು, ನಮ್ಮನ್ನು ನೀವು ಎವಿಡೆನ್ಸ್ ಕೊಡಿ ಎಂದು ಕೇಳಿದರೆ, ನಾವೇನು ಅದರಲ್ಲಿ ಪಾತ್ರಧಾರರೇ? ನಾವೇನು ಅದರ ಮಧ್ಯವರ್ತಿಗಳೇ ಅಥವಾ ಒಂದು ಕೈಯಿಂದ ಕೊಟ್ಟಿದ್ದೇವೆಯೇ ಅಥವಾ ಇನ್ನೊಂದು ಕೈಯಿಂದ ತೆಗೆದುಕೊಂಡಿದ್ದೇವೆಯೇ? ನನ್ನ ಹತ್ತಿರ ಎವಿಡೆನ್ಸ್ ಇದೆ ಎಂದು ಜನಾರ್ಧನ ರೆಡ್ಡಿಯವರು ಸಾರಾಸಗಟಾಗಿ ಹೇಳಿದ್ದಾರೆ. ಯಾವುದಕ್ಕೆ ಕಾಯುತ್ತಿದ್ದೀರಿ ನೀವು? ಎವಿಡೆನ್ಸನ್ನು confiscate ಮಾಡದೇ ಏಕೆ ಕಾಯುತ್ತಿದ್ದೀರಿ? ಮುಚ್ಚಿಡಲು ಕಾಯುತ್ತಿದ್ದೀರೋ, ಇಲ್ಲವೋ? ರಾಜಿ ನಡೆಯುತ್ತಿದೆ. ಆದರೆ ರಾಜಿ ಇನ್ನೂ ಆಗಿಲ್ಲ. ನೀವು ರಾಜಿ ಮಾಡಬಹುದು. ರಾಜಿ ಮಾಡುವುದೇನೂ ದೊಡ್ಡ ವಿಷಯವಲ್ಲ. 30–40 ವರ್ಷ ರಾಜಕೀಯ ಅನುಭವ ಇರತಕ್ಕಂಥವರು ತಾವೆಲ್ಲಾ ಇದ್ದೀರಿ. ಇಂಥ ಘಟನೆಗಳು ನಡೆಯುತ್ತಲೇ ಇರುತ್ತವೆ. ರಾಜಿಗಳು ನಡೆಯುತ್ತಲೇ ಇರುತ್ತವೆ. ಆದರೆ ಯುವಕರಾದ ನಾವುಗಳು ಇದರ ಮಧ್ಯ ಸಿಕ್ಕಿಹಾಕಿಕೊಂಡು, ನಾವು ತಲೆ ಚೆಚ್ಚಿಕೊಳ್ಳುವ ಹಾಗೆ ಆಗಿದೆ. ಯಾವ ಕಡೆ ತಿರುಗಿ ನೋಡುವುದು ಎಂದು ನಮಗೇ ಗೊತ್ತಾಗುತ್ತಿಲ್ಲ. ಈ ಸದನ ನಡೆಯುವ ರೀತಿ ನೋಡೋಣವೇ ಅಥವಾ ಸರ್ಕಾರ ನಡೆಯುವ ರೀತಿ ನೋಡೋಣವೇ? ನಮ್ಮ ಯುವಕರ ಕತೆ ಏನು ಎನ್ನುವುದು ಹೇಳುವುದೇ ಬೇಡ. ಅದನ್ನು ಇನ್ನೊಂದು ಸಂದರ್ಭದಲ್ಲಿ ಮಾತನಾಡೋಣ, ಈಗೇಕೆ? ಅವರು ನನ್ನ ಹತ್ತಿರ ಎವಿಡೆನ್ಸ್ ಇದೆ ಎಂದು ಹೇಳಿದರೆ. ಅವರಿಂದ ತೆಗೆದುಕೊಳ್ಳಲಿಲ್ಲ. ಮಾನ್ಯಮುಖ್ಯಮಂತ್ರಿಗಳು

ಇನ್ನೊಂದು ವಿಷಯವನ್ನು ಹೇಳಿದರು. Defamation case ಹಾಕುತ್ತೇವೆ ಎಂದು ಹೇಳಿ ಸುಮಾರು ಒಂದು ವಾರದ ಮೇಲಾಯಿತೆಂದು ಕಾಣುತ್ತದೆ. ಯಾವಾಗ ಹೇಳಿದರು ಎನ್ನುವ ನಿರ್ದಿಷ್ಟವಾದ ದಿನಾಂಕ ನನಗೆ ಜ್ಞಾಪಕವಿಲ್ಲ. Defamation case ಹಾಕುತ್ತೇವೆ ಎಂದು ಹೇಳಿದವರು ಇವತ್ತಿಗೂ ಅದನ್ನು ಹಾಕಿಲ್ಲ. ಮಾನನಷ್ಟ ಮೊಕದ್ದಮೆ ಹೂಡುತ್ತೇವೆ ಎಂದು ಹೇಳಿದವರು, ಈಗ ಸುಮ್ಮನಿರುವುದನ್ನು ನೋಡಿದರೆ, ನಿಮಗೆ ಮಾನನಷ್ಟ ಆಗಿಲ್ಲ, ಅವರು ಹೇಳಿರುವುದನ್ನು ನೀವು ಒಪ್ಪಿಕೊಂಡಿದ್ದೀರಿ ಎನ್ನುವುದು ಅಲ್ಲೇ ಸಾಬೀತಾಗುತ್ತದೆ. ಮಾನನಷ್ಟ ಮೊಕದ್ದಮೆ ಹೂಡುತ್ತೇವೆ ಎಂದು ಹೇಳಿ ಎಂಟು ದಿನಗಳಾದರೂ ಇದುವರೆಗೆ ಮಾನನಷ್ಟ ಮೊಕದ್ದಮೆ ಹೂಡತಕ್ಕಂಥ ದಿಕ್ಕಿನಲ್ಲಿ ತಾವು ಯಾವುದೇ ಕ್ರಮ ಕೈಗೊಂಡಿಲ್ಲ. ಅಂದರೆ ತಾವು ಅದನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದೀರಿ ಎಂದು ನಾವು ಅರ್ಥೈಸಬೇಕಾಗುತ್ತದೆ. ನೀವು ಹೇಳಿದ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ. ಬಳ್ಳಾರಿಯಲ್ಲಿ ಗಣಿಗಾರಿಕೆಯನ್ನು ನಿಲ್ಲಿಸುತ್ತೇವೆ ಎಂದು ಹೇಳಿದರು, ಅದನ್ನೂ ಮಾಡಲಿಲ್ಲ. ಅವರನ್ನು ಪ್ರಾಸಿಕ್ಯೂಟ್ ಮಾಡುತ್ತೇವೆ ಎಂದು ಒಂದು ಸಂದರ್ಭದಲ್ಲಿ ಹೇಳಿದರು, ಅದನ್ನೂ ಮಾಡಲಿಲ್ಲ. Defamation case ಹಾಕುತ್ತೇವೆ ಎಂದು ಹೇಳಿದರು, ಅದನ್ನೂ ಮಾಡಲಿಲ್ಲ. ಈ ರೀತಿಯಾದರೆ ನಾವು ಸರ್ಕಾರವನ್ನು ನಂಬುವುದು ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಯುವಕರು. ತಾವು ಮುಖ್ಯಮಂತ್ರಿಗಳಾದ ಮೇಲೆ ಎಲ್ಲಾ ಕಡೆ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ, ಅವುಗಳಲ್ಲಿ ಮುಖ್ಯಮಂತ್ರಿಗಳು ಓಡಾಡುತ್ತಿದ್ದಾರೆ, ಮಾಡುತ್ತಿದ್ದಾರೆ ಎಂದು ಹೊಗಳಿದ್ದೇ ಹೊಗಳಿದ್ದು. ನಾವೂ ಸಹ ಸಂತೋಷ ಪಟ್ಟೆವು, ಒಬ್ಬರು ಯುವಕರಿಗೆ ಅವಕಾಶ ಸಿಕ್ಕಿದೆ, ಅವರೂ ಮುಂದೆ ಬರಲಿ, ರಾಜ್ಯಕ್ಕೆ ಒಳ್ಳೆಯದು ಮಾಡುವ ಹಾಗಿದ್ದರೆ ಮಾಡಲಿ ಎಂದು ಸಂತೋಷ ಪಟ್ಟೆವು. ಆದರೆ ಇವತ್ತು ಏನಾಗುತ್ತಿದೆ ಎಂದರೆ, ಹೇಳಿಕೆ ಕೊಡತಕ್ಕಂಥಾದ್ದೊಂದು, ಮಾಡುವುದೊಂದು ಆದಾಗ ಯಾರು ತಾನೇ ಸರ್ಕಾರವನ್ನಾಗಲೀ, ಮುಖ್ಯಮಂತ್ರಿಗಳನ್ನಾಗಲೀ ನಂಬುತ್ತಾರೆ? ಸರ್ಕಾರದಲ್ಲಿ ಸಂಪೂರ್ಣ ವಿಶ್ವಾಸವನ್ನು ಕಳೆದುಕೊಳ್ಳತಕ್ಕಂಥ ಮಟ್ಟಕ್ಕೆ ಇವತ್ತು ಸರ್ಕಾರ ಮತ್ತು ಮುಖ್ಯಮಂತ್ರಿಗಳು ತಂದು ನಿಲ್ಲಿಸಿದ್ದಾರೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ತಾವೇ ಹೇಳಿ, ಈ ರೀತಿ, ಹೇಳಿಕೆ ಕೊಡುವುದೊಂದು, ಮಾಡುವುದೊಂದು ಮಾಡುತ್ತಿದ್ದರೆ ಯಾರು ತಾನೇ ಗೌರವ ಕೊಡುತ್ತಾರೆ? ಬಿಎಂಐಸಿ ವಿಷಯದ ಬಗ್ಗೆ ಈಗ ಮಾತನಾಡಬೇಡಿ ಎಂದು ತಾವು ಹೇಳುತ್ತೀರಿ. ಅದರ ಬಗ್ಗೆ ಇಲ್ಲಿ ಎಂಟು ದಿನ ಚರ್ಚೆಯಾಯಿತು. ನಾವೆಲ್ಲಾ ಏನೇನೋ ನಿರೀಕ್ಷೆ ಇಟ್ಟುಕೊಂಡಿದ್ದೆವು. ಇದರಲ್ಲಿ ಏನೇನೋ ನಡೆದು ಹೋಗಿದೆ, ಸರ್ಕಾರ ಇದನ್ನು ಬಲಿ ಹಾಕುತ್ತದೆ, ನೀವು

ಏನಾದರೂ ಕ್ರಮ ತೆಗೆದುಕೊಳ್ಳಿ, ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ ಎಂದು ನಮ್ಮ ಪಕ್ಷದವರೆಲ್ಲಾ ಹೇಳಿದ್ದೆವು. ಅದರ ಬಗ್ಗೆ ಕ್ರಮ ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ, ಕರ್ನಾಟಕದಲ್ಲಿ ಒಂದು ಐತಿಹಾಸಿಕ ತೀರ್ಮಾನವಾಗುತ್ತದೆ ಎನ್ನುವ ನಿರೀಕ್ಷೆ ನಮ್ಮಲ್ಲಿ ಇತ್ತು. ತೌಡು ಕುಟ್ಟುವುದು ಎಂದು ನಮಗೆ ಹೇಳುತ್ತಾರೆ. ಕೊನೆಗೆ, ಇವರು ಮಾಡಿದ್ದು ಏನು? ಇವರು ಬೆಟ್ಟವನ್ನು ಅಗೆದು ಇಲಿಯನ್ನಲ್ಲ, ಒಂದು ಇರುವೆಯನ್ನು ಹುಡುಕಿದ್ದಾರೆ ಎಂದು ವಾಟಾಳ್ ನಾಗರಾಜ್‌ರವರು ಹೇಳಿದರು. ಆ ರೀತಿಯಾಗಿ, ಇವರು ನಮ್ಮಲ್ಲಿ ನಿರೀಕ್ಷೆಗಳನ್ನು ಹುಟ್ಟುಹಾಕಿ ಕೊನೆಗೆ ಮಾಡಿದ್ದೇನು? ಇದೇ ರೀತಿಯಾಗಿ, ಪ್ರತಿಯೊಂದು ವಿಷಯದಲ್ಲೂ ಸಹ ನಾವು ಏನು ನಿರೀಕ್ಷೆ ಇಟ್ಟುಕೊಳ್ಳುತ್ತೇವೆ, ಏನೊಂದು ನಿರೀಕ್ಷೆಗಳನ್ನು ಸರ್ಕಾರವೇ ಕೊಡುತ್ತದೆ, ಅವೆಲ್ಲದರಲ್ಲೂ ಸಹ ಸರ್ಕಾರ ವಿಫಲವಾಗುತ್ತಿದೆ. ಭ್ರಷ್ಟಚಾರವನ್ನು ನಿರ್ಮೂಲನೆ ಮಾಡುತ್ತೇವೆ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿ, ಈಗ ಅವರು ಮಾಡುತ್ತಿರುವುದು ಸೊನ್ನೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಕೊನೆಗೆ ಬಿಎಂಐಸಿ ಯನ್ನು ಟೇಕ್–ಓವರ್ ಮಾಡುತ್ತೇವೆ ಎಂದು ಹೇಳಿದರು. ಎಲ್ಲಿ ಟೇಕ್–ಓವರ್ ಮಾಡಿದರು? ನಾವು ನೇರವಾಗಿ ಕೇಳಬೇಕಾಗುತ್ತದೆ. ಅಧಿಕಾರದ ಲಾಲಸೆಗೋಸ್ಕರ ತಮ್ಮ ಸಿದ್ಧಾಂತಗಳನ್ನು ತಾವು ಹೇಳಿದಂಥ ಮಾತುಗಳನ್ನು ನುಂಗಿಕೊಂಡು ಜೀವನ ಮಾಡತಕ್ಕಂಥ ಮಟ್ಟದಲ್ಲಿ ಈ ಸರ್ಕಾರ ನಡೆಯುತ್ತಿದೆ. ಈ ವಿಷಯದಲ್ಲೂ ಅಷ್ಟೇ, ಅವರಿಗೆ ನೈತಿಕತೆ ಎನ್ನುವುದೇನಾದರೂ ಇದ್ದರೆ, ಅವರು ಬಿ.ಜೆ.ಪಿ ಯವರಾಗಬಹುದು ಅಥವಾ ಜೆ.ಡಿ. (ಎಸ್) ನವರಾಗಬಹುದು, ಪಕ್ಷಗಳು ಎರಡಾಗಿದ್ದರೂ ನಮಗೆ ಅದು ಒಂದು ಸರ್ಕಾರವೇ. ಈ ವಿಷಯದಲ್ಲಿ ನೈತಿಕವಾಗಿ ಏನಾದರೊಂದು ದಿಟ್ಟ ಕ್ರಮ ಕೈಗೊಳ್ಳದಿದ್ದರೆ, ಇವರು ಕೇವಲ ಅಧಿಕಾರದ ಆಸೆಗೋಸ್ಕರ ಎಲ್ಲವನ್ನೂ ನುಂಗಿಕೊಂಡು ಜೀವನ ಮಾಡುತ್ತಾರೆ, ಅಧಿಕಾರವನ್ನು ಕೈಯಲ್ಲಿ ಹಿಡಿಯಲು ಆ ರೀತಿ ಮಾಡುತ್ತಾರೆ ಎನ್ನುವ ಅಭಿಪ್ರಾಯ ನಮ್ಮಲ್ಲಿ ಇದೆ, ಅದು ಸಾರ್ವಜನಿಕರಲ್ಲೂ ಬರುತ್ತಿದೆ. ಎರಡು ದಿನಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಇನ್ನೊಂದು ಹೇಳಿಕೆ ಕೊಟ್ಟರು, ಗಣಿಗಾರಿಕೆಯನ್ನು ನಿಷೇಧ ಮಾಡುತ್ತೇವೆ ಎಂದು ಹೇಳಿದರು. ಅದನ್ನಾದರೂ ಮಾಡಿ. ನಾವೇನೂ ಬೇಡ ಎಂದು ಹೇಳಿದ್ದೇವೆಯೇ? ಅಕ್ರಮವಾಗಿ ಏನೇನು ನಡೆಯುತ್ತಿದೆ, ಅದನ್ನಾದರೂ ನಿಷೇಧ ಮಾಡಿ. ಎಲ್ಲಿ ಮಾಡಿದಿರಿ ನೀವು? ದಿನಾ ಹೇಳಿಕೆಗಳು ಆದವೇ ಹೊರತು ನಿಜವಾಗಿಯೂ ಒಂದು ವಿಷಯದಲ್ಲೂ ಕ್ರಮ ತೆಗೆದುಕೊಂಡಿಲ್ಲ. ಜನ ಏನು ಮಾತನಾಡುತ್ತಾರೆ ಎನ್ನುವುದನ್ನು ಮಾನ್ಯ ಸೋಮಣ್ಣನವರು ಹೇಳುತ್ತಿದ್ದಾರೆ. ಒಂದೊಂದು ಸ್ಟೇಟ್‌ಮೆಂಟ್‌ಗೂ ವಿಷಯ

ಇನ್ನೊಂದು ಸ್ವಲ್ಪ ಜಾಸ್ತಿಯಾಗುತ್ತದೆಯೇ ಹೊರತು ಬೇರೆ ಏನೂ ವ್ಯತ್ಯಾಸವಿಲ್ಲ ಎಂದು ಸೋಮಣ್ಣನವರು ಹೇಳುತ್ತಿದ್ದಾರೆ. ಜನರು ಇವತ್ತು ಬೀದಿಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಸರ್ಕಾರಕ್ಕೆ ಇದ್ದಂಥ ಗೌರವ ಏನಾಗಿದೆ? ಸ್ವಲ್ಪ ದಿನ ನಿಮಗೆ ಒಳ್ಳೆಯ ಹೆಸರು ಬಂದಿತ್ತು, ಇವತ್ತು ಅದು ಎಲ್ಲಿ ಹೋಯಿತು, ನೀವು ತೆಗದುಕೊಳ್ಳತಕ್ಕಂಥ ಕ್ರಮಗಳೇನು ಎಂದು ನಮ್ಮ ವಿರೋಧ ಪಕ್ಷದ ನಾಯಕರು ಬೆಳಿಗ್ಗೆ ಹೇಳಿದರು. ಹಾಗೆ, ಇವತ್ತು ಬೀದಿಬೀದಿಯಲ್ಲಿ ಜನರು ಮಾತನಾಡತಕ್ಕಂಥ ಮಟ್ಟಕ್ಕೆ ಈ ಸರ್ಕಾರ ಬಂದಿದೆ ಎಂದು ಹೇಳುತ್ತೇನೆ. ಕೊನೆಗೆ, ನಾನು ಹೇಳಬಯಸುವುದು ಇಷ್ಟೇ. ಇವತ್ತು ನಮ್ಮ ಎಲ್ಲಾ ರಾಜಕಾರಣಿಗಳ ಮೇಲೆ, ರಾಜಕೀಯ ವ್ಯವಸ್ಥೆಯ ಮೇಲೆ ಕಪ್ಪು ಮೋಡ ಕವಿದಿದೆ. ಈ ವಿಷಯದಲ್ಲಿ ಎಂದು ಅಲ್ಲ. ಸಾಮಾನ್ಯವಾಗಿ ಅದು ದಿನದಿಂದ ದಿನಕ್ಕೆ ದೊಡ್ಡದಾಗಿ ಬೆಳೆಯುತ್ತಿದೆ. ಇವತ್ತು ನಮ್ಮೆಲ್ಲರನ್ನೂ ಸಾರ್ವಜನಿಕರು ಹಾಗೂ ಪ್ರತಿಯೊಬ್ಬರೂ ಸಂಶಯದಿಂದ ನೋಡತಕ್ಕಂಥ ವಾತಾವರಣ ಸೃಷ್ಟಿಯಾಗಿದೆ. ಬಿಎಂಐಸಿ ವಿಷಯದಲ್ಲಿ ನಾವು ಏನು ನಿರೀಕ್ಷೆ ಮಾಡಿದ್ದೆವು ಅದು ಆಗಲಿಲ್ಲ. ಅದರ ಬಗ್ಗೆ ಸರ್ಕಾರದವರೇ ಕೊಟ್ಟಂಥ ನಿರೀಕ್ಷೆಗಳು ಈಡೇರಿಲಿಲ್ಲ. ಕನಿಷ್ಟ ಈ ವಿಷಯದಲ್ಲಾದರೂ ಸರ್ಕಾರ ದಿಟ್ಟ ಕ್ರಮವನ್ನು ಕೈಗೊಂಡು ಹಣ ಹಸ್ತಾಂತರವಾಗಿದೆಯೋ, ಇಲ್ಲವೋ ಎಂದು ಸ್ಪಷ್ಟೀಕರಣಕೊಟ್ಟು, ಆ ವಿಷಯದ ಬಗ್ಗೆ ಸಿಬಿಐ ತನಿಖೆಗೆ ಕೊಡದೇ ಹೋದಲ್ಲಿ ಸರ್ಕಾರ ಸಂಪೂರ್ಣ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ. ಹಾಗೂ ಜನ ರಾಜಕೀಯ ವ್ಯವಸ್ಥೆಯ ಬಗ್ಗೆ ಏನೊಂದು ಅಭಿಪ್ರಾಯವನ್ನು ಇಟ್ಟುಕೊಳ್ಳುತ್ತಿದ್ದಾರೆ, ಅದು ಸ್ಪಷ್ಟವಾದ ಹಾಗೆ ಆಗುತ್ತದೆ. ಒಬ್ಬ ಮುಖ್ಯಮಂತ್ರಿಗಳನ್ನು ಬ್ಲಾಕ್‌ಮೇಲ್ ಮಾಡತಕ್ಕಂಥ ವ್ಯವಸ್ಥೆ ನಿರ್ಮಾಣವಾಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ರೀತಿಯಾದರೆ ಯಾರು ಗೌರವ ಕೊಡುತ್ತಾರೆ ಸ್ವಾಮಿ? ಅದನ್ನಾದರೂ ಅವರು ದಿಟ್ಟವಾಗಿ ತೆಗೆದುಕೊಳ್ಳಬೇಕಾದಂಥ ಸಂದರ್ಭ ಒದಗಿ ಬಂದಿದೆ. ಈ ವಿಷಯದಲ್ಲಿ ಏನು ನಡೆದಿದೆ ಎನ್ನುವುದನ್ನು ಸ್ಪಷ್ಟೀಕರಣಗೊಳಿಸಬೇಕು ಹಾಗೂ ತಪ್ಪದೇ ಇದನ್ನು ಸಿಬಿಐ ಎನ್‌ಕ್ವೈರಿಗೆ ವಹಿಸಿಕೊಡಬೇಕು. ಸತ್ಯಾಂಶ ಏನು ಎನ್ನುವುದು ಆಚೆ ಬರಲಿ ಎನ್ನುವ ಉದ್ದೇಶದಿಂದ ಇದನ್ನು ಹೇಳುತ್ತಿದ್ದೇವೆ ಎಂದು ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಗಳಿಗೆ ಬದ್ಧರಾದರೆ ಸರ್ಕಾರದಲ್ಲಿ ಎಷ್ಟೋ ವಿಶ್ವಾಸ ಮೂಡಿಬರುತ್ತದೆ ಎಂದು ಹೇಳುತ್ತಾ, ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ತಿಳಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.